
ಕಲ್ಯಾಣ ಕಿರಣ

ಆಗಸ್ಟ್ 2004 ಬೆಲೆ ರೂ. 5-00



ವಿಶ್ವ ಗುರು ಬಸವಣ್ಣನವರು



ಪವಿತ್ರ ಶ್ರಾವಣ ಮಾಸದ ನಿಮಿತ್ತ ಬೆಂಗಳೂರು ಬಸವ ಮಂಟಪದಲ್ಲಿ 8 ವಾರಗಳ ಕಾಲ ಆಯೋಜಿಸಲಾಗಿರುವ ವಿಶ್ವಧರ್ಮ ಪ್ರವಚನ ಕಾರ್ಯಕ್ರಮದಲ್ಲಿ ಪ್ರವಚನ ಮಾಡುತ್ತಿರುವ ಪ್ರಪ್ರಥಮ ಮಹಿಳಾಜಗದ್ಗುರು ಮಾತೆ ಮಹಾದೇವಿಯವರು



ಶ್ರಾವಣ ಮಾಸದ ನಿಮಿತ್ತ ಬೆಂಗಳೂರು ಬಸವ ಮಂಟಪದಲ್ಲಿ ಆಯೋಜಿಸಲಾಗಿರುವ ವಿಶ್ವಧರ್ಮ ಪ್ರವಚನ ಕಾರ್ಯಕ್ರಮದಲ್ಲಿ ಪೂಜ್ಯರ ಪ್ರವಚನ ಪಾನನಿರತರಾಗಿರುವ ಬಸವ ಧರ್ಮ ಪೀಠದ ಚರಜಂಗಮಮೂರ್ತಿಗಳು

ಓಂ ಶ್ರೀ ಗುರುಬಸವಲಿಂಗಾಯ ನಮಃ
866666

ಓಂಕಾರ ಸ್ವರೂಪಿಯಾದ ಲಿಂಗದೇವನಿಗೂ, ಲಿಂಗದೇವನ ಪ್ರತಿನಿಧಿಯಾದ ಗುರು ಬಸವಣ್ಣನವರಿಗೂ ನಮನಗಳು

8	6	6	6	6	6
ಅಷ್ಟಾವರಣ	ಷಡಾಚಾರ	ಷಟಸ್ಥಲ	ಷಟ್‌ಸೂತ್ರ,	ಷಟ್‌ಶೀಲ	ಷಟ್‌ಕ್ರಿಯೆ

ಬಸವ ಲಿಂಗೈಕ್ಯ ಶ್ರದ್ಧಾಂಜಲಿ

"ಯೋ ದೇಹಿರೂಪಃ ಪರಮಸ್ಸುಖೋऽಪಿ
ಯೋ ಭೂಷಭೂಷಃ ಪರಮಾತ್ಮ ಲಿಂಗಂ ।
ಯೋ ಲೋಕನಾಥೋ ಮಮ ಲೋಕದಾಯೀ
ಯೋ ದೇಹಿದೇಹೋ ಮಮ ದೇಹಶೇಷಃ ॥" ಎಂದೆನಿಸಿದ ಬಸವಾ,
ಎಲ್ಲ ಲೋಕತ್ರಯಪ್ರತಿಪಾದಿತ ಶಬ್ದದಲ್ಲಿ ಘನಗಂಭೀರವಾದ ಬಸವಾ,
ಬಕಾರಸಂಬಂಧ ಬಹುಧಾಮರೂಪ ಬಸವಾ, ನೀನೆಲ್ಲಡಗಿದೆಯೊ ಬಸವಾ ?
ಕಾಲಕಲ್ಪಿತನಷ್ಟವಾಗಿ ಕಾಲಕಲ್ಪಿತಂಗಳನರಿದೆಯೊ ಬಸವಾ ?
ಅರಿದ ಮೂರ್ತಿಯ ನಿಮ್ಮಲ್ಲಿ ಕುರುಹಿಟ್ಟುಕೊಂಡಿರೆ ಬಸವಾ,
ಇಷ್ಟಬ್ರಹ್ಮಾಂಡವ ಘಟ್ಟಿಗೊಳಿಸಿದಿರಿ ಬಸವಾ,
ಲಿಂಗದೃಷ್ಟಿಯ ರೂಪ ನಷ್ಟವ ಮಾಡಿದಿರಿ ತಂದೆ ಗುರುಬಸವಾ,
ಗುಣವೆಲ್ಲಡಗಿದವೊ ಬಸವಗುರುವೆ, ಮನವೆಲ್ಲಡಗಿತ್ತೋ ಮಹಾಬಸವಾ ?
ಕಾಯಗುಣ ಮನಸುಮನಂಗಳು ನಿಮ್ಮಲ್ಲಡಗಿದವೆ ಬಸವ ತಂದೆ ?
ಎನ್ನ ಪ್ರಾಣಪ್ರಸಾದವು ನಿಮ್ಮಲ್ಲಿ ತಲ್ಲೀಯವೆ ಬಸವ ತಂದೆ ?
ಎಲೆ ಬಸವಲಿಂಗವೆ, ಎನ್ನ ತಂದೆ ಕಪಿಲಸಿದ್ಧಮಲ್ಲಿನಾಥಯ್ಯಾ,
ಬಸವಾ ಬಸವಾ ಬಸವಾ ! - ಸಿದ್ಧರಾಮೇಶ್ವರ (ಸಿ.ವ : 972)

ಆಕಾರ ನಿರಾಕಾರವಾಯಿತ್ತಲ್ಲಾ ಬಸವಣ್ಣ
ಪ್ರಾಣ ನಿಃಪ್ರಾಣವಾಯಿತ್ತಲ್ಲಾ ಬಸವಣ್ಣ
ಲಿಂಗಜಂಗಮದ ಮಾಟ ಸಮಾಪ್ತಿಯಾಯಿತ್ತಲ್ಲಾ ಬಸವಣ್ಣ
ನಿಃಶಬ್ದ ವೇದ್ಯವಾದೆಯಲ್ಲಾ ಬಸವಣ್ಣ.
ಕಲಿದೇವರದೇವನ ಹೃದಯಕಮಲವ ಹೊಕ್ಕು,
ದೇವರಿಗೆ ದೇವನಾಗಿ ಹೋದೆಯಲ್ಲಾ ಸಂಗನ ಬಸವಣ್ಣ.
- ಮಡಿವಾಳ ಮಾಚಯ್ಯ (ಮ. ಮಾ. 489)

ಕಲ್ಯಾಣ ಕಿರಣ

ಸಂಪುಟ 35 | ಬಸವ ಶಕೆ 870 | ಆಜೀವ ಸದಸ್ಯತ್ವ 500 ರೂ.

ಸಂಚಿಕೆ 06 | ಆಗಸ್ಟ್ 2004 | ವಾರ್ಷಿಕ ಚಂದಾ 50/- ರೂ.

ಧರ್ಮ ಪ್ರಚಾರಕರಿಗೆ ತರಬೇತಿ ಕಾರ್ಯಕ್ರಮ

ಈಗಾಗಲೇ ಜುಲೈ ಸಂಚಿಕೆಯಲ್ಲಿ ಪ್ರಕಟಿಸಿದ್ದಂತೆ ಶರಣ. ಪ್ರಶಾಂತ ಪಾಟೀಲ್ ಇವರ ಮುಂದಾಳತ್ವದಲ್ಲಿ ಕುಷ್ಟಗಿ, ಯಲಬುರ್ಗಾ ಮುಂತಾದ ತಾಲ್ಲೋಕುಗಳಿಂದ ಸುಮಾರು 25 ಜನರನ್ನು ಧರ್ಮ ಪ್ರಚಾರ ಕಾರ್ಯಕ್ಕಾಗಿ ಆಯ್ಕೆ ಮಾಡಲಾಗಿದ್ದು ಇವರುಗಳಿಗೆ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರಿನ ಬಸವ ಮಂಟಪದಲ್ಲಿ ದಿ. 10-8-2004 ರಿಂದ 10 ದಿವಸಗಳ ಕಾಲ ಆಯೋಜಿಸಲಾಗಿದೆ. ಒಂದು ವರ್ಷ ಈ ಪ್ರಯೋಗ ಮಾಡಿ, ಇದು ಪ್ರಯೋಜನಕಾರಿ ಎನ್ನಿಸಿದರೆ ಮುಂದುವರಿಸಿ, ಹೆಚ್ಚಿನ ಪ್ರಮಾಣಕ್ಕೆ ವಿಸ್ತರಿಸುವ ಸಂಕಲ್ಪ ಮಾಡಲಾಗಿದೆ. ಈ ಕಾರ್ಯಕ್ಕೆ ತನು-ಮನ-ಧನಗಳಿಂದ ಶರಣ ಬಂಧುಗಳು ಸಹಕರಿಸುವಿರಾಗಿ ನಂಬುತ್ತೇವೆ. (ಪುಟ 18 ನೋಡಿರಿ)

- ಮಾತಾಜಿ, ಬಸವ ಧರ್ಮ ಪೀಠ

KALYANA KIRANA- Reg No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalagodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಮಾಚಿ ತಂದೆಯ ಸ್ವಗತ

- ಮಾತಾಜಿ

ಉದಾಸೀನಂ ಮಾಡಿದರೆಂದು ಬೆಂಬೀಳುವರೆ ಅಯ್ಯಾ ಬಸವಣ್ಣಾ.
ಎನ್ನ ಕಾಯದೊಳಗೆ ನಿನ್ನ ಕಾಯವಿಪ್ಪುದು ಬಸವಣ್ಣಾ.
ಎನ್ನ ಜೀವದೊಳಗೆ ನಿನ್ನ ಜೀವವಿಪ್ಪುದು ಬಸವಣ್ಣಾ.
ಎನ್ನ ಭಾವದೊಳಗೆ ನಿನ್ನ ಭಾವವಿಪ್ಪುದು ಬಸವಣ್ಣಾ.
ಎನ್ನ ಕರಣ, ನಿನ್ನ ಕರಣ ಬಸವಣ್ಣಾ.
ಆನು ನೀನಾದ ಕಾರಣ ರೂಪಿಂಗೆ ಕೇಡುಂಟು.
ನಿರೂಪು ಕರ್ಪುರ ಅಗ್ನಿ ಬಸವಣ್ಣಾ.
ಚಿಂತಿಸುವರೆ ದೇವರದೇವ ಕಲಿದೇವಾ. - ಮಾಚಿದೇವರು, 521, ಪುಟ 199

ಇದು ಬಹಳ ಮಹತ್ವಪೂರ್ಣ ವಚನ. ಎಲ್ಲ ಶರಣರು ಬಸವಣ್ಣನವರನ್ನು ಪ್ರಾಣಕ್ಕಿಂತಲೂ ಪ್ರಿಯವಾಗಿ ಪ್ರೀತಿಸಿದ್ದಾರಾದರೂ ಧೀರ ಶರಣ ಮಡಿವಾಳ ಮಾಚಿದೇವರ ಪ್ರೀತಿ ಸಹಿತವಾದ ಭಕ್ತಿ ಅಪೂರ್ವ. ಕಾದರವಳ್ಳಿ, ಮುರುಗೋಡುಗಳಲ್ಲಿ ಶರಣರು ಮತ್ತು ಸೈನ್ಯದ ನಡುವಣ ಸಂಘರ್ಷದಲ್ಲಿ ಕಾದರವಳ್ಳಿಯಲ್ಲಿ ಸೈನ್ಯದ ಕೈ ಮೇಲಾಗಿ ಶರಣರು ಬಹಳ ಕಷ್ಟನಷ್ಟ ಅನುಭವಿಸಿದರು. ನಂತರ ಮುರುಗೋಡು ಬಳಿ ನಡೆದ ಯುದ್ಧದಲ್ಲಿ ಶರಣರ ಕೈಮೇಲಾಗಿ, ಸೈನ್ಯ ಹಿಮ್ಮೆಟ್ಟಿತು. ವಚನ ಸಾಹಿತ್ಯ ಸುರಕ್ಷಿತವಾಗಿ ಅರಣ್ಯ ಗರ್ಭವನ್ನು ಪ್ರವೇಶಿಸಿತು. ಶರಣರ ಮನಸ್ಸು ನಿರುಮ್ಮಳವಾಗಿ, ಮುಂದಿನ ನಡೆ ಸುಗಮ ಎನಿಸಿದಾಗ ಈ ಸುದ್ದಿಯನ್ನು ತಿಳಿಸಲು ಮಡಿವಾಳ ಮಾಚಿದೇವರು ಕೂಡಲ ಸಂಗಮಕ್ಕೆ ಬರುವರು. ಅಪ್ಪ ಬಸವಣ್ಣನವರ ಮುಂದೆ ಇಮ್ಮಡಿಸಿದ ಉತ್ಸಾಹದಿಂದ ಎಲ್ಲವನ್ನು ಹೇಳಬೇಕು ಎಂದು ಯುದ್ಧದಲ್ಲಿ ದೇಹ ಬಸವಳಿದಿದ್ದರೂ ಮಾನಸಿಕ ಉತ್ಸಾಹದಿಂದ ಪ್ರೇರೇಪಿತರಾಗಿ ಬಂದ ಮಾಚಿದೇವರ ಸ್ಫೂರ್ತಿ ಜಲ್ರನೆ ಜರಿಯಿತು ಬಸವ ಗುರುವಿನ ಲಿಂಗೈಕ್ಯ ಸುದ್ದಿ ತಿಳಿದು. ಧೀರ ಶರಣ, ಗಂಡೆದೆಯ ಭಂಟ ಮಾಚಿದೇವರು ನೀರಾಗಿ ಕರಗಿದರು. ಅವರಿಗೆ ಇನ್ನಷ್ಟು ಆಘಾತ ತಂದುದು ಮಡಿವಾಳ ಮಾಚಿದೇವರ ''ದುಡುಕುತನ''ದ ಬಗ್ಗೆ ಧರ್ಮಪಿತರು ಲಿಂಗೈಕ್ಯರಾಗುವ ಮೊದಲು ನೊಂದುಕೊಂಡುದು !

ಅರಸು ವಿಚಾರ, ಸಿರಿಯು, ಶೃಂಗಾರ ಸ್ಥಿರವಲ್ಲ ಮಾನವ
ಕೆಟ್ಟಿತ್ತು ಕಲ್ಯಾಣ ಹಾಳಾಯಿತ್ತು ನೋಡಾ!
ಒಬ್ಬ ಜಂಗಮದ ಅಭಿಮಾನದಿಂದ,
ಜಗದೇವ ಮೊಲ್ಲೆ ಬೊಮ್ಮಣ್ಣಗಳ ಕೈಯಲ್ಲಿ
ಮಡಿದಿಹನು ಬಿಜ್ಜಳನು. ಚಾಳುಕ್ಯರಾಯನ ಆಳಿಕೆ ತೆಗೆಯಿತು!
ಸಂದಿತ್ತು, ಲಿಂಗದೇವಾ, ನಿಮ್ಮ ಕವಳಿಗೆಗೆ - ಬ.ವ.ದೀ 623

ಧರ್ಮಪಿತರು ಬರೆದಿಟ್ಟ ವಚನ ಕಣ್ಣಿಗೆ ಬಿದ್ದಿತು. ''ಒಬ್ಬ ಜಂಗಮದ ಅಭಿಮಾನದಿಂದ'' ಎಂಬ ಪದ ಪುಂಜ ಅವರ ಹೃದಯಕ್ಕೆ ನಾಟಿತು. ಆದರೂ ಅವರ ಅಂತರಾತ್ಮವು ಬೇಗುದಿಗೊಳ್ಳಲಿಲ್ಲ.

ಪರಿಸ್ಥಿತಿ ಹೇಗೆ ಒದಗಿ ಬಂದು ಬಿಜ್ಜಳನ ವಧೆಗೆ ಪ್ರೇರಣೆಯನ್ನು ತಾವು ನೀಡಲೇಬೇಕಾಯಿತು ಎಂಬುದನ್ನು ಧರ್ಮಪಿತರ ಮುಂದೆ ಹೇಳಿ ಅವರಿಗೆ ಸಮಾಧಾನ ಮಾಡಿ, ತಾವೂ ಸಮಾಧಾನ ತಂದುಕೊಳ್ಳಬೇಕು ಎಂಬ ಮಾಚಿದೇವರ ಬಯಕೆ ಕೈಗೂಡಲಿಲ್ಲದ್ದಕ್ಕಾಗಿ ಅವರಲ್ಲಿ ಖಿನ್ನತೆ ಉಂಟಾಯಿತು. ಬಿಜ್ಜಳನು ಪ್ರತ್ಯಕ್ಷ ಅನುಯಾಯಿಯಾಗದಿದ್ದರೂ ಪರೋಕ್ಷವಾಗಿ ಬಸವ ಧರ್ಮದ ಪ್ರೋತ್ಸಾಹಕ ಶಕ್ತಿಯಾಗಿದ್ದ. ಹೀಗಾಗಿ ಆತ ಜೀವಂತವಾಗಿದ್ದರೆ ಶರಣರ ಮೇಲೆ ಘೋರ ದೌರ್ಜನ್ಯವೆಸಗಲು ಅವಕಾಶ ನೀಡನು ಎಂದೇ ಭಾವಿಸಿದ್ದ ಬಸವಣ್ಣನವರು ಚನ್ನಬಸವಣ್ಣನವರ ಎಳೆಯ ಹೆಗಲ ಮೇಲೆ ಸಾಹಿತ್ಯ ಮತ್ತು ಶರಣರ ಸಂರಕ್ಷಣೆಯ ಜವಾಬ್ದಾರಿವಹಿಸಿ ಗಡಿಪಾರು ಸ್ವೀಕರಿಸಿ ಕಲ್ಯಾಣವನ್ನು ತೊರೆದಿದ್ದರು.

ಹರಳಯ್ಯ-ಮಧುವರಸರಿಗೆ ಎಳೆಹೂಟೆ ಶಿಕ್ಷೆ ನೀಡಿ ಮತಾಂಧರು ಅವರ ಸಾವಿಗೆ ಕಾರಣರಾದಾಗ ಮತಿಭ್ರಾಂತನಾದ ಸ್ಥಿತಿಯಲ್ಲಿದ್ದ ಬಿಜ್ಜಳನ ಮೌನ ಸಮ್ಮತಿಯೇ ಶರಣರ ವಧೆಗೆ ಕಾರಣವೆಂದು ಮಡಿವಾಳ ಮಾಚಿದೇವರು ರೊಚ್ಚಿಗೆ ಎದ್ದರು. ಇನ್ನೂ ತಾಳುವ ಸಹನೆ ಹೇಡಿತನ ಮಾತ್ರ ಎಂದು ಭಾವಿಸಿದರು. ಬಸವಣ್ಣನವರು ಗಡಿಪಾರು ಸ್ವೀಕರಿಸಿ ಹೊರಡುವಾಗ ಶರಣರ ರಕ್ಷಣೆ ಮಾತ್ರವಲ್ಲ ಬಿಜ್ಜಳನ ಜೀವರಕ್ಷಣೆಯೂ ಅಷ್ಟೇ ಮುಖ್ಯ ಎಂದು ಮಾತುತೆಗೆದುಕೊಂಡಿದ್ದರಿಂದ ಮಾಚಿದೇವರ ಕೈಕಟ್ಟಿಹಾಕಲ್ಪಟ್ಟಂತೆ ಆಗಿತ್ತು. ಆದರೆ ಅದೇ ಸಮಯಕ್ಕೆ ಅತೃಪ್ತ ರಾಜಕೀಯ ಸಾಮಂತರಾಗಿ ಚಾಲುಕ್ಯನಿಷ್ಠರಿದ್ದ ಜಗದೇವ, ಮಲ್ಲಣ್ಣ, ಬೊಮ್ಮಣ್ಣ ಕಾರಾಗೃಹ ಬಂಧನದಿಂದ ತಪ್ಪಿಸಿಕೊಂಡು ಬಂದಾಗ ಮಾಚಿದೇವರು ಬಿಜ್ಜಳನ ಆಕ್ರಮಣಗಳಿಗೆ ಕೊನೆಹಾಕಲು ಅವರಿಗೆ ಪ್ರೇರಣೆ ನೀಡಿದರು. ಮತಿಭ್ರಾಂತನಾಗಿದ್ದ ಬಿಜ್ಜಳನನ್ನು ಅವರು ಹತ್ಯೆ ಮಾಡಿದರು. **"ಒಬ್ಬ ಜಂಗಮದ ಅಭಿಮಾನದಿಂದ"** ಎಂಬ ಮೂರು ಪದಗಳು ಧೀರ ಶರಣ ಮಡಿವಾಳ ಮಾಚಿದೇವರನ್ನೇ ಬೊಟ್ಟು ಮಾಡಿ ತೋರಿಸುತ್ತವೆ. ಮಾಚಿದೇವರ ಈ ಪ್ರಚೋದನೆ ತಪ್ಪೆಂದು ನಮಗನಿಸದು. ಆದರೆ ಬಸವಣ್ಣನವರಿಗೆ ಕಲ್ಯಾಣದಲ್ಲಿ ಧಾವಿಸಿ ಬಂದ ಪ್ರಸಂಗಗಳ ಒತ್ತಡ ತಿಳಿದುಬರದೆ ತಮ್ಮ ಆಶಯಕ್ಕೆ ವಿರುದ್ಧವಾಗಿ ಬಿಜ್ಜಳನ ವಧೆಯಾದುದು ಖಿನ್ನತೆಯನ್ನು ಉಂಟು ಮಾಡಿತು. ಹೀಗಾಗಿ ಬಿಜ್ಜಳನ ಸಾವಿನ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುತ್ತಾರೆ. ಬಿಜ್ಜಳನನ್ನು ಕೊಂದವರು ಜಗದೇವ, ಮಲ್ಲಣ್ಣ, ಬೊಮ್ಮಣ್ಣ ಎಂಬುದು ಅವರ ಗಮನಕ್ಕೆ ಬಂದಿದೆ. ಆದರೆ ಇದಕ್ಕೆ ಯಾರೋ "ನಮ್ಮವರೇ" ಪ್ರೇರಕರಾಗಿದ್ದಾರೆ ಎನ್ನಿಸಿದೆ. ಯಾರು ಎಂಬುದು ಖಚಿತವಾಗಿಲ್ಲದಿರಬಹುದು. ಅಥವಾ ತಮ್ಮ ಪ್ರೀತಿಪಾತ್ರರಾದ ಮಡಿವಾಳ ಮಾಚಿದೇವರು ಎಂಬುದು ತಿಳಿದು ಹೇಳಲು ಇಷ್ಟವಿಲ್ಲದೆ "ಒಬ್ಬ ಜಂಗಮ ಅಭಿಮಾನದಿಂದ" ಎಂದು ಹೇಳಿದಂತೆ ತೋರುತ್ತದೆ.

ಬಿಜ್ಜಳನು ನೇರವಾಗಿ ಬಸವಣ್ಣನವರ ಗಡಿಪಾರಿನ ಮತ್ತು ಹರಳಯ್ಯ-ಮಧುವರಸರ ಎಳೆಹೂಟೆಯ ಆಜ್ಞೆಯನ್ನು ನೀಡಿಲ್ಲವಾದರೂ ಕ್ರೂರಿಗಳು, ಕುತಂತ್ರಿಗಳೂ ಆದವರ ಕೈಯಲ್ಲಿ ಅಧಿಕಾರ ಕೊಟ್ಟು 'ಮೌನ' ಪ್ರೇರಕನಾದುದು, ಮಡಿವಾಳ ಮಾಚಿದೇವರು ಕೋಪಗೊಳ್ಳಲು ಕಾರಣವಾಯಿತು. ಹೀಗಾಗಿ ತಮ್ಮ ಕೋಪ-ಆಕ್ರೋಶಗಳನ್ನು ಸಮರ್ಥಿಸಿಕೊಳ್ಳುವ ಉತ್ಸಾಹದಿಂದಲೇ ಬಂದರು. ಇವರ ಅಳಲನ್ನು ಕೇಳಿ ಸಾಂತ್ವನಿಸುವ ಧರ್ಮಪಿತರು ಲಿಂಗೈಕ್ಯರಾದುದು ತಿಳಿದು

ಬರಸಿಡಿಲು ಎರಗಿದಂತಾಗಿ ಮಾಚಿದೇವರು ದಿಗ್ಭ್ರಾಂತರಾದರು. ಆಗ ಹೇಳುತ್ತಾರೆ: "ನಿನ್ನ (ಬಿಜ್ಜಳನ ಹತ್ಯೆ ಆಗಬಾರದು ಎಂಬ) ಆದೇಶವನ್ನು ನಾನು ಉದಾಸೀನ ಮಾಡಿದೆ ಎಂದು ನೀನು ಆಘಾತಗೊಂಡು ನೊಂದುಕೊಳ್ಳಬಹುದೇ ಬಸವಣ್ಣ? (ನೀನು ಲಿಂಗೈಕ್ಯನಾಗಿ ಎಲ್ಲಿಯೂ ದೂರ ಹೋಗಿಲ್ಲ) ನನ್ನ ಕಾಯದೊಳಗೆ ನಿನ್ನ ಕಾಯ (ಅಡಗಿ) ಇರುತ್ತದೆ. ನನ್ನ ಜೀವ (ಪ್ರಾಣ) ದೊಳಗೆ ನಿನ್ನ ಜೀವ ನೆಲೆಸಿದೆ. ಎನ್ನ ಭಾವದೊಳಗೆ ನಿನ್ನ ಭಾವ ನೆಲೆಸಿದೆ. ನನ್ನ ಇಂದ್ರಿಯಗಳ ಮೂಲಕ ನಿನ್ನ ಇಂದ್ರಿಯಗಳು ಕೆಲಸ ಮಾಡುತ್ತಿವೆ. ರೂಪಿಗೆ ನಾಶವಿದೆ ಅದರಂತೆ ನಿನ್ನ ರೂಪು ಭೌತಿಕ ಜಗತ್ತಿನಿಂದ ಕಣ್ಮರೆಯಾಗಿದೆ. ನಿರೂಪವಾಗಿರುವ ಪರಮಾತ್ಮನೆಂಬ ಅಗ್ನಿಯಲ್ಲಿ ಕರ್ಪೂರದಂತೆ ಕರಗಿ ಹೋಗಿದೆ. ಆದ್ದರಿಂದ ನೀನು ದೂರವಾದೆ ಎಂದು ನಾನೇಕೆ ಭಾವಿಸಿ ದುಃಖಿಸಲಿ ? ಮೊದಲು ಸಾಕಾರ ಮೂರ್ತಿಯಾಗಿ ಖಂಡಿತವಾಗಿ ಪ್ರತ್ಯೇಕ ದೇಹಧಾರಿಯಾಗಿದ್ದೆ. ಆದರೆ ಈಗಲೋ ನಿರೂಪಿಯಾಗಿ ನನ್ನ ಸರ್ವಾಂಗದಲ್ಲೂ ಅಡಗಿದ್ದೀಯೆ! ಆದ್ದರಿಂದ ದೇವರೇ ನಾನಿನ್ನು ದುಃಖಿಸುವುದೇಕೆ ?" ಮಡಿವಾಳ ಮಾಚಿ ತಂದೆಯ ಭಾವನೆಗಳು ನಿರರ್ಗಳವಾಗಿ ಈ ವಚನದಲ್ಲಿ ಹರಿದಿರುವುದನ್ನು ಕಾಣಬಹುದು.

☹ ಸಮಸ್ಯೆ - ಸಮಾಧಾನ ☺

- ಸಿದ್ಧರಾಮ ಸೋಮಣ್ಣ ಪೂಜಾರಿ (ಗುಡ್ಡಾಪುರ), ಮೀರಜ್

? "ಓಂ ನಮಃ ಶಿವಾಯ" ಷಡಕ್ಷರಿ ಮಂತ್ರ. ವಚನ ವಾಙ್ಮಯದಲ್ಲಿ ಸಹ ಅದನ್ನೇ ಬಳಸಲಾಗಿದೆ. ನೀವು "ಓಂ ಲಿಂಗಾಯ ನಮಃ" ಬಳಕೆಗೆ ತಂದಿದ್ದೀರಿ. ಇದರ ಉದ್ದೇಶವೇನು ?

★ ಧ್ಯೇಯ ವಸ್ತು, ಸಾಧನ ಮತ್ತು ಅದಕ್ಕೆ ಸಂಬಂಧಿಸಿದ ಮಂತ್ರ ಒಂದೇ ಇರಬೇಕು. ಒಮ್ಮೆ ನಾನು ಓರ್ವ ವ್ಯಕ್ತಿಯನ್ನು ವೇದಿಕೆಗೆ ಕರೆಯಬೇಕಿತ್ತು. ಅದೇಕೋ ಅವರ ಹೆಸರು ಬೇರೆ ಹಿಡಿದು ಕರೆದೆ. ಸುಮ್ಮನೆ ಕುಳಿತಿದ್ದರು. ಕಡೆಗೆ ಕೈಸನ್ನೆ ಮಾಡಿದಾಗ, ಎದ್ದು ಬಂದರು. ನನ್ನ ಹೆಸರು ಅದಲ್ಲ, ಬೇರೆ ಯಾರೋ ಆ ಹೆಸರಿನವರನ್ನು ಕರೆಯುತ್ತಿರಬೇಕು ಎಂದು ಸುಮ್ಮನೆ ಕುಳಿತಿದ್ದೆ ಎಂದರು. ಹಾಗೆ ವಾಮದೇವ ಋಷಿಯು ದ್ರಷ್ಟಾರನಾಗಿ ನೀಡಿದ ಓಂ ನಮಃ ಶಿವಾಯ, ಐತಿಹಾಸಿಕ ಯುಗಪುರುಷ ಶಿವನಿಗೆ ಸಂಬಂಧಿಸಿದ್ದು. ದೇವಾಲಯದಲ್ಲಿರುವ ಸ್ಥಾವರಲಿಂಗವು ಶಿವ ಸೂಚಕ. ಆದ್ದರಿಂದ ಸ್ಥಾವರಲಿಂಗ ಅಥವಾ ಶಿವನನ್ನು ಪೂಜಿಸುವಾಗ **ಓಂ ನಮಃ ಶಿವಾಯ** ಸರಿ. ನಾವು ಪೂಜಿಸುವುದು ಸೃಷ್ಟಿಕರ್ತ ಲಿಂಗದೇವನ ಕುರುಹಾದ ಇಷ್ಟಲಿಂಗವನ್ನು. ಆದ್ದರಿಂದ 'ದೇವ' ಸೂಚಕವಾದ 'ಲಿಂಗ' ಪದವನ್ನು ಹೊಂದಿದ **ಓಂ ಲಿಂಗಾಯ ನಮಃ** ಸೂಕ್ತ.

ಇದಕ್ಕೆ ನನಗೆ ಸುಳಿವು(clue) ಕೊಟ್ಟಿದ್ದು ಶ್ರೀಗುರು ಬಸವ - ಲಿಂಗಾಯ ನಮಃ ಎಂಬ ವಿರಕ್ತರು ಸಾಂಪ್ರದಾಯಿಕವಾಗಿ ಬಳಸಿಕೊಂಡು ಬಂದಿರುವ ಮಂತ್ರ. ಇದರಲ್ಲಿ ಶ್ರೀಗುರು ಬಸವ - ಗುರು ಸೂಚಕ, ಲಿಂಗಾಯ ನಮಃ- ದೇವ ಸೂಚಕ. ಬಸವಣ್ಣನವರು ಪ್ರಣವದ ಪ್ರತಿನಿಧಿ; ದೇವರು ಪ್ರಣವ ಸ್ವರೂಪ. ಆದ್ದರಿಂದ ನಮಗೆ ಕೇವಲ ಕೆಳಗಿನವು ಮಾತ್ರ ಸ್ತೋತ್ರಾರ್ಹ ಮಂತ್ರಗಳು.

1. ಓಂ 2. ಓಂ ಲಿಂಗಾಯ ನಮಃ 3. ಓಂ ಶ್ರೀ ಗುರು ಬಸವ ಲಿಂಗಾಯ ನಮಃ

4. ಓಂ ಶ್ರೀ ಲಿಂಗದೇವಾಯ ನಮಃ. ಕ್ರಮವಾಗಿ 1,6,12,9 ಅಕ್ಷರಗಳ ಮಂತ್ರಗಳು. ಷಡಕ್ಷರಿಯು ಷಟ್‌ಚಕ್ರ ಸೂಚಕವಾದರೆ, ನವಾಕ್ಷರಿಯು ನವಚಕ್ರ ಸೂಚಕ.

ಹೀಗೇ ಓದುವಾಗ ಇಂದು (17-7-2004) ಬಸವಣ್ಣನವರು ಬರೆದ ಒಂದು ಗೀತೆ "ಜಯ ಜಯ ಶ್ರೀ ಮಹಾದೇವ" (ಪದ್ಯ 173, ಪುಟ 316, ಶಿವದಾಸ ಗೀತಾಂಜಲಿ) ಇದರ 2ನೆಯ ಚರಣದಲ್ಲಿ ತಪ್ಪೈ ಶ್ರೀ ಗುರವೇ "ಲಿಂಗಾಯ" ಶರಣೆಂಬುದೆನ್ನ ಮನವು ಎಂಬ ಪದ ಸಿಕ್ಕಿ ನನಗೆ ತುಂಬಾ ಸಂತೋಷವೆನಿಸಿತು. ಮೊದಲು ಮಿಂಚಿನ ಬೆಳಕು ಕಂಡು ನಂತರ ಗುಡುಗಿನ ಶಬ್ದ ಕೇಳುವಂತೆ, ಮೊದಲು ಧರ್ಮಪಿತರು ಪ್ರೇರಣೆ ನೀಡುವರು; ನಂತರ ಅದಕ್ಕೆ ಆಧಾರ ಒದಗಿಸುವರು. ಲಿಂಗದೇವ ಪದ ಮೊದಲು ಪ್ರೇರಣೆಯಾಗಿ ಬಂದಿತು. ನಂತರ ಲಿಂಗ, ಲಿಂಗಯ್ಯ ಎಂಬುದು ನೂರಾರು ಕಡೆ ಸಿಗುವುದರ ಜೊತೆಗೆ "ಲಿಂಗದೇವ" ಎಂಬ ಪದ ಬಸವಣ್ಣನವರ ವಚನಗಳಲ್ಲಿ 9 ಕಡೆ ಬಂದಿದೆ ಎಂಬುದು ಲಭ್ಯವಾಯಿತು. ಶಿವದಾಸ ಗೀತಾಂಜಲಿಯ 174ನೆಯ ಪದ್ಯದಲ್ಲಿ ಚನ್ನಬಸವಣ್ಣ ಹೀಗೆ ಪ್ರಯೋಗಿಸಿದ್ದಾರೆ, "ಆವಾವ ಪದಾರ್ಥ ತನ್ನ ಕಾಮಿಸಿ ಬಂದುದ, ಲಿಂಗದೇವಂಗಿತ್ತು". ಇತ್ತೀಚೆಗೆ ನಮ್ಮ ಮಠದವರು ಹಲಸೂರಿಗೆ ಹೋಗಿದ್ದರು. ಅಲ್ಲಿ 1918ರಲ್ಲಿ ಕಟ್ಟಲ್ಪಟ್ಟ ಬಸವ ಪ್ರಾರ್ಥನಾ ಮಂದಿರ ಎಂಬ ಕಟ್ಟಡವಿದ್ದು ಓಂ ಲಿಂಗಾಯ ನಮಃ ಮಂತ್ರವನ್ನು ಆಗಲೇ ಕಲ್ಲಿನಲ್ಲಿ ಕೆತ್ತಿಸಿ ಹಾಕಲಾಗಿದೆ ಎಂಬುದನ್ನು ತಿಳಿಸಿದರು.

– ಆರ್.ಎಸ್. ದೊಡ್ಡನಿ, ನವಲೂರು, ಧಾರವಾಡ

? ತಾವು ಮಾಡುತ್ತಿರುವ ಕಾರ್ಯ, ಕೈಗೊಂಡ ಯೋಜನೆ ಎಲ್ಲ ಅಭಿನಂದನಾರ್ಹ. ಅದಕ್ಕಾಗಿ ರೂ. 5000 ಕಾಣಿಕೆ ಕಳಿಸಿದ್ದೇನೆ. ಸ್ವೀಕರಿಸಿ. ಆದರೆ ಕೂಡಲಸಂಗಮದೇವಾ ಬದಲು ಲಿಂಗದೇವ ಬದಲಿಸಿದುದು ಅರಗಿಸಿಕೊಳ್ಳಲಾಗುತ್ತಿಲ್ಲ.

★ ಬಹುದೇವತೋಪಾಸನೆ, ಸ್ಥಾವರೋಪಾಸನೆ ಹಿಂದುಗಳಲ್ಲಿ ರಕ್ತಗತವಾಗಿ ಬಂದಿದೆ. ಏಕದೇವ ವಿಶ್ವಾಸ, ಏಕ(ಇಷ್ಟ)ಲಿಂಗ ನಿಷ್ಠೆ ಲಿಂಗಾಯತರಲ್ಲಿ ಆಳವಡಬೇಕಿತ್ತು. ಆದರೆ ಹಿಂದು ಪರಿಸರದಲ್ಲಿ ಇರುವ ಲಿಂಗಾಯತರಿಗೆ ಅದು ಅಳವಡುತ್ತಿಲ್ಲ. ಹೀಗಾಗಿ ವಚನ ಶಾಸ್ತ್ರದ ಪ್ರಕಾರ "ಲಿಂಗದೇವ"ನ ಪರಿಕಲ್ಪನೆ ಏನು ಎಂಬುದು ಅರಿತು, ಅಳವಡದವರೆಗೆ ಬದಲಾವಣೆಯನ್ನು ಅರಗಿಸಿಕೊಳ್ಳುವ ಮನೋಬಲ ಬೆಳೆಯದು. ಎಂತೆಂತಹ ಸ್ವಾಮಿಗಳು, ಮಠಾಧೀಶರೇ ಈ ವಿಷಯದಲ್ಲಿ ನವಗ್ರಹ, ಗಣಪತಿ ಉಪಾಸಕರಾಗಿ ಸೋತಿರುವಾಗ ಇನ್ನು ಸಾಮಾನ್ಯರ ಪಾಡೇನು!

– ದಾಸಪ್ಪ, ತಿಪಟೂರು

? ಬಸವ ಸಮಿತಿಯಲ್ಲಿ ಒಂದು ಸಭೆ ಸೇರಿತ್ತು. ಆಗ ನಾನು ನಮ್ರವಾಗಿ ಒಂದು ಸೂಚನೆ ಇಟ್ಟೆ. "ಇದು ಅರಿವಿನ ಮನೆ. ಬೂಟುಗಳನ್ನು, ಚಪ್ಪಲಿಗಳನ್ನು ಮೆಟ್ಟಿಕೊಂಡು ಬಂದು ಕುಳಿತು ಕೇಳುವುದು ಸೂಕ್ತವಲ್ಲ. ಒಬ್ಬರ ಹಣೆಯ ಮೇಲೂ ವಿಭೂತಿ ಇರದು. ವಿಭೂತಿಯನ್ನು ಕಡ್ಡಾಯವಾಗಿ ಹಚ್ಚಿರಬೇಕೆಂದು ನಿಯಮ ಹಾಕಬೇಕು" ಎಂದು ಹೇಳಿದೆ. ಕೆಲವರು ಉದಾಸೀನ ತೋರಿದರು; ಮತ್ತೆ ಕೆಲವರು ಸಿಟ್ಟಿಗೆದ್ದರು. ನನ್ನ ಸಲಹೆ ತಪ್ಪೇ?

★ ನಿಮ್ಮ ಸಲಹೆ ಸರಿ ಇದೆ. ಆದರೆ ಉತ್ತಮ ಸಲಹೆಗಳನ್ನು ಕೊಟ್ಟಾಗ ಅಳವಡಿಸಿಕೊಳ್ಳುವ

ಹಂಬಲ ಹೊಂದಿರುವವರು ಇಲ್ಲಿ ಇರುವರೇ ಇಲ್ಲವೆ? ಎಂಬುದನ್ನು ಅರಿಯುವಲ್ಲಿ ಮಾತ್ರ ನಿಮ್ಮಿಂದ ಎಡವಟ್ಟಾಗಿದೆ. ಪಂಡಿತರ ಕೂಟವೇ ಬೇರೆ ಅನುಭಾವಿಗಳ ಗೋಷ್ಠಿಯೇ ಬೇರೆ. ಪಂಡಿತರು ಧರ್ಮದ ಬಗ್ಗೆ ಚರ್ಚಿಸುತ್ತಾರೆ; ಅದರಂತೆಯೇ ನಡೆದುಕೊಳ್ಳಬೇಕೆಂದೇನೂ ಭಾವಿಸುವುದಿಲ್ಲ. ಅಂಥ ಪ್ರಸಂಗದಲ್ಲಿ ನಾವೇ ಸಮಾಧಾನ ಸ್ಫುರಣೆ ತಂದುಕೊಳ್ಳಬೇಕು. ಇಸ್ಪೀಟು, ಜೂಜು, ಕುಡಿತ ಮುಂತಾದ ಹವ್ಯಾಸದ ಬದಲು ಒಳ್ಳೆಯ ಜಾಗದಲ್ಲಿ ಕುಳಿತು ಒಳ್ಳೆಯ ಮಾತುಗಳನ್ನು ಕೇಳಿಸಿಕೊಳ್ಳುವರಲ್ಲ ಎಂದು ಸಂತೋಷಪಡಬೇಕು.

– ರಾಜೇಶ್ವರಿ ಪಾಟೀಲ್, ರಾಯಚೂರು

? ರಾಯಚೂರಿನ ರೈತ ಸಂಘದವರು ಧುರೀಣರು, ಮಹಿಳೆಯರು ಎಲ್ಲರೂ ಸೇರಿ ಜೂನ್ 28 ರಂದು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಥೇಟ್ ಅವರನ್ನೇ ಹೋಲುವಂತೆ ಪ್ರತಿಕೃತಿ ಮಾಡಿ, ಕುರ್ಚಿಯಲ್ಲಿ ಕುಳ್ಳಿರಿಸಿ ವಚನ ಭ್ರಷ್ಟರು, ವಂಚಕರು ಎಂದು ದೂಷಿಸಿ ತಾಂಬೂಲವನ್ನು ಜಗಿದು ಉಗುಳುತ್ತಿದ್ದರು. (ರಾಯಚೂರು ವಾಣಿ, ವಿಜಯ ಕರ್ನಾಟಕ 29-6-2004ರ ಪತ್ರಿಕೆಗಳಲ್ಲಿ ಫೋಟೋ ಪ್ರಕಟವಾಗಿದೆ) ಪ್ರಜಾಪ್ರಭುತ್ವಕ್ಕೆ ಇದು ಶೋಭೆ ತರುವಂಥದೆ?

★ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವುದೇ ಅರ್ಥರಹಿತ. ರೈತ ಸಂಘದವರು ತಮ್ಮ ಅಸಹನೆ, ನೋವು ತೋಡಿಕೊಳ್ಳಲು ಬೇರಿನ್ನಾವ ಮಾರ್ಗವಿದೆ? ಉಪವಾಸ, ಧರಣಿ ಕುಳಿತರೆ ಎಷ್ಟು ದಿನ ಕಳೆದರೂ ಸಚಿವರು ಕಣ್ಣೆತ್ತಿ ನೋಡರು. ಚಳುವಳಿ ಮಾಡಿದರೆ ಪೋಲೀಸರಿಂದ ಲಾಠಿ ಏಟು ಬೀಸುವರು, ಗೋಲಿಬಾರ್ ಮಾಡಿಸುವರು. ಮೊದಲ ಕಲ್ಯಾಣ ಪರ್ವದಲ್ಲಿ ಪೋಲೀಸರಿಂದ ಭಯಂಕರ ದಬ್ಬಾಳಿಕೆ ಮಾಡಿಸಿದರು. ಜನಹಿತಕ್ಕಿಂತ ಎಸ್.ಎಂ.ಕೃಷ್ಣಗೆ ರಾಜಕೀಯವಾಗಿ ಇಂದು ಮೂಲೆ ಸೇರಿರುವ ಭೀಮಣ್ಣ ಖಂಡ್ರೆ, ಡಾ|| ಮಲಕರೆಡ್ಡಿಯ ಒತ್ತಡವೇ ಮುಖ್ಯವಾಯಿತು. ಪ್ರಜಾಪ್ರಭುತ್ವದಲ್ಲಿ ಊಹೆ ಸಹ ಮಾಡಲಾರದಷ್ಟು ದಬ್ಬಾಳಿಕೆಯನ್ನು ಪೋಲೀಸರು ಅದೂ ಸಾತ್ವಿಕ ಜನರ ಮೇಲೆ ಪ್ರದರ್ಶಿಸಿದರು. ಬಹುಶಃ ಅದೇ ಪಾಪ ಕರ್ಮದ ಫಲವಿರಬೇಕು, ಎಸ್.ಎಂ.ಕೃಷ್ಣಾ ಅವರು (ಪ್ರತಿಕೃತಿ) ರೈತ ಸಂಘದವರ ತಾಂಬೂಲ ರಸದಲ್ಲಿ ಮಿಂದಿರುವುದು.

– ಬಸಗೌಡ ಪಾಟೀಲ್, ನಿಗಡಿ, ಪೂನಾ

? ಇಡೀ ಜಗತ್ತೆಲ್ಲ ಬಸವಣ್ಣನವರ ವ್ಯಕ್ತಿತ್ವವನ್ನು ಅರಿತು ಕೊಂಡಾಡುತ್ತಿರುವಾಗ ಬಸವಣ್ಣನವರನ್ನು ವೈಭವೀಕರಿಸುವುದು ಸಲ್ಲದು ಎಂದು ಪಂಚಪೀಠಾಧೀಶರೇಕೆ ಹೇಳುತ್ತಾರೆ? ಬಸವಣ್ಣನವರನ್ನು ಅವರ ಪಾಡಿಗೆ ಏಕೆ ಇವರು ಬಿಡುವುದಿಲ್ಲ? ಹಾಗೆಯೇ ವೀರಶೈವ ಮತ್ತು ಲಿಂಗಾಯತವನ್ನು ಏಕೆ ಸಮೀಕರಿಸುತ್ತಾರೆ? ನಾವು ವೀರಶೈವದ ತಂಟೆಗೆ ಹೋಗದಿದ್ದರೂ ಅವರೇಕೆ ಲಿಂಗಾಯತಕ್ಕೂ ಬಂದು ಗಂಟು ಬೀಳುತ್ತಾರೆ?

★ ಕಲ್ಲಿನ ಹರಳನ್ನು ಮಾರಲು ಹೋದರೆ ಯಾರು ಕೊಳ್ಳುತ್ತಾರೆ? ಕೊಂಡರೂ ಅದಕ್ಕೆ ಇರುವ ಬೆಲೆ ಕಲ್ಲಿನದು. ಅಕ್ಕಿಯ ಒಳಗೆ ಸೇರಿಸಿ ಮಾರಿದರೆ ಅದಕ್ಕೆ ಅಕ್ಕಿಯ ಬೆಲೆ ಸಿಗುತ್ತದೆ. ಐತಿಹಾಸಿಕ ಆಧಾರ, ಸಾಹಿತ್ಯದ ಬಲ, ಪರಂಪರೆಯ ಸತ್ಯ ಇಲ್ಲದೆ ಅತಾರ್ಕಿಕ ಪಂಚಾಚಾರ್ಯವಾದವನ್ನು, ವೀರಶೈವವಾದವನ್ನು ಅವರ ಮೂಢ ಭಕ್ತರು ಬಿಟ್ಟರೆ ಯಾರೂ ಒಪ್ಪುವುದಿಲ್ಲ. ಅದಕ್ಕಾಗಿ ಬಸವ

ಸಂದೇಶದ ಲಿಂಗಾಯತ ಧರ್ಮದೊಳಕ್ಕೆ ವೀರಶೈವ ಪದ ತೂರಿಸಿ ಅದಕ್ಕೆ ಜೀವಂತಿಕೆ ತುಂಬಲು ಯತ್ನಿಸುತ್ತಾರೆ.

– ಸಿದ್ಧರಾಮಪ್ಪ ಯರಮರಸ್, ರಾಯಚೂರು

? ನಾನು ಒಂದು ಪುಸ್ತಕ "ಶ್ರೀ ಸಿದ್ಧಾಂತ ಶಿಖಾಮಣಿ ತಾತ್ಪರ್ಯ ಪ್ರದೀಪ" ಎಂಬುದನ್ನು ನೋಡಿದೆ. ಅದರ ಮುಖ ಪುಟದ ಮೇಲೆ ರೇಣುಕಾಚಾರ್ಯರ ಚಿತ್ರವಿದೆ. ಹಣೆಯಲ್ಲಿ ಮೂರನೆಯ ಕಣ್ಣದೆ, ಕೊರಳಲ್ಲಿ ಇಷ್ಟಲಿಂಗವಿಲ್ಲ. ಇಷ್ಟಲಿಂಗವೇ ಇಲ್ಲದ ಅವರು ಲಿಂಗಾಯತ ಧರ್ಮೀಯರ ಆಚಾರ್ಯರು ಅಂದರೆ ಗುರು ಆಗಲಿಕ್ಕೆ ಹೇಗೆ ಸಾಧ್ಯ ? ನಮ್ಮ ಶರಣರು ಯಾವುದೇ ಕಾಯಕದವರಿದ್ದರೂ ಲಿಂಗಾಯತ ಧರ್ಮದ ಮುಖ್ಯ ಲಾಂಛನ ಇಷ್ಟಲಿಂಗ ಅವರ ಕೊರಳಲ್ಲಿ ಇರುತ್ತದೆ.

★ ಹುಷ್; ಸುಮ್ಮನಿರಿ. ಮುಂದೆ ಬರೆಸುವ ಚಿತ್ರಗಳಲ್ಲಿ ಕಲಾವಿದರಿಂದ ಬರೆಸಿ ಬಿಡುವರು. ನಾನೂ ಸುಮಾರು ವರ್ಷಗಳಿಂದ ಗಮನಿಸುತ್ತಿದ್ದೇನೆ. ಏಕೋ ಆ ವಿಷಯದಲ್ಲಿ ಅವರು ಪ್ರಾಮಾಣಿಕತೆ ಪ್ರದರ್ಶಿಸುತ್ತಿದ್ದಾರೆ. (ಕಾಲ್ಪನಿಕ) ರೇಣುಕಾಚಾರ್ಯರಿಗೇ ಇಷ್ಟಲಿಂಗವಿಲ್ಲ. ಆದರೆ ಅವರು ಅಗಸ್ತ್ಯನಿಗೆ ಕೊಟ್ಟುದಾಗಿ ಹೇಳುತ್ತಾರೆ. ಹೀಗಾಗಿ ಅವರ ಪರಿಸ್ಥಿತಿ "ಸುಳ್ಳು ಸುಳ್ಳೆನೆ ಬಿತ್ತಿ ಸುಳ್ಳನೇ ಬೆಳೆದು ಕಡೆಗೂ ಸುಳ್ಳು ಸುಳ್ಳಾಗಿ ಹೋಯಿತ್ತಯ್ಯಾ" ಎಂಬಂತಾಗಿದೆ.

– ಗಂಗಾಂಬಿಕೆ ಬಸವರಾಜ್, ಭದ್ರಾವತಿ

? ಬಸವ ಸಮಿತಿಯು ನಡೆಸುವ ಬಸವ ಪಥ ಜುಲೈ ಸಂಚಿಕೆಯಲ್ಲಿ ಶ್ರೀ ಅರವಿಂದ ಜತ್ತಿಯವರು ಬರೆದ ನೀನಾರು ಎಂಬ ಒಂದು ಗೀತೆ ಬಸವಣ್ಣನವರನ್ನು ಕುರಿತು ಇದೆ. ಗೀತೆಯ ಭಾವವು ಭಕ್ತಿ ಪೂರ್ಣವಾಗಿ, ಚೆನ್ನಾಗಿ ಇದೆ. ಆದರೆ "ದೈವ" ಎಂಬ ಪ್ರಯೋಗ ಎರಡು ಕಡೆ ಆಗಿದೆ. "ದೈವವೇ ಅಪ್ರಮಾಣವೆಂದು ಸಾಧಿಸಿ" ಮತ್ತು "ದೈವವನೆ ಕರಸ್ಥಲದಲ್ಲಿ ಚುಳುಕಾಗಿಸಿ" ಎಂದು ಹೇಳಿದ್ದಾರೆ. ಇಷ್ಟಲಿಂಗ ಯಾವುದರ ಸಂಕೇತ ?

★ ಬಸವಾದಿ ಪ್ರಮಥರನ್ನು, ಅವರ ವಚನಗಳನ್ನು ಅರಿಯಲು ತಾತ್ತ್ವಿಕ ತರಬೇತಿ ಅಗತ್ಯ. ಇಷ್ಟಲಿಂಗವು ದೇವ(God)ರ ಕುರುಹೇ ವಿನಾ 'ದೈವ'(deity)ದ ಸಂಕೇತವಲ್ಲ. ಸೃಷ್ಟಿಕರ್ತನನ್ನು (ಲಿಂಗ)ದೇವ ಎಂದು, ಅವನ ಹೊರತಾಗಿ ಉಳಿದವನ್ನು ದೈವಂಗಳು ಎಂದು ಬಸವಣ್ಣನವರು ಬಳಸುತ್ತಾರೆ.

★ ಇಬ್ಬರು ಮೂವರು ದೇವರೆಂದು ಉಬ್ಬುಬ್ಬಿ ಮಾತನಾಡಬೇಡ
ದೇವನೊಬ್ಬನೇ ಕಾಣಿರೋ
ಇಬ್ಬರೆಂಬುದು ಹುಸಿ ನೋಡಾ॥

★ ಮಾರಯ್ಯ ಬೀರಯ್ಯ ಕೇತಯ್ಯ ಅಂತರ ಬೆಂತರ ಎಂಬ ದೈವಂಗಳಿಗೆ

★ ಅರಗು ತಿಂದು ಕರಗುವ ದೈವ
ಉರಿಯ ಕಂಡರೆ ಮುರುಟುವ ದೈವ
ಸಹಜಭಾವ ನಿಜೈಕ್ಯ ಲಿಂಗದೇವನೊಬ್ಬನೇ ದೇವ ಕಾಣಿರೊ

ಈ ವ್ಯತ್ಯಾಸ ಗೊತ್ತಿಲ್ಲದೆ ಡಾ॥ ಚಿದಾನಂದ ಮೂರ್ತಿಯಂಥವರು ಸಹ ಗುಹೇಶ್ವರ ಎಂಬ

ಸೃಷ್ಟಿಕರ್ತ 'ದೇವ'ನ ಹೆಸರನ್ನು ಗೋಗೇಶ್ವರ ಎಂದು ವಿಕೃತಗೊಳಿಸಿ ಗ್ರಾಮ ದೈವದ ಮಟ್ಟಕ್ಕೆ ಇಳಿಸಿದ್ದಾರೆ.

– ಶಾಂತೇಶ ಪಾಟೀಲ್, ಹುಬ್ಬಳ್ಳಿ

? ಪಂಚಪೀಠಾಧೀಶರು ಪುನಃ ಪುನಃ "ನಾವು ಬಸವಣ್ಣನವರ ವಿರೋಧಿಗಳಲ್ಲ; ಮೊದಲಿನಿಂದಲೂ ಬಸವಣ್ಣನವರೊಡನೆಯೇ ಸಾಗಿದ್ದೇವೆ" ಎಂದು ಹೇಳುವುದೇಕೆ ?

★ ಉತ್ತರ ಕರ್ನಾಟಕದಲ್ಲಿ ಒಂದು ಗಾದೆ ಇದೆ, "ಕಳ್ಳನ ಜೀವ ಹುಳ್ಳಹುಳ್ಳಗೆ" ಎಂದು. ಅವರ ಬಸವ ಪ್ರೇಮ ಅಫಜಲ್ ಖಾನನು ಶಿವಾಜಿಯನ್ನು ಪ್ರೀತಿಯಿಂದ (?) ರಾಜಿಗೆ ಆಹ್ವಾನಿಸಿ, ಅಪ್ಪಿಕೊಂಡಂತಿದೆ. ಅದಕ್ಕೇ ಬಸವಣ್ಣನವರು ತಮ್ಮ ಅಭಿಮಾನಿಗಳಿಗೆ ಹೀಗೆ ಹೇಳಿದ್ದಾರೆ:

ಅರೆ ಭಕ್ತಾದವರ ನೆರೆ ಬೇಡ ಹೊರೆ ಬೇಡ
ದಾರಿ ಸಂಗಡ ಬೇಡ; ದೂರ! ನುಡಿಸಲು ಬೇಡ
ಅಚ್ಚಲಿಂಗೈಕ್ಯಂಗೆ ತೊತ್ತಾಗಿಹುದಯ್ಯ.

– ಡಿ. ಸಾವಿತ್ರಿ, ರಾಯಚೂರು

? ಲಿಂಗಾಯತ ಧರ್ಮವು ಉದಾತ್ತ ವಿಚಾರಗಳನ್ನು ಒಳಗೊಂಡಿದ್ದರೂ ಏಕೆ ಇದು ಗಟ್ಟಿಗೊಂಡು ಬೆಳೆಯುತ್ತಲಿಲ್ಲ

★ ಒಮ್ಮೆ ಒಬ್ಬ ತಂದೆ ತನ್ನ ದಡ್ಡ ಮಗನಿಗೆ ಸಸಿಗಳ ಉಸ್ತುವಾರಿವಹಿಸಿ ನೀರುಣಿಸಲು ಹೇಳಿ ಪ್ರವಾಸ ಹೋದ. ಬಂದ ಮೇಲೆ ಮಗ ಹೇಗೆ ಸಸಿಗಳನ್ನು ಬೆಳೆಸಿದ್ದಾನೆ ಎಂದು ಪರೀಕ್ಷಿಸಿದ. ಮಗ ಹೇಳಿದ "ಏಕೋ ಸಸಿಗಳು ಬೇರು ಬಿಟ್ಟು ಬೆಳೆಯುತ್ತಿಲ್ಲ. ದಿನಾಲು ಕಿತ್ತು ಕಿತ್ತು ನೋಡಿ ಪುನಃ ಹೂಳುತ್ತೇನೆ" ಎಂದು. ಹಾಗೇ ಈ ಧರ್ಮದ ಹೆಸರೇನು, ಇದರ ಸ್ಥಾಪಕರು ಯಾರು ಎಂದು ದಿನ ನಿತ್ಯವೂ ಚರ್ಚೆ ನಡೆಯುತ್ತಲೇ ಇರುವುದರಿಂದ ಇದು ಬೇರು ಬಿಟ್ಟು ಬೆಳೆಯಲೇ ಆಗುತ್ತಿಲ್ಲ.

– ಮಹಾಂತೇಶ ಕಂದಕೂರು, ವಿದ್ಯಾರ್ಥಿ, ಇಳಕಲ್

? ಗುರುವಿರಕ್ತರು ಒಂದಾಗಬೇಕು ಎಂಬುದರಲ್ಲಿ ಅರ್ಥವಿಲ್ಲ. ಉಪ್ಪು-ಸಕ್ಕರೆ ಕೂಡಿಸಿದರೆ ಏನೂ ಪ್ರಯೋಜನವಿಲ್ಲ ಎಂಬ ಡಾ॥ ಎಂ.ಎಂ. ಕಲಬುರ್ಗಿಯವರ ಮಾತು ಅರ್ಥಗರ್ಭಿತವಾಗಿದೆ ಎನಿಸುತ್ತದೆ. ತಮ್ಮ ಅಭಿಪ್ರಾಯ ?

★ ನೂರಕ್ಕೆ ನೂರು ಸರಿ. ಏಕೆಂದರೆ ಹಿಂದೆ ಬಸವಣ್ಣನವರು ಸ್ವತಂತ್ರ ಧರ್ಮವೊಂದನ್ನು ಕೊಟ್ಟು ಅದು ಪ್ರಬಲವಾಗಿ ಬೆಳೆದಾಗ ಪುರೋಹಿತ ವರ್ಗದವರು ಬಂದು ಸೇರಿಕೊಂಡು ಮತ್ತೆ ತಮ್ಮ ಪೂರ್ವಾಶ್ರಯದ ಕೊಳೆಯನ್ನೆಲ್ಲ ನೂತನ ಧರ್ಮದೊಳಕ್ಕೆ ಸೇರಿಸಿ ಇದರ ಶುಚಿತ್ವವನ್ನು ಕೆಡಿಸಿದರು. ಪಂಚಾಚಾರ್ಯ ಗುಂಪಿನ ಮಠಾಧೀಶರು ಪ್ರಾಮಾಣಿಕರಾಗಿದ್ದರೆ ಪ್ರತ್ಯೇಕ ವಿಚಾರಧಾರೆಯನ್ನು ಹುಟ್ಟು ಹಾಕುತ್ತಲೇ ಇರಲಿಲ್ಲ. ನಂತರ ಕತ್ತಲೆಯ ಯುಗವನ್ನು ಲಿಂಗಾಯತ ಧರ್ಮ ಪ್ರವೇಶಿಸಿ, ರಾಹುಗ್ರಸ್ತವಾಯಿತು. ವಚನ ಸಾಹಿತ್ಯದ ಪ್ರಸಾರ ತೀವ್ರಗೊಂಡಂತೆ ಆ ರಾಹುಕಳೆ ಸರಿದು ಬಸವ ಭಾಸ್ಕರ ಪುನಃ ಪ್ರಕಾಶಿಸುತ್ತಿದ್ದಾನೆ. 20ನೆಯ ಶತಮಾನದ ಹಲವಾರು ದಶಕ ಕಾಲ ಆ ವರ್ಗದ ಜನರು ಮಾಡಿದ ಬಸವ ನಿಂದೆ, ಅಪಪ್ರಚಾರಗಳಿಗೆ ಲೆಕ್ಕವೇ ಇಲ್ಲ.

ಲಿಂಗಾಯತ ಧರ್ಮದ ಇತಿಹಾಸವನ್ನು ಕೆಡಿಸಿದರು; ಸಮಾಜವನ್ನು ಒಡೆದರು. ಏನೆಲ್ಲ ಆದರೂ ಯಾವಾಗ ಬಸವಣ್ಣನ ದಿವ್ಯ ಪ್ರಭೆಯನ್ನು ಮಂಕುಗೊಳಿಸಲು ಆಗಲಿಲ್ಲವೋ ಈಗ ನಾವು ಬಸವಣ್ಣನ ವಿರೋಧಿಗಳಲ್ಲ ಎಂದು ಗಿಳಿಪಾಠ ಒಪ್ಪಿಸುತ್ತಿದ್ದಾರೆ. ಒಂದು ವೇಳೆ ಅವರು ಒಂದುಗೂಡುವ ಬಯಕೆ ಹೊಂದಿದ್ದರೆ ಬಸವಣ್ಣನವರನ್ನು ಧರ್ಮ ಸ್ಥಾಪಕರೆಂದು, ವಚನ ಸಾಹಿತ್ಯವನ್ನು ಧರ್ಮ ಸಂಹಿತೆ ಎಂದು ಒಪ್ಪಿಕೊಂಡು ಒಂದಾದರೆ ಮಾತ್ರ ಅದಕ್ಕೆ ಅರ್ಥವಿದೆ. ತಾತ್ತ್ವಿಕ ಏಕತೆ ಇಲ್ಲದಿರುವ ಸಾಮಾಜಿಕ ಹೊಂದಾಣಿಕೆಗೆ ಯಾವ ಅರ್ಥವೂ ಇಲ್ಲ.

– ಸತ್ಯಮ್ಮ, ಮೈಸೂರು

? ಮೈಸೂರು ಮಿತ್ರ ಪತ್ರಿಕೆಯ ದಿ. 12-4-04ರ ಸಂಚಿಕೆಯಲ್ಲಿ ಒಂದು ಫೋಟೋ ಮುದ್ರಣಗೊಂಡಿದೆ. ಕುಶಾಲ ನಗರದ ಸಮೀಪದಲ್ಲಿರುವ ತೊರೆನೂರು ಗ್ರಾಮದಲ್ಲಿ ಶನೀಶ್ವರ ಮೂರ್ತಿಯ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಕೆಲವು ಲಿಂಗಾಯತ ಸ್ವಾಮಿಗಳು ಭಾಗವಹಿಸಿದ್ದು ಇದರಲ್ಲಿ ಬೆಟ್ಟದಪುರ, ಸೋಮವಾರ ಪೇಟೆ ಇತ್ಯಾದಿ ಊರುಗಳ ಲಿಂಗಾಯತ ಮಠಾಧೀಶರು ಇದ್ದಾರಲ್ಲ, ಈ ಬಗ್ಗೆ ಏನನ್ನಬೇಕು ?

★ ಕೆಲವು ಸ್ವಾಮಿಗಳಿಗೆ ಸ್ವತಃ ತಮ್ಮ ಧರ್ಮದ ಸಿದ್ಧಾಂತವೇನು ಎಂಬುದೇ ತಿಳಿದಿಲ್ಲ. ಹೀಗಾಗಿ ಅಂಗದ ಮೇಲೆ ಇಷ್ಟಲಿಂಗವನ್ನು (ಲಿಂಗಾಯತರ ಮನೆಯಲ್ಲಿ ಬಿನ್ನಹ ತೀರಿಸುವ ಮಟ್ಟಿಗೆ) ಕಟ್ಟಿಕೊಂಡೂ, ಏಕಲಿಂಗ ನಿಷ್ಠೆಯಿಲ್ಲದೆ ನವಗ್ರಹ ಗುಡಿ, ಗಣಪತಿ ಗುಡಿ, ನಾಗರಕಟ್ಟೆ ಕಟ್ಟಿಸುತ್ತಾರೆ. ಇನ್ನು ಕೆಲವರು ಮೂಢ ಭಕ್ತರು ಕಟ್ಟಿಸಿ, ಆಹ್ವಾನಿಸಿದಾಗ ವೇದಿಕೆ ಸಿಗುತ್ತದೆ ಎಂದು ಹೋಗುತ್ತಾರೆ. ಮತ್ತೆ ಕೆಲವೊಮ್ಮೆ ಬಲಿಷ್ಠ ರಾಜಕಾರಣಿಗಳು, ಶ್ರೀಮಂತರು ಕಟ್ಟಿಸಿ, ಆಹ್ವಾನಿಸಿದಾಗ ಇಲ್ಲವೆನ್ನುವ ಧೈರ್ಯವಿಲ್ಲದೆ ಹೋಗಿ ಭಾಗವಹಿಸುತ್ತಾರೆ. ಹೀಗಾಗಿಯೇ ಲಿಂಗಾಯತ ಸಮಾಜವು,

ಹೊಲಬನರಿಯದ ಗುರುವು, ತಿಳಿಯಲರಿಯರಿಯದ ಶಿಷ್ಯ,
ನೆಲೆಯನಾರಯ್ಯದುಪದೇಶ! ಅಂಧಕನು
ಕಳನ ಹೊಕ್ಕಂತೆ ಸರ್ವಜ್ಞ!! ಎಂಬಂತಾಗಿದೆ.

– ನಳಿನಾಕ್ಷಮ್ಮ ಶಂಕರ್, ಮೈಸೂರು

? ಜುಲೈ 1, 2004ನೇ ಇಸವಿಯ ವಿಜಯ ಕರ್ನಾಟಕದ 3ನೆಯ ಪುಟದಲ್ಲಿ ಒಂದು ಕಾರ್ಯಕ್ರಮ ವರದಿ ಬಂದಿತು. ಜೂನ್ 30ರಂದು ಮೈಸೂರಿನ ಜೆ.ಎಸ್.ಎಸ್. ವಿದ್ಯಾಪೀಠದ ಸುವರ್ಣ ಮಹೋತ್ಸವದ ಅಂಗವಾಗಿ ನಡೆದ 10 ಪುಸ್ತಕ ಬಿಡುಗಡೆ ಕಾರ್ಯಕ್ರಮ. ಅದರಲ್ಲಿ ಶ್ರೀ ದೇಜಗೌ ಮಾತನಾಡಿದರು. ಅವರಿಗೆ ಬಸವಣ್ಣನವರ ಬಗ್ಗೆ ತುಂಬಾ ಅಭಿಮಾನ, ಗೌರವ. ಆದರೆ "ಮಾನವತಾವಾದಿ ಬಸವಣ್ಣ ಮೇಲ್ವರ್ಗದವರ ನಡವಳಿಕೆಗೆ ಬೇಸತ್ತು ಕೊನೆಯಲ್ಲಿ ಕೂಡಲ ಸಂಗಮದಲ್ಲಿ ಐಕ್ಯವಾದ ಘಟನೆ ಶೋಚನೀಯ" ಎಂದರು. ಇದರ ಅರ್ಥವೇನು ?

★ ಒಂದು ಕಾಲದಲ್ಲಿ ಬಸವಣ್ಣನವರ ಜೀವನದ ಕೆಲವು ಪ್ರಸಂಗಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲದೆ ಬಹಳ ಸಂದೇಹ ಉಳಿದಿದ್ದವು. ಆದರೆ ಇತ್ತೀಚಿನ ದಶಕಗಳಲ್ಲಿ ಸಿಕ್ಕ ವಿವರ ಬಹಳ ಸಂದೇಹಗಳನ್ನು ಪರಿಹರಿಸಿವೆ. ಕೂಡಲ ಸಂಗಮದಲ್ಲಿ ಐಕ್ಯವಾದ ಘಟನೆ ಶೋಚನೀಯ ಎಂಬ ಅವರ

ಮಾತು ಬಸವಣ್ಣನವರ ನಿಜವಾದ ನಿಲುವನ್ನು ಇನ್ನೂ ಪೂರ್ಣವಾಗಿ ಶ್ರೀ ದೇಜಗೌ ಅರ್ಥಮಾಡಿಕೊಂಡಿಲ್ಲ ಎಂಬುದನ್ನು ಸೂಚಿಸುತ್ತದೆ. ಕೂಡಲ ಸಂಗಮ ಎಂಬ ಒಂದು ಊರಿನಲ್ಲಿ ಬಸವಣ್ಣನವರು ಅಂತಿಮ ದಿನಗಳನ್ನು ಕಳೆದು ಅತ್ಯಂತ ಭವ್ಯ ಮತ್ತು ದಿವ್ಯವಾಗಿ ಇಚ್ಛಾ ಮರಣದಿಂದ ದೇಹವನ್ನು ಬಿಟ್ಟಿದ್ದಾರೆ. ಆದ್ದರಿಂದ ಅದೇನು ಶೋಚನೀಯವಾದ ಸಾವಲ್ಲ.

ಇದನ್ನು ನಾನು ಸಾಕಷ್ಟು ವಿವರವಾಗಿ ಬರೆದಿದ್ದೇನೆ. ಎಂದೋ ತಿಳಿದುಕೊಂಡ ವಿಚಾರವನ್ನೇ ಮತ್ತೂ ಹೇಳುತ್ತ ಹೋಗುವ ಕೆಲವರ ಹವ್ಯಾಸದ ಬಗ್ಗೆ ನನಗೆ ಬಹಳ ವಿಷಾದವೆನ್ನಿಸುತ್ತದೆ. ಕಾಲಜ್ಞಾನ ವಚನ, ಸ್ವತಃ ಬಸವಣ್ಣನವರ ವಚನ, ಇದಕ್ಕೆ ಪೂರಕವಾಗಿ ಕೆಲಸ ಮಾಡುವ ಮಡಿವಾಳ ಮಾಚಿದೇವರ ವಚನ ಇವುಗಳಿಂದ ಖಚಿತವಾಗಿರುವ ಪ್ರಕಾರ ಸಿದ್ಧಪುರುಷ ಬಸವಣ್ಣನವರ ಅಂತ್ಯ ಬಹಳ ದಿವ್ಯವಾಗಿದೆ ಮತ್ತು ಯೋಗಿಕವಾಗಿದೆ ಎಂದು ಸಾರಿಸಾರಿ ಆಧಾರ ಸಹಿತವಾಗಿ ಹೇಳಿದರೂ, ಬರೆದರೂ ಮತ್ತೆ ಕೆಲವು ಸಾಹಿತಿಗಳು ಹಳೆಯ ಅರೆಬರೆ ವಿಚಾರಗಳನ್ನೇ ಹೇಳುತ್ತಿರುತ್ತಾರೆ. ಏನು ಅವರು ಇನ್ನಿತರರ ಸಾಹಿತ್ಯ ಓದದೆ ಹಾಗೆ ಮಾಡುವರೋ ಅಥವಾ ಟೂತ್ ಪೇಸ್ಟ್ ಟ್ಯೂಬಿನಂತೆ ತಮ್ಮ ಆಲೋಚನೆಗಳನ್ನು ಹೊರಹಾಕಲು ಮಾತ್ರ ಸಮರ್ಥರಾಗಿ ಇನ್ನಿತರರ ವಿಚಾರ ಸ್ವೀಕರಿಸುವ ಮನೋಭಾವ ಹೊಂದಿರುವುದಿಲ್ಲವೋ ತಿಳಿಯದು. ಕಲ್ಯಾಣ ಕ್ರಾಂತಿ, ಬಸವಣ್ಣನವರ ಗಡಿಪಾರು, ಶರಣರ ವಧೆ, ವಚನ ಸಾಹಿತ್ಯ ರಕ್ಷಣೆಗಾಗಿ ಶರಣರು ಕಾಡುಮೇಡು ಸೇರಿ ಕಷ್ಟಪಟ್ಟುದು, ಯುದ್ಧದಲ್ಲಿ ಸೈನಿಕರನ್ನು ಎದುರಿಸಿದ್ದು ವಿಷಾದನೀಯ ಘಟನೆಗಳೇ ವಿನಾ ಬಸವಣ್ಣನವರ ಲಿಂಗೈಕ್ಯದ ಬಗೆಯಲ್ಲ.

ಕಡೆಯದಾಗಿ ಹೇಳುವುದಾದರೆ ಅನೇಕ ಪತ್ರಿಕಾ ವರದಿಗಾರರಿಗೆ ಭಾಷಣಕಾರರು ಹೇಳುವ ಗಂಭೀರ ಸಂಗತಿಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಆಗ "ಸಂತೆ ಹೊತ್ತಿಗೆ ಮೂರು ಮೊಳ ನೆಯ್ದ" ಎಂಬಂತೆ ಏನೋ ಇಷ್ಟು ಬರೆದುಬಿಡುತ್ತಾರೆ. ಆದ್ದರಿಂದ ಪತ್ರಿಕಾ ವರದಿಯ ಮೇಲೆಯೇ ನಾವು ಕೆಲವರ ವಿಚಾರಗಳ ಬಗ್ಗೆ ಪೂರ್ಣವಾಗಿ ತಿಳಿಯಲು ಆಗುವುದಿಲ್ಲ.

– ಕಮಲೇಶ್ ಪಾಟೀಲ್, ಊರು ಬೇಡ

? ಒಂದು ಬಸವ ತತ್ತ್ವಕ್ಕೆ ಸಂಬಂಧಿಸಿದ ಸಭೆ ನಡೆದಿತ್ತು. ಅದರಲ್ಲಿ ಓರ್ವರು ರಾಷ್ಟ್ರೀಯ ಬಸವ ದಳದವರು ಒಳ್ಳೆಯ ಕಂಠದಿಂದ ಬಸವಣ್ಣನವರ ವಚನವನ್ನು ಹಾಡಿದರು. ವೇದಿಕೆಯ ಮೇಲಿದ್ದ ಸ್ವಾಮಿಗಳೋರ್ವರು ತಲೆದೂಗುತ್ತ ಆ ವಚನದ ಭಾವ ಸಂಪತ್ತು, ಹಾಡಿದವರ ಕಂಠಸಿರಿಯನ್ನು ಆನಂದಿಸುತ್ತಿದ್ದರು. ಹಾಡುವವರು "ಲಿಂಗದೇವಾ" ಎಂದು ಹಾಡುತ್ತಲೇ ಸ್ವಾಮಿಗಳು ಆಕ್ರೋಶಗೊಂಡು "ಹಾಗೆ ಹಾಡಬೇಡ. ನಮಗೆ ಕೇಳಲು ಕಷ್ಟವಾಗುತ್ತೆ" ಎಂದು ಸಿಟ್ಟಿನಿಂದ ಹೇಳಿದರು. ಗಾಯಕರು ಲಿಂಗದೇವಾ ಎಂದೇ ಹಾಡಿ ಮುಗಿಸಿದರು. "ಲಿಂಗದೇವ" ಶಬ್ದ ಕೇಳುತ್ತಲೇ ಹಾವು ತುಳಿದವರಂತೆ ಸ್ವಾಮಿಗಳು ಬೆಚ್ಚುವುದೇಕೆ ?

★ ಏನೋ ನನಗೂ ತಿಳಿಯುತ್ತಿಲ್ಲ. ಗಂಡನಿಗೆ ಅರಿಯದಂತೆ ಪರಪುರುಷನ ಸಂಗ ಮಾಡುವ ಓರ್ವ ಗೃಹಿಣಿ, ಪತಿಯು ಉದ್ಯೋಗದ ಮೇಲೆ ಹೋದಾಗ ಸ್ನೇಹಿತನನ್ನು ಬರಮಾಡಿಕೊಂಡಿರುತ್ತಾಳೆನ್ನಿ. ಆಗ ಕಾರಣಾಂತರದಿಂದ ಗಂಡ ಮನೆಗೆ ಆಕಸ್ಮಾತ್ ಬಂದರೆ ಆಕೆ ಬೆಚ್ಚಿಬಿದ್ದು ಭಯದಿಂದ ಒದ್ದಾಡುವಳು. ಹಾಗೆ ಅಂಗದ ಮೇಲಿನ ಲಿಂಗನಿಷ್ಠೆ ಬಿಟ್ಟು ಅನ್ಯದೈವಂಗಳ

ಆರಾಧನೆ ಮಾಡುವ ಸ್ವಾಮಿಗಳು, ಭಕ್ತರು, ವೀರಶೈವರು ಲಿಂಗದೇವನ ಹೆಸರು ಕೇಳುತ್ತಲೇ ಭಯಪಡುವಂತೆ ಕಾಣುತ್ತದೆ. ಅದಕ್ಕೇ ಕೇಳಲು ಕಷ್ಟವಾಗುತ್ತಿರಬಹುದು.

ಈಗ ತತ್ತ್ವವನ್ನು ತಿಳಿದುಕೊಂಡ ಬಸವ ಭಕ್ತರು, ಮೊದಮೊದಲು ಒಪ್ಪದವರು, ವಿರೋಧಿಸಿದವರು ಸಹ ಈಗ ಲಿಂಗದೇವ ಪದವೇ ಬಸವ ವಚನಾಂಕಿತವಾಗಿ ಸೂಕ್ತ ಎಂದು ಅರಿತುಕೊಂಡು ಬಳಸುತ್ತಿದ್ದಾರೆ. ಈಗ ಉಲ್ಲೇಖಿಸುವ ನಾಲಿಗೆ, ಕೇಳುವ ಕಿವಿ, ಚಿಂತಿಸುವ ಮನಸ್ಸಿಗೆ ಬಸವಣ್ಣನವರ ವಚನಗಳ ಜೊತೆಗೆ ಲಿಂಗದೇವ ವಚನಾಂಕಿತ ಅಭ್ಯಾಸವಾಗಿ ಬಿಟ್ಟಿದೆ. ಈಗ ಯಾರಾದರೂ ಜಗದಗಲ ಮುಗಿಲಗಲ ವಚನ ಹೇಳಿ ಕೂಡಲ ಸಂಗಮದೇವ ಹೇಳಿ ಕೊನೆಗೊಳಿಸಿದರೆ ಬಸವ ಭಕ್ತರಿಗೆ ಬಹಳ ಹಿಂಸೆಯಾಗುತ್ತದೆ. ನಾವು ಹೇಗೆ ಕೂಡಲ ಸಂಗಮದೇವನನ್ನು ಮನ್ನಿಸುತ್ತೇವೆಯೋ ಹಾಗೆ ಅವರೂ ಲಿಂಗದೇವನನ್ನು ಸಹಿಸಿಕೊಳ್ಳಲು ಅಭ್ಯಾಸ ಬೆಳೆಸಿಕೊಳ್ಳಬೇಕು.

– ಹೆಚ್.ಎಸ್. ಬಸವರಾಜ, ರಾ.ಬ.ದಳ., ಭದ್ರಾವತಿ

? ಗುಲಬರ್ಗಾದಲ್ಲಿ ಕೋರ್ಟಿಗೆ ನೀವು ಹೋಗಿದ್ದಿರಿ ಎಂದು ಕೆಲವು ಪತ್ರಿಕೆಗಳಲ್ಲಿ ಬಂದಿತು, ವಿಷಯ ತಿಳಿಯದೆ ನಮಗೆ ಕಳವಳವಾಗಿದೆ ; ವಿವರ ತಿಳಿಸಿರಿ.

★ ಆತಂಕ ಪಡುವಂಥದು ಏನೂ ಇಲ್ಲ. 1996-97ರಲ್ಲಿ ಮೃಗರಾಜೇಂದ್ರರ ಪ್ರಚೋದನೆಯ ಮೇಲೆ ಹಲವಾರು ಕಡೆ ಹಲವಾರು ಜನರು ''ಲಿಂಗದೇವ '' ವಚನಾಂಕಿತ ಸಲುವಾಗಿ ಸಿವಿಲ್, ಕ್ರಿಮಿನಲ್ ಮೊಕದ್ದಮೆ ಹೂಡಿದ್ದರು. ಅದರಲ್ಲಿ ಕೆಲವು ವಜಾ ಆಗಿವೆ. ಕೆಲವು ನಡೆಯುತ್ತಿವೆ. ಅಂಥ ಒಂದು ಕೇಸನ್ನು, ಅವು ಅರ್ಥ ರಹಿತವಾದ ಖಾಸಗಿಯಾಗಿ ಹಾಕಲಾದ ಕಲಮ್‌ಗಳನ್ನೆಲ್ಲ ಹಾಕಿರುವುದು ಸರಿಯಲ್ಲ ಎಂದು ನಮ್ಮ ವಕೀಲರುಗಳಾದ ಬೆಂಗಳೂರಿನ ಶರಣ ಜೈರಾಜ್ ಮತ್ತು ಗುಲಬರ್ಗಾದ ಶರಣ. ಬಸವರಾಜ ಯಾಲಕ್ಕಿ ಅಂದು ಕೋರ್ಟಿನ ಮುಂದೆ ಮಂಡಿಸಿ ವಜಾ ಮಾಡಲು ಕೋರಿದ್ದಾರೆ ಅಷ್ಟೆ

– ಓರ್ವ ಕಟ್ಟಾ ನಾಸ್ತಿಕ, ಹುಬ್ಬಳ್ಳಿ

? ನೀವು ಸೃಷ್ಟಿಕರ್ತ ದೇವರನ್ನು ಮತ್ತು ಧರ್ಮ ಕರ್ತ ಬಸವಣ್ಣನವರನ್ನು ತುಂಬಾ ನಂಬಿದ್ದೀರಿ. ಉದಾತ್ತ ಉದ್ದೇಶದಿಂದ ಜನತೆಯ ಸೇವೆ ಮಾಡಬೇಕೆಂದು ಚುನಾವಣೆಯಲ್ಲಿ ಭಾಗವಹಿಸಿದಿರಿ. ಸರ್ವಶಕ್ತನಾದ ಪರಮಾತ್ಮನು ಏಕೆ ನಿಮ್ಮನ್ನು ಗೆಲ್ಲಿಸಲಿಲ್ಲ? ಮತದಾರರ ಮನಸ್ಸಿನಲ್ಲಿ ಹೊಕ್ಕು ದೇವರು ನಿಮ್ಮನ್ನು ಗೆಲ್ಲಿಸಬಹುದಿತ್ತಲ್ಲ?

★ ನಾನು ಈ ರೀತಿ ಆಲೋಚಿಸಿದ್ದೆ, ಕನ್ನಡ ನಾಡು ಪಕ್ಷದಿಂದ ನಿಲ್ಲಲು ಆಹ್ವಾನ ಬಂದಾಗ ನನಗೆ ಆಶ್ಚರ್ಯವೆನಿಸಿತು. ''ದೇವರ ಇಷ್ಟವೇನೋ ತಿಳಿಯದು. ನೋಡೋಣ. ಗೆಲುವಾದರೆ ಸಮಾಜ-ರಾಷ್ಟ್ರಗಳ ಸೇವೆಯನ್ನು ಪ್ರಾಮಾಣಿಕವಾಗಿ ಮಾಡುವುದು ಇಲ್ಲದಿದ್ದರೆ ನಮ್ಮದೇ ಆದ ಧಾರ್ಮಿಕ ಜಗತ್ತಿನಲ್ಲಿ ಮಾಡುವಂಥದೇ ಸಾಕಷ್ಟಿದ್ದು ಇದಕ್ಕೇ ಹೆಚ್ಚು ಗಮನ ಕೊಡುವುದು''. ನನ್ನ ಆಲೋಚನೆಗೆ ಹೊಂದುವಂತಹ ಒಂದು ಸೂಕ್ತಿ ನೋಡಿರಿ:

If God answers our prayer, He is increasing our faith.
If He delays, He is increasing our patience.

If He doesn't answer, he has something better for us''.

(Chandru BVT)

ನಂಬಿದವರಿಗೆ ಏನು ಅಗತ್ಯವಿದೆಯೋ ಅದನ್ನೇ ದೇವರು ಕರುಣಿಸುತ್ತಾನೆ. ಆದ್ದರಿಂದ ದೇವರು ಮತದಾರರ ಮನಸ್ಸಿನಲ್ಲಿ ಹೊಕ್ಕು, ''ಮಾತಾಜಿಯವರಿಂದ ಧಾರ್ಮಿಕ ಜಗತ್ತಿಗೇ ಸೇವೆ ಸಲ್ಲಲಿ ; ರಾಜಕೀಯ ಜಗತ್ತು ಬೇಡ '' ಎಂದು ನನಗೆ ಮತ ಹಾಕದಿರಲು ಪ್ರೇರಣೆ ನೀಡಿದ್ದಾನೆ ಎಂದು ನಂಬುತ್ತೇನೆ. ಇಮ್ಮಡಿಸಿದ ಉತ್ಸಾಹದಿಂದ ಧರ್ಮಪ್ರಚಾರ ಮಾಡುತ್ತೇನೆ.

– ಎಸ್. ಪಟೇಲ್ ಸೋಮಶೇಖರಯ್ಯ, ಯಳನಾಡು

? ಬಸವಣ್ಣನವರ ಪವಿತ್ರ ನಾಮಕ್ಕೆ ಕುಂದುತರುವಂತೆ ಅವರ ಹೆಸರನ್ನು ಹೊತ್ತ ಒಂದು ಪತ್ರಿಕೆಯಲ್ಲಿ ತಮ್ಮ ಬಗ್ಗೆ ಬಹಳ ಕೆಳಮಟ್ಟದ ಬರಹ ಮುದ್ರಣಗೊಂಡಿದೆ. ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೊ ಎಂದು ಜೆರಾಕ್ಸ್ ಪ್ರತಿ ಕಳಿಸಿದ್ದೇನೆ. ನಿಮ್ಮ ಅಭಿಮಾನಿ ನಾನು. ದಯವಿಟ್ಟು ಆ ಲೇಖನ ಪ್ರಕಟಿಸಿ ಅದಕ್ಕೆ ಉತ್ತರ ನೀಡಿರಿ.

★ ನಿಮ್ಮ ಅಭಿಮಾನಕ್ಕೆ ನಮ್ಮ ಅಭಿನಂದನೆ. ಆದರೆ ನಿಮ್ಮ ಅನಿಸಿಕೆ ಈಡೇರಿಸಲು ಸಾಧ್ಯವಿಲ್ಲದ್ದಕ್ಕಾಗಿ ವಿಷಾದಿಸುತ್ತೇವೆ. ಕೆಲವರು ತಮ್ಮ ವ್ಯಕ್ತಿತ್ವ ಮತ್ತು ಬರಹಗಳಿಂದ ಜನರ ಗಮನ ಸೆಳೆಯಲು ಆಗದೆ ದೊಡ್ಡವರ ತೇಜೋವಧೆ ಮಾಡಿ ಜನರ ಗಮನ ಸೆಳೆಯಲು ಕೆಳಮಟ್ಟದ ಬರಹ ಬರೆಯುತಾರೆ. ಅಂಥ ಅವಿವೇಕಿಗಳ ಬಗೆ ಉದಾಸೀನತೆ ತಳೆಯಬೇಕೇ ವಿನಾ ಹೆಚ್ಚಿನ ಗಮನ ಕೊಡಬಾರದು. ಶರಣರಾದ ನಿಮ್ಮಂತಹವರು ಸದಭಿರುಚಿಯ ಪತ್ರಿಕೆಗಳನ್ನು ಓದಬೇಕೇ ವಿನಾ ಕೀಳುಮಟ್ಟದ ಬರಹಗಳನ್ನು ಓದಿ ತಲೆ ಕೆಡಿಸಿಕೊಳ್ಳಬಾರದು.

– ಕುಮಾರಿ ಪ್ರತಿಭಾ ಗರಗದ, ಧಾರವಾಡ

? ಶ್ರಾವಣ ಶುದ್ಧ ಪಂಚಮಿಯಂದು ಧರ್ಮಪಿತ ಬಸವಣ್ಣನವರು ಲಿಂಗೈಕ್ಯರಾದುದು ಎಂದು ತಾವು ತಿಳಿಸಿದಂತೆ ಎಲ್ಲೆಡೆಯಲ್ಲಿ ರಾಷ್ಟ್ರೀಯ ಬಸವ ದಳದವರು ಬಸವ ಪಂಚಮಿಯ ವಿಶೇಷ ಕಾರ್ಯಕ್ರಮ ಆಚರಿಸುತ್ತೇವೆ. ಆದರೆ ಬಸವ ಕೇಂದ್ರ ಮತ್ತಿತರ ಲಿಂಗಾಯತ ಸಂಸ್ಥೆಗಳು ಅದನ್ನು ನಾಗರಪಂಚಮಿ ಎಂದೇ ಕರೆಯುತ್ತಾರಲ್ಲ. ಇದು ಏಕೆ?

★ ನಮ್ಮನ್ನು ದ್ವೇಷಿಸುವ ಒಂದೇ ಉದ್ದೇಶಕ್ಕಾಗಿ ಹಾಗೆ ಮಾಡುತ್ತಾರೆ. ನಿಜವಾಗಿ ಹೇಳಬೇಕೆಂದರೆ ಈ ಮಹತ್ವಪೂರ್ಣ ಸತ್ಯವನ್ನು ಹೊರಹಾಕಿದವರು ಮೈಸೂರು ವಿಶ್ವವಿದ್ಯಾಲಯದ ತೆಲುಗು ವಿಭಾಗದ ಮುಖ್ಯಸ್ಥರಾಗಿದ್ದ ಡಾ|| ಬಾಡಾಲ ರಾಮಯ್ಯನವರು. ಬಸವ ವಚನಾಮೃತಮು ಎಂಬ ಕನ್ನಡದ ತೆಲುಗು ಅನುವಾದ ಕೃತಿಗೆ ವಿಸ್ತಾರವಾದ ಪೀಠಿಕೆ ಬರೆದು, ಇದನ್ನು ಅವರು ಸಿದ್ಧಪಡಿಸಿದ್ದಾರೆ. ಪುಸ್ತಕ ಪ್ರಕಟಿಸಿದವರು ಸಿರಿಗೆರೆ ಮಠದವರು. ಯಾರು ಹೇಳಿದರೇನು, ಯಾರು ಪ್ರಕಟಿಸಿದರೇನು ಒಂದು ಮಹತ್ತರವಾದ ಸತ್ಯ ಹೊರಬಂದಿತಲ್ಲ ಎಂದು ನಾವು ಅದನ್ನು ಪ್ರಚಾರಕ್ಕೆ ತಂದೆವು. ನನ್ನ ಮಗಳು ವಿಧವೆಯಾದರೂ ಚಿಂತೆಯಿಲ್ಲ ಅಳಿಯ ಪೃಥ್ವಿರಾಜ ಸಾಯಬೇಕು ಎಂಬ ಛಲದ ಜಯಚಂದನಂತೆ ಮಠಾಧೀಶರು, ಅವರ ಭಕ್ತರು ಬಸವ ಪಂಚಮಿ ಪ್ರಚಾರ ಮಾಡದೆ ನಾಗರಪಂಚಮಿ ಎಂದು ಪ್ರಚಾರ ಮಾಡುತ್ತಾರೆ.

ಆಧಾರ ಸಹಿತವಾಗಿ ಡಾ॥ ಬಾಡಾಲ ರಾಮಯ್ಯನವರು ಹೇಳಿದ ಸತ್ಯಕ್ಕೆ ಮಾನ್ಯತೆ ಕೊಡದೆ ಕಾಲ್ಪನಿಕವಾಗಿ ನಾಗಲಾಂಬಿಕೆಯ ಜಯಂತಿ ಎಂದು ಸೃಷ್ಟಿ ಮಾಡಿದ್ದಾರೆ. ಮಠಾಧಿಪತಿಗಳ ಈ ಮತ್ಸರದ ಜಗ್ಗಾಟದಿಂದ ಮೊದಲೇ ನಿರಭಿಮಾನಿಗಳಾದ ಲಿಂಗಾಯತರು, ದುರಭಿಮಾನಿಗಳಾದ ವೀರಶೈವವಾದಿಗಳು ಧರ್ಮ ಮತ್ತು ಧರ್ಮಗುರುವಿನಲ್ಲಿ ಶ್ರದ್ಧೆ ಕಳೆದುಕೊಳ್ಳುತ್ತಿದ್ದಾರೆ. ಕೆಲವು ಮಠಾಧೀಶರ ದ್ವೇಷ ಎಷ್ಟು ಮುಂದುವರಿದಿದೆ ಎಂದರೆ ಎಷ್ಟೊಂದು ದಿನದರ್ಶಿ (ಕ್ಯಾಲೆಂಡರ್) ಗಳಲ್ಲಿ ಪ್ರಕಟವಾಗುತ್ತಿದ್ದ ಬಸವ ಲಿಂಗೈಕ್ಯ ಸಂಸ್ಮರಣೆ ಕ್ಯಾಲೆಂಡರ್‌ಗಳಿಂದ ಮಾಯವಾಗುತ್ತಿದೆ. ನಮ್ಮ ಮೇಲಿನ ದ್ವೇಷದಿಂದ ಧರ್ಮಗುರುವಿಗೆ ಎಷ್ಟು ದ್ರೋಹ ಬಗೆಯುತ್ತಿದ್ದೇವೆ ಎಂಬುದನ್ನು ಚಿಂತನೆ ಮಾಡಲಾರದಷ್ಟು ಕೆಲವು ಮಠಾಧೀಶರು ತಮ್ಮ ಅಂತರಾತ್ಮ ವಿರೋಧಿಗಳಾಗಿದ್ದಾರೆ.

- ಚಂದ್ರಶೇಖರ್ ಪಾಟೀಲ, ಗುಲಬರ್ಗಾ

? ಒಂದು ಪತ್ರಿಕೆ ನಿಮ್ಮನ್ನು ಸದಾ ಕಾಲ ಟೀಕಿಸುವ ಲೇಖನಗಳನ್ನು ಪ್ರಕಟಿಸುವುದಲ್ಲ ಏಕೆ ?

★ ಗುಜರಾತ್ ಮತ್ತು ಇನ್ನಿತರ ಕೆಲವು ಕಡೆ ಕೂಲಿ ಕೊಟ್ಟರೆ ಅಳುವ ಜನರು ಇರುತ್ತಾರೆ. ಇವರನ್ನು ರುಡಾಲಿ ಎನ್ನುವರು. ತಮ್ಮ ಆರ್ಥಿಕ ಶಕ್ತಿಗೆ ಅನುಸಾರವಾಗಿ ರುಡಾಲಿಗಳಿಗೆ ಹಣಕೊಟ್ಟು ಸತ್ತವರ ಬಂಧುಗಳು ಅಳಿಸುವರು. ಸ್ವಯಂ ದುಃಖದಿಂದ ಅಳದೆ ತಮ್ಮ ಉಪಜೀವನದ ಸಾಧನ ಎಂದು ಅವರು ಅಳುವರು. ಹಾಗೆ ಕೆಲವು ಪತ್ರಿಕೆಗಳ ಮಾಲಿಕರು ಹೊಟ್ಟೆಪಾಡಿಗಾಗಿ ಬೇರೆಯವರನ್ನು ಬೈಯ್ದು ಹಣ ಸಂಪಾದಿಸುವರು. ನಮಗೆ ಏನೂ ಖರ್ಚು-ಕಂದಾಯವಿಲ್ಲದೆ ಆ ಜನರ ಉಪಜೀವನ ನಡೆದರೆ ಸಂತೋಷ ಪಡೋಣವಲ್ಲವೆ ?

- ಕಲ್ಯಾಣೇಶ್ವರಿ, ರಾಯಚೂರು

? ನೀವು ರಚಿಸಿರುವ ವೈವಿಧ್ಯಮಯ ಸಾಹಿತ್ಯ, ಮಾಡಿರುವ ಸಾಧನೆ ಒಂದು ಪಿಹೆಚ್‌ಡಿ ಪ್ರಬಂಧಕ್ಕಾಗುವಷ್ಟಿದೆ. ಆದರೂ ಕೆಲವು ಸಾಹಿತಿಗಳು ನಿಮ್ಮ ಸಾಧನೆ ಅರಿಯದೆ ಟೀಕಿಸುವರಲ್ಲ ; ಹೀಗೇಕೆ ?

★ ಓಹೋ ; ನೀವು ಹೇಳುವುದು ಸಾಹಿತಿ, ಸಂಶೋಧಕರ ಬಗ್ಗೆ ಅಲ್ಲವೆ ? ಅವರುಗಳು ವ್ಯಕ್ತಿಗಳು ಸತ್ತ ನಂತರ ಅಧ್ಯಯನ ಮಾಡಿ, ಸಂಶೋಧನೆ ಮಾಡಿ ಬರೆಯುವವರು; ಇದ್ದವರ ಸಾಧನೆ ಅವರಿಗೆ ನಗಣ್ಯ ಇರಬಹುದು.

- ಚನ್ನಬಸಪ್ಪ ಬಿಜಲಿ, ಗೋಕಾಕ್

? ತಾವು ಜನರಿಂದ ಕೇಳಿ ಕಾಣಿಕೆ ಪಡೆಯುತ್ತೀರಿ. ಪೂಜ್ಯ ಸಿದ್ದೇಶ್ವರ ಸ್ವಾಮಿಗಳು ಕೊಟ್ಟ ಹಣವನ್ನೂ ತೆಗೆದುಕೊಳ್ಳದೆ ವಾಪಸ್ಸು ಮಾಡುತ್ತಾರೆ ಎಂದು ನಿಮ್ಮ ಬಗ್ಗೆ ಕೆಲವರ ಟೀಕೆ.

★ ಒಬ್ಬೊಬ್ಬರ ಧ್ಯೇಯಾದರ್ಶಗಳು ಬೇರೆಯೇ ಆಗಿರುತ್ತವೆ. ರಾಮಕೃಷ್ಣ ಪರಮ ಹಂಸರಿಗೆ, ಅಲ್ಲಮಪ್ರಭುದೇವರಿಗೆ ಹಣ ಬೇಕಾಗದು. ಅದೇ ಬಸವಣ್ಣನವರಿಗೆ, ವಿವೇಕಾನಂದರಿಗೆ ಬೇಕಾಗುತ್ತದೆ. ಬಸವಣ್ಣನವರ ಆದರ್ಶ ಪರಿಕಲ್ಪನೆಯ ಜಂಗಮ ಸಾಮಾಜಿಕ ಹೊಣೆಗಾರಿಕೆ ಹೊತ್ತ ತ್ಯಾಗಿ. ತನ್ನ ಪ್ರತಿಭೆ, ಪರಿಶ್ರಮ, ತ್ಯಾಗಗಳನ್ನು ಉಪಯೋಗಿಸಿಕೊಂಡು ಸಮಾಜಕ್ಕೆ ಏನಾದರೂ ಕೊಡುಗೆ ಕೊಡಬೇಕೆನ್ನುವವನು.

- ಸಿ.ಬಿ. ಬೇವನೂರು, ಭೀಮರಾಯನ ಗುಡಿ

? 63 ಅಡಿ ಎತ್ತರದ ದೊಡ್ಡ ವೆಚ್ಚದ ಬಸವಣ್ಣನವರ ಮೂರ್ತಿ ಮಾಡಿಸುವ ಬದಲು ಶಾಲೆ-ಕಾಲೇಜು ಕಟ್ಟಿಸಿದರೆ ಹೆಚ್ಚು ಪ್ರಯೋಜನಕಾರಿಯಲ್ಲವೆ ? ಎಂದು ನಮ್ಮ ಪರಿಚಿತರೊಬ್ಬರ ವಾದ. ತಮ್ಮ ಅನಿಸಿಕೆ ?

★ ಬೃಹತ್ ಸ್ಮಾರಕಗಳ ರಚನೆ ಮಹತ್ವಪೂರ್ಣ ಕೆಲಸ. ಬುದ್ಧನ ಬಗ್ಗೆ ಅಭಿಮಾನಿ ಅನುಯಾಯಿಗಳು ನಿರ್ಮಿಸಿದ ಅಜಂತಾ ಗವಿಗಳು ಅಲ್ಲಲ್ಲಿಯ ಬೃಹತ್ ಮೂರ್ತಿಗಳು ಬುದ್ಧನನ್ನು, ಬೌದ್ಧ ಧರ್ಮವನ್ನು ಜಗತ್ತಿಗೇ ಪರಿಚಯ ಮಾಡಿವೆ. ದೆಹಲಿಯ ಲೋಟಸ್ ಟೆಂಪಲ್ ದೆಹಲಿಗೆ ಬಂದ ಪ್ರವಾಸಿಕರ ಗಮನ ಸೆಳೆಯುವುದಲ್ಲದೆ ಇರಾನಿನ ಒಬ್ಬ ಸಂತ ಬಹಾಉಲ್ಲಾನ ಪರಿಚಯ ಮಾಡಿಸುತ್ತದೆ. ಗೊಮ್ಮಟೇಶ್ವರನ ಬೃಹತ್ ಮೂರ್ತಿ ಬಾಹುಬಲಿಯನ್ನು ಮಾತ್ರವಲ್ಲ ಜೈನ ಧರ್ಮ ಪರಿಚಯ ಮಾಡಿಸುತ್ತದೆ. ಸುತ್ತೂರು ಶ್ರೀಗಳು ದೆಹಲಿ ಸಮೀಪ ಇಂಜಿನಿಯರಿಗ್ ಕಾಲೇಜ್ ಕಟ್ಟಿದ್ದಾರೆ. ಅದೇನಾದರೂ ನಮ್ಮ ಧರ್ಮದ ಪರಿಚಯ ಮಾಡಿಕೊಡುವ ಒಂದು ಸ್ಮಾರಕವಾಯಿತೆ ? ಎಲ್ಲ ಲಿಂಗಾಯತ ಮಠಗಳವರೂ ತಪ್ಪದೆ ವಿದ್ಯಾಸಂಸ್ಥೆ ಕಟ್ಟಿದ್ದಾರೆ. ಧರ್ಮಶ್ರದ್ಧೆ, ಇಷ್ಟಲಿಂಗನಿಷ್ಠೆ ಇಲ್ಲದ ಜನರು ತಂಡೋಪತಂಡವಾಗಿ ಅವುಗಳಿಂದ ಹೊರಬರುತ್ತಾರೆ. ಆದ್ದರಿಂದ ಧರ್ಮಮಂದಿರ, ಸ್ಮಾರಕಗಳ ರಚನೆ ಇಂದಿನ ಅಗತ್ಯವಾಗಿದೆ ಎಂದೇ ನಮ್ಮ ಅನಿಸಿಕೆ. ★★★

ವಚನ - 1 ಚಿಂತನೆಗಾಗಿ .. !?

ಬಸವ ವಚನ ದೀಪ್ತಿ ಒಂದು ಪರಿಷ್ಕರಣಗೊಂಡ ವಚನ ಕೃತಿ. ಕೇವಲ ಎರಡು ತಿಂಗಳ ಹಿಂದೆ ಬಸವಣ್ಣನವರ ಲಿಂಗೈಕ್ಯ ಅಷ್ಟಶತಮಾನೋತ್ಸವಕ್ಕಾಗಿ ಒಂದು ಕಾಣಿಕೆಯನ್ನು ಕೊಡಬೇಕೆಂದು ನಿಶ್ಚಯಿಸಿದೆ. ವಿವರವಾಗಿ ಪರಿಷ್ಕರಿಸಲು ಅಗತ್ಯವಿರುವ ಸಮಯ ಸಿಗಲಿಲ್ಲ. ಪುನಃ ಪುನಃ ನಿರಂತರವಾಗಿ ಅಧ್ಯಯನ ಮಾಡುವಾಗ ಕೆಲವೊಂದು ವಚನಗಳ ಬಗ್ಗೆ ಪುನರ್‌ಪರಿಶೀಲನೆ ಮಾಡಬೇಕೆನ್ನಿಸುತ್ತಿದೆ. ಅಂಥ ಒಂದು ವಚನವನ್ನು ಪ್ರತಿ ತಿಂಗಳು ಕೊಡಲಾಗುವುದು. ಈ ಬಗ್ಗೆ ಕಲ್ಯಾಣ ಕಿರಣ ಓದುಗರು ಅಭಿಪ್ರಾಯ ಕಳಿಸಬಹುದು ಮತ್ತು ತಾವೂ ಅಂತಹ ಅರ್ಥವಾಗದ, ಸಂದೇಹಾತ್ಮಕ ವಚನವನ್ನು ಕಳಿಸಬಹುದು. ಕಲ್ಯಾಣ ಕಿರಣದಲ್ಲಿ ವಿಮರ್ಶಿಸಲಾಗುವುದು :

ಸಂತವಿದ್ದ ಮನೆಗೆ ಕೊಂತವ ತಂದಂತೆ
ಇದನೆಂತು ಸಂತೈಸುವೆನು ?
ಸಂತೆಯ ಗುಡಿಸಲ ಸೂಳೆಗೆ ಕೊಂತವಳವಡುವುದೆ ?
ಕೂಡಲ ಸಂಗಮದೇವರ ಮಹತ್ವ ಆರಿಗೆಯೂ ಅಳವಡದು ಬ.ವ.ದೀ 100

ಈ ಸದ್ಯದಲ್ಲಿ ಎಲ್ಲರೂ ಈ ರೀತಿ ಮುದ್ರಿಸಿದ್ದಾರೆ; ಲಿಂ॥ ಶರಣ. ಡಾ॥ ತಿಪ್ಪೇರುದ್ರ ಸ್ವಾಮಿ, ಡಾ॥ ಶರಣ. ಎಲ್. ಬಸವರಾಜು ಅವರು ವ್ಯಾಖ್ಯಾನ ಸಹ ಬರೆದಿದ್ದಾರೆ. ಯಾರ ಅರೆಜ್ಞಾನದಿಂದಲೋ, ಹಸ್ತ ಬರಹದ ದೋಷದಿಂದಲೋ ಒಂದು ವಚನ ಬಳಕೆಯಲ್ಲಿದ್ದರೆ ಅದಕ್ಕೇ ಕಷ್ಟಪಟ್ಟು ವ್ಯಾಖ್ಯಾನ ಮಾಡುವುದು ಈಗ ರೂಢಿಯಲ್ಲಿರುವ ಪರಿಪಾಠ.

ಈ ವಚನ ಏಕದೇವೋಪಾಸನೆ ಕುರಿತು ಹೇಳುತ್ತಿದೆ. ಸುಖ, ಸಮೃದ್ಧಿ ಶಾಂತಿಗಳಿಂದ ಕೂಡಿದ ಒಂದು ಮನೆಗೆ ಅತ್ಯಂತ ಶಕ್ತಿಶಾಲಿಯಾದ ಒಂದು ಆಯುಧವನ್ನು ತಂದಿಟ್ಟುಕೊಂಡರೆ ಅನವಶ್ಯಕ ಗೊಂದಲ, ಭಯ ಇವುಗಳಿಗೆ ಆಹ್ವಾನ ಕೊಟ್ಟಂತೆ. ಇಂಥ ಕ್ರಿಯೆಯನ್ನು ಹೇಗೆ ಸೈರಿಸುವುದು ? ಸಂತೈಸುವೆನು ಎಂಬ ಪದಕ್ಕೆ ಬದಲಾಗಿ ಸೈರಿಸುವೆ ಎಂಬ ಒಂದು ಪದ ಅಡಿ ಟಿಪ್ಪಣಿಯಲ್ಲಿದೆ (ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ ಸಂ॥ ಡಾ. ಆರ್.ಸಿ. ಹಿರೇಮಠ) ಸಂತೆಯಲ್ಲಿ ಒಂದು ಗುಡಿಸಲು ಹಾಕಿಕೊಂಡು ವೇಶ್ಯಾವೃತ್ತಿ ಮಾಡುವವಳಿಗೆ.......ಈ ಜಾಗದಲ್ಲಿ ಕೊಂತದ ಬದಲು ಸಂತ ಇದ್ದರೆ ಸೂಕ್ತ ಎನಿಸುತ್ತದೆ. ಅಂಥವಳಿಗೆ ಮನಶ್ಶಾಂತಿ ಎಲ್ಲಿಯದು; (ಅಥವಾ ಏಕಾಂತದ ನೆಮ್ಮದಿ ಎಲ್ಲಿ ಸಿಕಲು ಸಾಧ್ಯ) ವಿಟರು ಸಾಲುಗಟ್ಟಿ ನಿಂತು ಗದ್ದಲ ಮಾಡುತ್ತಿರುತ್ತಾರೆ. ಅದೇ ರೀತಿ ಬಹುದೇವತೋಪಾಸಕರು ನೂರಾರು ದೇವತೆಗಳನ್ನು ನಂಬಿ, "ಅದನ್ನು ಪೂಜಿಸುವುದು ಬಿಟ್ಟರೆ ಎಲ್ಲಿ ಕೋಪಗೊಳ್ಳುತ್ತೋ, ಇದನ್ನು ಪೂಜಿಸುವುದು ಬಿಟ್ಟರೆ ಇದೆಲ್ಲಿ ಕೆಡುಕು ಮಾಡುವುದೋ" ಎಂಬ ಭಯ-ಆತಂಕಗಳಲ್ಲಿ ತೊಳಲುತ್ತಾರೆ. ಪತಿವ್ರತೆಗೆ ಆ ಭಯವಿಲ್ಲ; ತನ್ನ ಪತಿಯಲ್ಲಿ ಅನನ್ಯ ಪ್ರೇಮ, ತುಂಬು ವಿಶ್ವಾಸ. ವೇಶ್ಯೆಗೆ ಯಾರನ್ನೂ ಎದುರು ಹಾಕಿಕೊಳ್ಳಲು, ಗಿರಾಕಿ ಕಳೆದುಕೊಳ್ಳಲು ಇಷ್ಟವಿಲ್ಲದೆ ಚಟಪಟಿಸುತ್ತಾಳೆ. ಇದೇ ರೀತಿ ಸೃಷ್ಟಿಕರ್ತ ಲಿಂಗದೇವನನ್ನು ದೃಢವಾಗಿ ನಂಬಿ, ಅವನ ಕುರುಹಾದ (ತಾಳಿಯಂತೆ) ಇಷ್ಟಲಿಂಗವನ್ನು ಧರಿಸಿ ಒಮ್ಮನದಿಂದ ನಡೆಯುವ ಲಿಂಗನಿಷ್ಠನು ಪತಿವ್ರತೆಯಂತೆ ಸಂತವಾದ ನೆಮ್ಮದಿಯ ಬದುಕು ಬದುಕುತ್ತಾನೆ. ಆದ್ದರಿಂದ ಈ ವಚನವು ಕೆಳಗಿನಂತಿದ್ದರೆ ಸುಲಭಗ್ರಾಹ್ಯವಾಗುವುದು, ಸುಸಂಬದ್ಧವಾಗುವುದು.

ಸಂತವಿದ್ದ ಮನೆಗೆ ಕೊಂತವ ತಂದಂತೆ, ಇದನ್ನೆಂತು ಸೈರಿಸುವೆನು ?
ಸಂತೆಯ ಗುಡಿಸಲ ಸೂಳೆಗೆ ಸಂತವಳವಡುವುದೆ ?
(ಅಥವಾ ಸಂತೆಯ ಗುಡಿಸಲು ಸೂಳೆಗೇ(ಏ)ಕಾಂತವಳವಡುವುದೆ ?)
ಲಿಂಗದೇವರ ಮಹತ್ವ ಆರಿಗೆಯೂ ಅಳವಡದು.

ಇದಕ್ಕೆ ಪ್ರತಿಕ್ರಿಯೆಗಳನ್ನು ಕಳಿಸಬಹುದು ★★★

ಧರ್ಮ ಪ್ರಚಾರಕರಿಗೆ ಗೌರವ ಧನ

ಕಲ್ಯಾಣ ಕಿರಣ ಮಾಸಪತ್ರಿಕೆಯಲ್ಲಿ ಧರ್ಮಪ್ರಚಾರಕರ ತರಬೇತಿ ಮತ್ತು ಪ್ರತಿ ತಿಂಗಳು ಒಬ್ಬರಿಗೆ ರೂ. 500 ಗೌರವ ಧನ ಕೊಡುವ ಯೋಜನೆ ಬಗ್ಗೆ ಜುಲೈಯಲ್ಲಿ ಪ್ರಕಟಿಸಲಾಗಿತ್ತು. ಆ ಸಂಚಿಕೆ ಓದಿ ಕೆಲವು ಶರಣರು ತಿಂಗಳಿಗೆ ರೂ. 500 ಕೊಡಲು ಮುಂದೆ ಬಂದಿದ್ದಾರೆ:
1. ಶರಣ. ಸಿ. ಅನಿಲ ಕುಮಾರ್, ಬೆಂಗಳೂರು, 2. ಶರಣೆ. ಸರೋಜಮ್ಮ ನಾಗರಾಜ್, ಮೈಸೂರು, 3. ಶರಣ. ಎ.ಸಿ. ಮೂಲೀಮನಿ, ಶಿವಮೊಗ್ಗ. ಈಗಾಗಲೇ ಶರಣ. ಪ್ರಶಾಂತ ಪಾಟೀಲ್ ಅವರ ಮುಂದಾಳತ್ವದಲ್ಲಿ ಕುಷ್ಟಗಿ, ಯಲಬುರ್ಗಾ ಮುಂತಾದ ತಾಲ್ಲೋಕುಗಳಿಂದ ಸುಮಾರು 25 ಜನರನ್ನು ಆಯ್ಕೆ ಮಾಡಲಾಗಿದೆ. ಆದ್ದರಿಂದ ಮತ್ತಷ್ಟು ಶರಣ ಬಂಧುಗಳು ಧರ್ಮ ಪ್ರಚಾರಕ ದಲಿತ ಯುವತಿಯರಿಗೆ ಮಾಸಿಕ ಗೌರವ ಧನ ಕೊಡಲು ಮನಸ್ಸು ಮಾಡಬೇಕೆಂದು ಕೋರುತ್ತೇವೆ.

- ಮಾತಾಜಿ, ಬಸವ ಧರ್ಮ ಪೀಠ



1. ದೇವಸೂಗೂರು (ಶಕ್ತಿನಗರ)ದಲ್ಲಿ ದಿ. 3-6-2004 ರಂದು ಪೂಜ್ಯ ಗಂಗಾ ಮಾತಾಜಿ ಪ್ರವಚನದ ಉದ್ಘಾಟನೆ ಸಹಾಯಕ ಆಯುಕ್ತ ಶ್ರೀ ತಿಮ್ಮಪ್ಪನವರಿಂದ



2. ಪ್ರವಚನದ ಮುಕ್ತಾಯ (8-7-2004)ದಂದು ಮುಖ್ಯ ಅತಿಥಿಗಳಾಗಿ ಆಗಮಿಸಿದ ಪೂಜ್ಯ ಮಾತಾಜಿಯವರಿಗೆ ದೇವಾಲಯದ ಆಡಳಿತಾಧಿಕಾರಿ ತಿಮ್ಮಪ್ಪನವರಿಂದ ಗೌರವಾರ್ಪಣೆ

ದೇವ ಸೂಗೂರು

ಮಹತ್ವದ ಚಾರಿತ್ರಿಕ ಕ್ಷೇತ್ರ

- ಮಾತಾಜಿ

ನಾನು ಕಲ್ಯಾಣ ಕಿರಣದಲ್ಲಿ ಚನ್ನಬಸವಣ್ಣನವರ ಒಂದು ಗೀತೆ ''ಜಾತಿವಿಡಿದ್ದು ನೆನೆವರೆ'' ಎಂಬುದರಲ್ಲಿ ಬರುವ

ಜಂಗಮ ಪ್ರಸಾದವನ್ನು ಬಂಡಿ ಮೇಲೆ ಹೇರಿಕೊಂಡು
ಗಂಡುಗಲಿ ಬಾಚಿರಾಜ ಮುಂದೆ ನಡೆಯಲು
ಎಂಜಲೆಂದು ಬೊಗಳಿದವರ ಮಂಡೆ ಮೇಲೆ ತಳಿಯಲು
ಕೆಂಡವಾಗಿ ಉರಿದುದನು ಕೇಳಿ ಅರಿಯಿರೆ

ಎಂಬ ಬಗ್ಗೆ ಜುಲೈ 2004ರ ಸಂಚಿಕೆಯ ಸಮಸ್ಯೆ-ಸಮಾಧಾನ ವಿಭಾಗದಲ್ಲಿ ಪ್ರಕಟಿಸಿದ್ದೆ. ಚಿಕ್ಕಮಗಳೂರಿನ ಬಾಣೂರು ಬಸವ ಶ್ರೀ ಪ್ರಶ್ನೆ ಕೇಳಿದ್ದು ನನಗೆ ಆ ಬಗ್ಗೆ ಎಲ್ಲೂ ಮಾಹಿತಿ ಸಿಕ್ಕಿರಲಿಲ್ಲ. ಹೀಗಾಗಿ ನಾನು ಊಹೆ ಮಾಡಿ ಉತ್ತರ ನೀಡಿದ್ದೆ. ಶರಣರ ಬಗ್ಗೆ ಬಹಳಷ್ಟು ಮಾಹಿತಿ ಕೊಡುವ ಶಿವಶರಣರ ಕಥಾರತ್ನ ಕೋಶವನ್ನು ನೋಡೋಣ ಎಂದರೆ ಆ ಪುಸ್ತಕವನ್ನು ಎಲ್ಲೋ ಇಟ್ಟು ಮರೆತು ಬಿಟ್ಟಿದ್ದೆ. ಹುಡುಕಿ ಸಮಯ ಹರಣವಾಯಿತೇ ವಿನಾ ಫಲವು ಲಭ್ಯವಾಗಲಿಲ್ಲ. ಕಲ್ಯಾಣ ಕಿರಣ ಮುದ್ರಣವಾದ ನಂತರ ಪ್ರವಾಸ ಹೊರಟೆ.

ನನಗೆ ಅಷ್ಟು ಬೇಗನೆ ಮಾಹಿತಿ ಸಿಗಬಹುದೆಂಬ ಕಲ್ಪನೆ ಸಹ ಇರಲಿಲ್ಲ. ದಿ.8-7-2004 ರಾಯಚೂರು ಜಿಲ್ಲೆ ಮತ್ತು ತಾಲ್ಲೋಕಿನ ಶಕ್ತಿನಗರಕ್ಕೆ ಹೊಂದಿಕೊಂಡಿರುವ ದೇವ ಸೂಗೂರು ಎಂಬಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನದ ಮುಕ್ತಾಯ ಸಮಾರಂಭಕ್ಕೆ ಹೋದೆ. ಪ್ರವಚನ ಇದ್ದುದು ಸುಪ್ರಸಿದ್ಧ ಸೂಗೂರೇಶ್ವರ ದೇವಾಲಯದ ಹೊರಗಿನ ಸುಂದರ ಮತ್ತು ಪ್ರಶಾಂತ ಬಯಲಲ್ಲಿ. ರಸ್ತೆ ತೀರಾ ಕೆಟ್ಟಿದ್ದುದರಿಂದ ಗಂಗಾ ಮಾತಾಜಿ ಜೊತೆ ಮಾತನಾಡಲೂ ಸಮಯವಿರದಷ್ಟು ತಡವಾಗಿ ಊರು ತಲ್ಪಿದ್ದೆವು, ಕಾರಲ್ಲಿ ಹೋಗುವಾಗ ಪೂಜ್ಯ ಗಂಗಾ ಮಾತಾಜಿ ಹೇಳಿದರು, ''ನಾವು ಸೂಗೂರೇಶ್ವರ ದೇವಾಲಯದ ಬಯಲ ಮಂಟಪದಲ್ಲಿ ಪ್ರವಚನ ಮಾಡುತ್ತಿದ್ದೇವೆ. ಕೆಲವರು ಹೇಳುತ್ತಾರೆ, 'ಇದು ಶಿವದೇವಾಲಯ' ಎಂದು, ಪಂಚಾಚಾರ್ಯ ಸ್ವಾಮಿಗಳೊಬ್ಬರು ಬಂದಾಗ, 'ಇದು ರೇಣುಕ ಶಾಖೆಯ ಶಿವಾಚಾರ್ಯರ ಸ್ಥಾನ'' ಎಂದರಂತೆ.

ಶ್ರೀ ಜಚನಿ ಬಂದಾಗ ಇದು ನಿಡುಮಾಮಿಡಿ ಮಠಕ್ಕೆ ಸಂಬಂಧಿಸಿದ್ದು ಎಂದರಂತೆ. ಮತ್ತೆ ಕೆಲವರು 'ಇದು ಕಲ್ಯಾಣದಿಂದ ಬಂದ ಶರಣರದು. ಇವರ ಜೊತೆಗೆ ಬಿಬ್ಬಿ ಬಾಚಯ್ಯ ಸಹ ಬಂದರಂತೆ' ಎಂದರು. ಈ ಬಗ್ಗೆಯೇ ಆಲೋಚಿಸುತ್ತ ಕ್ಷೇತ್ರದ ಮಹಿಮೆ ಕುರಿತು ಹೇಳಿದೆ. ಶರಣ ಪರಂಪರೆಯಲ್ಲಿ ಬರುವ ಶರಣರ ಹೆಸರಿನ ಮುಂದೆ 'ದೇವರು' ಎಂಬ ವಿಶೇಷಣ ಬರುತ್ತದೆ. ಬಸವರಾಜ ದೇವರು, ಪ್ರಭುದೇವರು, ಮಡಿವಾಳ ಮಾಚಿದೇವರು ಇತ್ಯಾದಿ. ಹಿಪ್ಪರಗಿ

ಮಾಚಿದೇವರ ಹುಟ್ಟೂರು. ಹೂವಿನ ಹಿಪ್ಪರಗಿಯಿಂದ ಇದು ಬೇರೆ ಎಂಬುದನ್ನು ಸಂಕೇತಿಸಲು ಅದಕ್ಕೆ (ಮಾಚಿ)ದೇವರ ಹಿಪ್ಪರಗಿ ಎಂದು ಹಿಂದಿನಿಂದಲೂ ಕರೆಯಲಾಗುತ್ತಿದೆ. ಹಾಗೆಯೇ ಇದೂ ಸಹ ದೇವ(ರ) ಸೂಗೂರು; ಶರಣರ ಸ್ಥಾನ'' ಎಂದು ಪ್ರವಚನದಲ್ಲಿ ಹೇಳಿದೆ.

ನಮ್ಮ ಜನರು ಮಾಡುವ ಒಂದು ತಪ್ಪೆಂದರೆ ಮೂಲ ಹೆಸರನ್ನು ಬಿಟ್ಟು ಅಡ್ಡಾತಿಡ್ಡ ಕರೆಯುವ ಹವ್ಯಾಸ ಬೆಳೆಸಿಕೊಳ್ಳುವುದು. ಉದಾಹರಣೆಗೆ ಉಳುವೆಪ್ಪ, ಎಡೆಯೂರಪ್ಪ ಎನ್ನುವುದು. ಉಳುವೆಪ್ಪ ಎಂದರೆ ಚನ್ನಬಸವಣ್ಣ, ಎಡೆಯೂರಪ್ಪ ಎಂದರೆ ಸಿದ್ಧಲಿಂಗೇಶ್ವರರು ಎನ್ನುವ ಐತಿಹಾಸಿಕ ಶರಣರು ಎಂಬ ಕಲ್ಪನೆಯೇ ಬಹಳ ಜನರಿಗೆ ಇರದು. ಜೊತೆಗೆ ಅವರನ್ನು ಪೌರಾಣಿಕ ವ್ಯಕ್ತಿಗಳ ಜೊತೆಗೆ ಸಮೀಕರಿಸಿ ಪುರಾಣ ಬೇರೆ ರಚಿಸುತ್ತಾರೆ. ಐತಿಹಾಸಿಕ ವ್ಯಕ್ತಿಗಳ ಕ್ರಾಂತಿಕಾರಿ ಆಲೋಚನೆಗಳನ್ನು ಕೊಂದು ಅವರನ್ನು ಈಜಿಪ್ಷಿಯನ್ನರ ಮಮ್ಮಿಗಳಂತೆ ಮಾಡಿಯೂ ಬಿಡುತ್ತಾರೆ. ಮಲೆ ಮಾದೇಶ್ವರರು ಸಹ ಇದೇ ರೀತಿ ಜಡಗಟ್ಟಿಸಲ್ಪಟ್ಟಿದ್ದಾರೆ. ಗೊಡಚಿ ವೀರಭದ್ರನ ಸ್ಥಾನ ಎಂದು ಪ್ರಚಾರಗೊಂಡಿದೆ. ನಿಜವಾಗಿಯೂ ಹೇಳಬೇಕೆಂದರೆ ಗೊಡಚಿಗೆ ಮಹತ್ವ ಬಂದುದು ಮಡಿವಾಳ ಮಾಚಿದೇವರ ಲಿಂಗೈಕ್ಯ ಘಟನೆಯಿಂದ. ಆದರೆ ಇಂದು ಮಾಚಿದೇವರ ಆಲೋಚನೆಗಳತ್ತ ಇರಲಿ, ಅವರಿಗೇ ಅಲ್ಲಿ ನಗಣ್ಯ ಸ್ಥಾನ.

ಪಾಶ್ಚಿಮಾತ್ಯರಲ್ಲಿ ಐತಿಹಾಸಿಕ ಪ್ರಜ್ಞೆ ಎಷ್ಟು ಪ್ರಖರವಾಗಿದೆಯೋ ಭಾರತೀಯರಲ್ಲಿ ಅಷ್ಟೇ ದುರ್ಬಲವಾಗಿದ್ದು ನಿನ್ನೆ ಮೊನ್ನೆ ಆಗಿಹೋದವರು ಸಹಿತ ಮರ್ತ್ಯದ ಸಂಬಂಧ ಕಳೆದುಕೊಂಡು ಪುರಾಣಪುರುಷರಾಗಿ ಬಿಡುತ್ತಾರೆ. ಹಾಗೆಯೇ ಸೂಗೂರಪ್ಪ, ಸೂಗೂರೇಶ ಎಂದರೆ ಐತಿಹಾಸಿಕ ಶರಣರಾದ ಚನ್ನವೀರ(ದೇವರು) ಸ್ವಾಮಿಗಳು. ಕಾರ್ಯಕ್ರಮ ಮುಗಿದ ನಂತರ ಅದು ಶರಣರ ಜಂಗಮಕ್ಷೇತ್ರ ಎಂದು ಮನವರಿಕೆಯಾದುದರಿಂದ ಒಳಗೆ ಹೋದೆವು. ಸರ್ಕಾರಿ ವಶದಲ್ಲಿರುವ ದೇವಾಲಯವಾಗಿರುವುದರಿಂದ ರಾತ್ರಿ 10-00ಕ್ಕೆ ಬಾಗಿಲು ಮುಚ್ಚಿತ್ತು. ಆದರೆ ಆ ಶರಣಾಲಯದ ಮೇಲೆ ಸುತ್ತಲೂ ಐತಿಹಾಸಿಕ ಘಟನೆ ಚಿತ್ರಿಸಿದ ಮೂರ್ತಿಗಳಿದ್ದವು. ಇದರಿಂದ ನನ್ನ ಸಂತೋಷ ಇಮ್ಮಡಿಸಿತು.

ಕಾರ್ಯಕ್ರಮ ಮುಗಿಸಿ ರಾತ್ರಿಯೇ ಪ್ರಯಾಣ ಮಾಡಿ ಗುಲಬರ್ಗಾಕ್ಕೆ ಹೊರಟೆ; ನಂತರ ಬಸವ ಕಲ್ಯಾಣ. ವಾಪಸ್ಸು ಬರುವಾಗ ಕೂಡಲ ಸಂಗಮದಲ್ಲಿ ಕುತೂಹಲದಿಂದ ದೇವಸ್ಥಾನ ಸಮಿತಿಯವರು ಕೊಟ್ಟ ಸೂಗೂರೇಶ್ವರ ಪುರಾಣದ ಪೀಠಿಕೆ ಓದಿದೆ. ಬಹಳ ಸಂತೋಷವಾಯಿತು. ಶಿವಶರಣರ ಕಥಾರತ್ನ ಕೋಶವೂ ಸೆಲ್ಫಲ್ಲಿ ಕಂಡು ಸಂತೋಷ ಮುಮ್ಮಡಿಸಿತು. ಬಿಬ್ಬಿ ಬಾಚಯ್ಯನ ವಿಷಯ ಸಿಕ್ಕಿತು. ನನಗೂ ಕಾಡುತ್ತಿದ್ದ ಮತ್ತು ಬಾಣೂರು ಬಸವ ಶ್ರೀ ಮುಂತಾದವರನ್ನು ಕಾಡುತ್ತಿದ್ದ ವಿಷಯದ ವಿವರ ಸಿಕ್ಕಿತು.

ವಿಶ್ವಗುರು ಬಸವಣ್ಣನವರು ಕಾಶ್ಮೀರಕ್ಕೆ ಹೋಗಿ ಬಂದಿರುವುದು ಒಂದು ಮಹತ್ವಪೂರ್ಣ ಪ್ರಸಂಗ. ಶಂಕರ ಕವಿಯ ಚೋರಬಸವ ಪುರಾಣ (ಕ್ರಿ.ಶ. 1763) ಮತ್ತು ಗೌರಾಂಕ ಕವಿಯ ಮೋಳಿಗಯ್ಯನ ಪುರಾಣ (ಕ್ರಿ.ಶ. 1525)ಗಳಲ್ಲಿ ಈ ಕಾಶ್ಮೀರ ಪ್ರವಾಸದ ಉಲ್ಲೇಖ

ಬರುತ್ತದೆ. ಬಸವಣ್ಣನವರು ವ್ಯಾಪಾರಿಶೆಟ್ಟಿಯ ವೇಷದಲ್ಲಿ ಹೋಗಿ ಕಾಶ್ಮೀರದ ಸಪಾದ ಲಕ್ಷದ ಮಹಾದೇವ ಭೂಪಾಲನ ಅರಮನೆಯಲ್ಲಿದ್ದ ಶ್ರೀ ಚೆನ್ನವೀರರನ್ನು ಮತ್ತು ಆರು ಸಾವಿರ ಜಂಗಮರನ್ನು ಆಕರ್ಷಿಸಿ, ಮಂತ್ರ ಮುಗ್ಧರನ್ನಾಗಿ ಮಾಡಿ ಚೀಲದಲ್ಲಿ ತುಂಬಿಕೊಂಡು ಬಂದುಬಿಟ್ಟರಂತೆ. ಮೊದಲಿನ ಹೆಸರು ಏನಿತ್ತೋ; ಅಂತೂ ಅವರು ಕಲ್ಯಾಣಕ್ಕೆ ಬಂದು ಚೆನ್ನವೀರ ದೇವರು (ಶರಣರು) ಆದರು.

ಇಂದಿನ ರಾಯಚೂರು ಜಿಲ್ಲೆಯ ಗೊಬ್ಬೂರಿನ ವ್ಯಕ್ತಿ ಬಾಚಿರಾಜ. ಕುಲದಿಂದ ಬ್ರಾಹ್ಮಣ. ಬಿಜ್ಜಳನ ಅರಮನೆಯಲ್ಲಿ ಊಳಿಗಕ್ಕೆ ಇದ್ದ ಆತನೂ ಬಸವ ಪ್ರಭಾವ ವಲಯಕ್ಕೆ ಸಿಕ್ಕಿ ಲಿಂಗಾಯತ ಧರ್ಮ ಸ್ವೀಕರಿಸಿದ್ದ. ಸ್ವಯಂ ಪ್ರೇರಣೆಯಿಂದ ಧರ್ಮಾಂತರ ಹೊಂದಿದವರಲ್ಲಿ ಪ್ರಚಾರದ ಉತ್ಸಾಹ ಅತುಳ. ಬಾಚಯ್ಯ ತನ್ನ ಊರಿಗೆ ಜಂಗಮ ಮೂರ್ತಿಗಳನ್ನು ಕರೆದೊಯ್ದು ಧರ್ಮಪ್ರಚಾರ ಮಾಡಿಸುವ, ಇತರರಿಗೂ ದೀಕ್ಷೆ ಕೊಡಿಸುವ ಹಂಬಲ ಹೊಂದಿರುವುದು ಸ್ವಾಭಾವಿಕ.

ಕಥೆ ಮುಂದುವರಿಸುವ ಮೊದಲು ಒಂದು ವಿಷಯ ಹೇಳುವುದು ಸೂಕ್ತ. ಪ್ರಸಾದವನ್ನು ಬಾಚಿರಾಜನು ಜಾತಿವಾದಿಗಳ ತಲೆಯ ಮೇಲೆ ಜಡಿಯುವ ಪ್ರಸಂಗ ಕಲ್ಯಾಣ ಕ್ರಾಂತಿಯ ಪೂರ್ವದ್ದೋ ಅಥವಾ ನಂತರದ್ದೋ ಎಂಬ ಸಂದೇಹವನ್ನು ಡಾ|| ಬಸವ ಲಿಂಗಯ್ಯ ಸೊಪ್ಪಿಮಠ ಅವರು ಶ್ರೀ ಸೂಗೂರೇಶ್ವರ ಪುರಾಣದ ಪ್ರಸ್ತಾವನೆಯಲ್ಲಿ (ಪುಟ 14) ವ್ಯಕ್ತಪಡಿಸಿದ್ದಾರೆ. ಇದು ನಿಶ್ಚಿತವಾಗಿಯೂ ಕಲ್ಯಾಣ ಕ್ರಾಂತಿಗೂ ಪೂರ್ವದ್ದು. ಏಕೆಂದರೆ ಚನ್ನಬಸವಣ್ಣನವರು ಹಾಡಿದ ಗೀತೆಯಲ್ಲಿ (ಶಿವದಾಸ ಗೀತಾಂಜಲಿ, ಪದ್ಯ 203, ಪುಟ 371) ಪ್ರಸ್ತಾಪವಾಗಿದೆ. ಕಲ್ಯಾಣ ಕ್ರಾಂತಿಯ ನಂತರದ ಘಟನೆಯಾದರೆ ರಾಯಚೂರು ಜಿಲ್ಲೆಯಲ್ಲಿ ನಡೆದ ಪ್ರಸಾದದ ಪ್ರಸಂಗ ಉಳಿವೆಯ ದುರ್ಗಮ ಅರಣ್ಯದಲ್ಲಿ ನೆಲೆಸಿದ್ದ ಚನ್ನಬಸವಣ್ಣನವರಿಗೆ ಅಷ್ಟು ಸುಲಭವಾಗಿ ತಿಳಿಯಲು ಸಾಧ್ಯವಿರಲಿಲ್ಲ. ಆ ಅರಣ್ಯದಲ್ಲಿ ಆದಿವಾಸಿಗಳನ್ನು ಬಿಟ್ಟರೆ ಜಾತಿಭೇದ ಮಾಡುವ ಮಡಿವಂತರು ಇರಲಿಲ್ಲ, ಚನ್ನಬಸವಣ್ಣನವರಿಂದ ಬುದ್ಧಿ ಹೇಳಿಸಿಕೊಳ್ಳಲು.

ಬಾಚಿರಾಜನ ಅಪೇಕ್ಷೆಯಂತೆ ಶ್ರೀ ಚನ್ನವೀರ ಶರಣರು ಗೊಬ್ಬೂರಿಗೆ ಬಂದು, ನಿಂತು, ಧರ್ಮ ಪ್ರಚಾರ ಶುರು ಮಾಡಿದರು. ಸುತ್ತಲಿನ ಗ್ರಾಮಗಳಲ್ಲೆಲ್ಲ ಲಿಂಗಾಯತ ಧರ್ಮದ ಪ್ರಚಾರ ಮಾಡಿದ್ದಲ್ಲದೆ ಅಸಂಖ್ಯಾತರಿಗೆ ದೀಕ್ಷೆ ನೀಡಿದರು. ಬಹುಶಃ ಒಮ್ಮೆ ನೂತನ ದೀಕ್ಷಾವಂತರನ್ನೆಲ್ಲ ಸೇರಿಸಿ ಗಣಪರ್ವ ಮಾಡಲು ಬಾಚಯ್ಯನವರು, ಚನ್ನವೀರದೇವರ ನೇತೃತ್ವದಲ್ಲಿ ಯೋಜನೆ ರೂಪಿಸಿದ್ದು ಅವರಿಗೆಲ್ಲ ಊಟದ ವ್ಯವಸ್ಥೆ ಮಾಡಲು ವಿವಿಧ ಊರುಗಳ ಶರಣರಿಗೆ ಆದೇಶಿಸಿ, ಆ ಅಡಿಗೆಯನ್ನು ಸಂಗ್ರಹಿಸಿ ಬಂಡಿಯ ಮೇಲೆ ಇಟ್ಟುಕೊಂಡು ಗೊಬ್ಬೂರಿಗೆ ಬಂದರು.

ಬ್ರಾಹ್ಮಣರಿಂದ ತುಂಬಿದ ಪ್ರಸಿದ್ಧ ಅಗ್ರಹಾರವಿದ್ದ ಆ ಊರಿನ ಬ್ರಾಹ್ಮಣರು ಊರೊಳಗಿನ ಮತ್ತು ಸುತ್ತಲಿನ ಗ್ರಾಮದ ಎಲ್ಲ ಜಾತಿ ಮತಗಳವರೂ ಲಿಂಗಾಯತರಾದುದು ಅವರಲ್ಲಿ ಅಸಹನೆ ಉಂಟು ಮಾಡಿತ್ತು. ಜೊತೆಗೆ ಹುಟ್ಟಿನಿಂದ ಬ್ರಾಹ್ಮಣನಾದ ಬಾಚರಸನೂ ಲಿಂಗಾಯತ (ರಾಯಚೂರು

ಜಿಲ್ಲೆಯ ಗೊಬ್ಬೂರಿನ ಆದಿತ್ಯದೇವನೆಂಬ ವಿಪ್ರನ ಮಗ ಬಾಚರಸ)ನಾದುದು ಇನ್ನಷ್ಟು ಆಕ್ರೋಶವನ್ನು ಉಂಟು ಮಾಡಿತು. ಎಲ್ಲ ಜಾತಿ ಮತ ಪಂಥಗಳ ಜನರೂ ತಮ್ಮ ಪೂರ್ವದ ಜಾತಿ ಕುಲಗಳನ್ನು ತೊರೆದು ಶರಣ ಧರ್ಮೀಯರಾಗಿ ಮಾಡಿ ಕಳಿಸಿದ ಅಡಿಗೆ ಬ್ರಾಹ್ಮಣರಿಗೆ ಎಂಜಲಾಗಿ ತೋರಿತು. ಅವರು ಊರ ಬಾಗಿಲಲ್ಲೇ ಗಣ ಪ್ರಸಾದ ಹೊತ್ತು ತಂದ ಬಂಡಿಗಳನ್ನು ತಡೆದರು. ಆಗ ಕೋಪೋದ್ರಿಕ್ತನಾದ ಬಾಚರಸ ಚನ್ನಬಸವಣ್ಣನವರ ಗೀತೆಯಲ್ಲಿ ಉಲ್ಲೇಖವಾದಂತೆ "ಆ ಬ್ರಾಹ್ಮಣರ ತಲೆಯ ಮೇಲೆ ಬಿಸಿ ಅಡಿಗೆಯನ್ನು ತಳಿದನು" ಅದು ಕೆಂಡವಾಗಿ ಸುಟ್ಟಿರುವುದರಲ್ಲಿ ಆಶ್ಚರ್ಯವೇನಿದೆ?

ಶಿವಶರಣರ ಕಥಾರತ್ನ ಕೋಶದಲ್ಲಿ ಬಂದಿರುವಂತೆ "ಬಾಚರಸನು ಕೋಪದಿಂದ ಪ್ರಸಾದವನ್ನು ಮನೆಯ ಮೇಲೆ ಚೆಲ್ಲಿದಾಗ ಎಲ್ಲೆಡೆ ಬೆಂಕಿ ಹೊತ್ತಿತು. ರಕ್ಷಿಸೆಂದು ಅವರೆಲ್ಲ ಶರಣಾಗಲು ಮೊದಲಿನಂತೆ ಮಾಡಿದ" (ಪುಟ 123)

ಇಲ್ಲಿಂದ ಮುಂದಿನ ಕಥೆ ಸೂಗೇಶ್ವರರಾದ ಚನ್ನವೀರದೇವರ ಜೀವನಕ್ಕೆ ಸಂಬಂಧಿಸಿದ್ದು. ಜೋತಿಪುರ (ಜೋಗಿಹಳ್ಳಿ)ದ ಮಂಗಾಪುರ ಮಠದ ಶ್ರೀ ಚಂದ್ರಶೇಖರ ಶಾಸ್ತ್ರಿಗಳು ಶ್ರೀ ಸೂಗೂರೇಶ್ವರ ಪುರಾಣ ಎಂಬ ಕಾವ್ಯವೊಂದನ್ನು ರಚಿಸಿದ್ದು 1992ರಲ್ಲಿ ಶ್ರೀ ಸೂಗೂರೇಶ್ವರ ಸೇವಾ ಸಮಿತಿ, ದೇವಸೂಗೂರು ಇವರು ಪ್ರಕಟಿಸಿದ್ದಾರೆ. ಇದರಲ್ಲಿ ಡಾ|| ಎಸ್.ಆರ್. ಗುಂಜಾಳ್ ಮುನ್ನುಡಿಯನ್ನು ಮತ್ತು ಪ್ರಸ್ತಾವನೆಯನ್ನು ಡಾ|| ಬಸವಲಿಂಗಯ್ಯ ಸೊಪ್ಪಿಮಠ ಅವರು ಬರೆದಿದ್ದಾರೆ. ಈ ಪುರಾಣದ ಕರ್ತೃ ಪಂಚಾಚಾರ್ಯ ವರ್ಗಕ್ಕೆ ಸೇರಿದ ಮನೆತನದವರು. ಹೀಗಾಗಿ ರೇಣುಕಾಚಾರ್ಯರ ಹೆಸರನ್ನು ಸ್ತೋತ್ರ ಮಾಲಿಕೆಯಲ್ಲಿ ಸೇರಿಸಿದ್ದಾರೆ. ಆದರೆ ಪುಣ್ಯಕ್ಕೆ ಶರಣ ಪರಂಪರೆಯನ್ನು ಕೊಂಡಾಡಿರುವುದಲ್ಲದೆ ಚನ್ನವೀರದೇವರನ್ನು ಶರಣ ಪರಂಪರೆಯ ಅವಿಭಾಜ್ಯ ಅಂಗವನ್ನಾಗಿ ಬಿಂಬಿಸಿದ್ದಾರೆ.

ಒಂದು ಲಕ್ಷದ ತೊಂಭತ್ತು ಸಾವಿರ ಜಂಗಮರನ್ನು ಹೊಂದಿದ್ದ ಲಿಂಗಾಯತ ಧರ್ಮ ಸ್ಥಾಪನಾಚಾರ್ಯ ಬಸವಣ್ಣನವರಿಗೆ ಕಾಶ್ಮೀರದ ಸಪಾದಲಕ್ಷದ ಮಹಾದೇವ ಭೂಪಾಲನ ಬಳಿ ಆರು ಸಾವಿರ ಜಂಗಮರು ಇರುವ ವಿಷಯ ತಿಳಿದು ಅವರನ್ನು ಮನವೊಲಿಸಿ ಕರೆತರಲು ಪ್ರಯಾಣ ಕೈಗೊಳ್ಳುತ್ತಾರೆ. ಶ್ರೀ ಚೆನ್ನವೀರರ ನೇತೃತ್ವದಲ್ಲಿ ಕರೆದುಕೊಂಡು ಕಲ್ಯಾಣಕ್ಕೆ ಬರುತ್ತಾರೆ. ನಂತರ ಮಹಾದೇವ ಭೂಪಾಲನೂ ತನ್ನ ಪತ್ನಿ ಗಂಗಾದೇವಿಯೊಡನೆ ಬರುತ್ತಾನೆ; ಮೋಳಿಗೆ ಮಾರಯ್ಯ ಎಂಬ ಹೆಸರನ್ನು ಹೊಂದಿ ಕಟ್ಟಿಗೆ ಹೊಡೆಯುವ ಕಾಯಕ ಕೈಗೊಂಡು ಪತ್ನಿ ಮಹಾದೇವಿಯಮ್ಮ (ಗಂಗಾದೇವಿಯ ನಂತರದ ಹೆಸರು)ನೊಡನೆ ಕಲ್ಯಾಣದಲ್ಲಿ ನೆಲೆಸುತ್ತಾನೆ.

ಧರ್ಮ ಪ್ರಚಾರಕ ವ್ಯವಸ್ಥೆ (Missionary system)ಯನ್ನು ರೂಪಿಸಿದ್ದ ಬಸವಣ್ಣನವರು ಜ್ಞಾನನಿಧಿಗಳಾದ ಶ್ರೀ ಚನ್ನವೀರದೇವರು ಮುಂತಾದ ಅನೇಕರಿಗೆ ಲಿಂಗಾಯತ ಧರ್ಮದ ತಾತ್ತ್ವಿಕ ತರಬೇತಿ ನೀಡಿದರು. ಬಾಚರಸರು ತಮ್ಮ ಊರಿಗೆ ಚನ್ನವೀರದೇವರನ್ನು ಕರೆದೊಯ್ಯುತ್ತಾರೆ.

ಶಿವಶರಣರ ಕಥಾರತ್ನ ಕೋಶದಲ್ಲಿ ಗುಲ್ಬರ್ಗಾ ಜಿಲ್ಲೆಯ ಗೊಬ್ಬೂರು ಬಾಚರಸರ ಜನ್ಮಸ್ಥಳ

ಎಂದಿದೆ. ಆದರೆ ಡಾ|| ಸೊಪ್ಪಿ ಮಠದ ಪ್ರಕಾರ ಬಾಚರಸರದು ಗುಲಬರ್ಗಾ ಜಿಲ್ಲೆ ಗೊಬ್ಬೂರಲ್ಲ; ರಾಯಚೂರು ಜಿಲ್ಲೆಯ ಗೊಬ್ಬೂರು. ಇದೇ ಸೂಕ್ತ ಅಭಿಪ್ರಾಯ. ಗುಲಬರ್ಗಾ ಜಿಲ್ಲೆಯ ಗೊಬ್ಬೂರಲ್ಲಿ ಯಾವುದೂ ಚಾರಿತ್ರಿಕ ಕುರುಹುಗಳಿಲ್ಲ. ಆದರೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗೊಬ್ಬೂರನಲ್ಲಿ ಅನೇಕ ಕುರುಹುಗಳಿವೆ.

1. ಚನ್ನವೀರದೇವರು ನೆಲೆಸಿದ ದೇವಸೂಗೂರಿಗೆ 18 ಕಿ.ಮೀ ದೂರದಲ್ಲಿ ಇರುವ ಗೊಬ್ಬೂರಲ್ಲಿ ಬಿಬ್ಬಿ ಬಾಚಯ್ಯನ ಹೊಲ ಇದೆ. ಈ ಹೊಲದಲ್ಲಿ ಬಾಚಯ್ಯನವರು ಜಂಗಮ ದಾಸೋಹ ನಡೆಸುತ್ತಿದ್ದರೆಂದು ಹೇಳಲಾದ "ಅರ್ಪಣ ಕಟ್ಟೆ" ಇದೆ. ಇದರ ಮೇಲೆಯೇ ಚನ್ನವೀರರು ಮತ್ತಿತರರು ಪ್ರಸಾದ ಸ್ವೀಕರಿಸುತ್ತಿದ್ದರೆಂದು ಐತಿಹ್ಯವಿದೆ.

2. ಊರಿನ ತುಂಬೆಲ್ಲ ಬಿಬ್ಬಣಯ್ಯ, ಬಾಚಯ್ಯ ಎಂಬ ಹೆಸರುಗಳು ರೂಢಿಗೊಂಡಿವೆ.

3. ಬಾಚಯ್ಯನವರನ್ನು ಶರಣರೆಂದು ಗೌರವಿಸಿ ನಡೆದುಕೊಳ್ಳುತ್ತಿರುವ ಜನರು ಅವರಿಗೆ ಸಮಾನವಾಗಿಯೇ ಚನ್ನವೀರರನ್ನು ಗೌರವಿಸುತ್ತಾರೆ.

4. ಚನ್ನವೀರದೇವರು ತಮ್ಮ ಸಂಗಡಿಗರೊಂದಿಗೆ ವಾಸವಾಗಿದ್ದರೆಂದು ಹೇಳುವ "ನಾಗಭೂಷಣ" ಮಠ ಇದೆ. ಕಲ್ಯಾಣ ಚಾಳುಕ್ಯರ ಕಾಲದ ಶ್ರೀ ಸೂಗೂರೇಶ್ವರ ದೇವಸ್ಥಾನವೂ ಇದೆ.

ಅವತಾರಗಳ ಹೋಲಿಕೆ

ಸಾಮಾನ್ಯವಾಗಿ ವ್ಯಕ್ತಿಗಳನ್ನು ನೋಡಿದಾಗ ಅವರ ಗುಣ ಸ್ವಭಾವಗಳ ಆಧಾರದ ಮೇಲೆ ಯಾರೊಡನೆಯಾದರೂ ಹೋಲಿಸುತ್ತೇವೆ. ನಮಗೆ ಮಡಿವಾಳ ಮಾಚಿದೇವರು ಎಂದರೆ ಶೌರ್ಯದ ಸಂಕೇತ; ಧಾರ್ಮಿಕ ಸ್ವಭಾವದ ಸಾತ್ವಿಕ ಧೀರನನ್ನು ಕಂಡಾಗ ಇವರು ಮಡಿವಾಳ ಮಾಚಿದೇವರು ಎನ್ನುತ್ತೇವೆ. ಅದೇ ರೀತಿ ಹಿಂದಿನ ಪುರಾಣಕಾರರು ಸಹ ಸಾತ್ವಿಕ ಯೋಗಿಯಾದ ಶಿವ, ಸಾತ್ವಿಕ ಯೋಗಿಣಿ ಪಾರ್ವತಿ (ಅಕ್ಕಮಹಾದೇವಿಯನ್ನು ಪಾರ್ವತಿಯ ಅವತಾರ ಎನ್ನಲಾಗುವುದು) ಶುದ್ಧ-ಸಾತ್ವಿಕ ಭಕ್ತಿಯ, ಶಿವನ ಆಪ್ತ ಸೇವಕ ನಂದೀಶ್ವರ, ಧರ್ಮಯುದ್ಧದ ಮೂಲಕ ವಿರೋಧಿಗಳಿಗೆ (ಉದಾ: ದಕ್ಷಬ್ರಹ್ಮ) ಬುದ್ಧಿ ಕಲಿಸುವ ವೀರಭದ್ರ ಮುಂತಾದವರಿಗೆ ಹೋಲಿಸಿ ಅವರುಗಳ ಅವತಾರ ಇವರು ಎಂದು ಬಿಂಬಿಸುವುದನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಮಡಿವಾಳ ಮಾಚಿದೇವರು ಮತ್ತು ಚನ್ನವೀರದೇವರು ವೀರಭದ್ರನ ಅಂಶಜರು. ಇದರಿಂದ ಚನ್ನವೀರದೇವರು ತತ್ತ್ವನಿಷ್ಠ ಧೈರ್ಯಶಾಲಿಗಳೂ ಆದ ಧರ್ಮಬೋಧಕರು, ಪ್ರಚಾರಕರು ಎಂಬ ಪರಿಕಲ್ಪನೆ ಮೂಡುತ್ತದೆ. ಗೊಬ್ಬೂರಿನಲ್ಲಿ ಬಿಬ್ಬಿ ಬಾಚಯ್ಯನವರ ನೆರವಿನಿಂದ ಧರ್ಮಪ್ರಚಾರ ಮಾಡುತ್ತ ಚನ್ನವೀರದೇವರು ಇರುವಾಗ ಒಮ್ಮೆ ಗಣಪರ್ವ ಮಾಡಿ ಸಹ ಧರ್ಮೀಯರ ಸಹ ಭೋಜನ ಏರ್ಪಡಿಸಲಾಯಿತು.

ಪ್ರಸಾದ ವ್ಯವಸ್ಥೆಗೆ ಪರಿವರ್ತನೆಗೊಂಡ ವಿವಿಧ ಗ್ರಾಮಗಳ ಶರಣರ ಮನೆಗಳಿಂದ ಸಾಮೂಹಿಕವಾಗಿ ಪ್ರಸಾದ ಸಂಗ್ರಹಿಸಿ ಬಾಚಯ್ಯನವರು ಬಂಡಿಯ ಮೇಲೆ ಹೇರಿಕೊಂಡು ಬಂದರು. ಆಗ ಗೊಬ್ಬೂರಿನ ಅಗ್ರಹಾರದ ಬ್ರಾಹ್ಮಣರು ಸಿಟ್ಟಿನಿಂದ ಊರಬಾಗಿಲಲ್ಲೇ ಬಂಡಿಯನ್ನು "ಇದು

ಎಂಜಲು, ಒಳಗೆ ಬರಗೊಡುವುದಿಲ್ಲ" ಎಂದು ತಡೆದರು. ಆಗ ಬಾಚಿದೇವನು ಆ ಪ್ರಸಾದವನ್ನು ಒಂದು ಹಿಡಿಯಷ್ಟು ತೆಗೆದು ಥಾಳಿಸಲು ಉರಿಯೆದ್ದು ಬ್ರಾಹ್ಮಣರೆಲ್ಲ ಬೆಂದು ಬೇಗುದಿಗೊಳ್ಳುವರು. ಅವರ ಆಲಯಗಳು ಸುಟ್ಟು ಹೋಗುತ್ತವೆ. ಆಗ ಚನ್ನವೀರರು ಬೇಸರಗೊಂಡು ಬಾಚಿದೇವನನ್ನು ಸಂತೈಸಿ ತಮ್ಮೊಂದಿಗೆ ಸಂಗ್ರಹಿಸಿ ಇಟ್ಟುಕೊಂಡಿದ್ದ ರಂಗವಲ್ಲಿಯ ಪುಡಿಯನ್ನು ನಾಗರಭಾವಿಯಲ್ಲಿ ಹಾಕಲಾಗಿ ಅದು ವೀರಭದ್ರನ ಮೂರ್ತಿಯಾಗಿ ಎದ್ದು ಬರುವುದು. ಚನ್ನವೀರರು ತಮ್ಮ ಜಂಗಮರೊಂದಿಗೆ ಈ ಮೂರ್ತಿಯ ಮರೆಯಲ್ಲಿ ಅದೃಶ್ಯ ರೂಪದಲ್ಲಿ ಇರುವರು.

ಇದು ಅಸ್ಪಷ್ಟವಾದ ವಿವರಣೆ. ಪೌರಾಣಿಕ ಭಾಷೆಯಲ್ಲಿ ಮುಚ್ಚಿ ಹೋಗಿರುವ ಐತಿಹಾಸಿಕ ಸಂಗತಿಯನ್ನು ಹೀಗೆ ಗುರುತಿಸಬಹುದು. ಬ್ರಾಹ್ಮಣರ ವರ್ತನೆಯಿಂದ ಬೇಸತ್ತ ನವ ದೀಕ್ಷಿತರು ಉದ್ರಿಕ್ತಗೊಂಡು, ಪರಸ್ಪರರಲ್ಲಿ ಘರ್ಷಣೆ ಸಂಭವಿಸಿರಬಹುದು. ಅತ್ಯಂತ ಪವಿತ್ರವೆಂದು ಶರಣರು ಭಾವಿಸುವ ಗಣಪ್ರಸಾದವನ್ನು ಬ್ರಾಹ್ಮಣರು ಎಂಜಲು ಎಂದು ಹಂಗಿಸಿದಾಗ, ಗಣಪರ್ವ ನಡೆಯದಂತೆ ತಡೆದಾಗ ಯಾರಿಗೇ ಆದರೂ ಕೋಪ ಬರುವುದು ಸಹಜ. ಆ ಸಂದರ್ಭದಲ್ಲಿ ಬ್ರಾಹ್ಮಣರಿಗೆ ಆಕ್ರೋಶ ಹೆಚ್ಚು ಇರುವುದು ಚನ್ನವೀರದೇವರ ಮೇಲೆ. ಅವರ ನೇತೃತ್ವದಲ್ಲಿ ತಾನೇ ಧರ್ಮಪ್ರಚಾರ, ಜನಜಾಗೃತಿ ಕಾರ್ಯ ನಡೆಯುತ್ತಿದ್ದುದು. ಆಗ ಅವರು ಚನ್ನವೀರರ ಮೇಲೆ ಹಲ್ಲೆಗೆ ಮುಂದಾದಾಗ ಚನ್ನವೀರ ಶರಣರನ್ನು "ನಾಗರಭಾವಿ" ಎಂಬುದರ ಒಳಗೆ ತಾತ್ಕಾಲಿಕವಾಗಿ ಅವರ ಅನುಯಾಯಿಗಳು ಬಚ್ಚಿಟ್ಟಿರಲೂಬಹುದು. ವಿರೋಧಿಗಳು ಚದುರಿದ ಮೇಲೆ ಹೊರಬಂದ ಶರಣರು ಮುಂದೆ ವೀರಭದ್ರ ವೇಷಧಾರಿಗಳಾಗಿ ಮಾರುವೇಷದಲ್ಲಿದ್ದಿರಬಹುದು. ಇಂದಿಗೂ ಅಂಥ ವೇಷಧಾರಿ ಜಂಗಮರು ಸಂಚರಿಸುತ್ತ ಬರುವುದನ್ನು ನೋಡುತ್ತೇವೆ.

ಚನ್ನವೀರದೇವರು ಗೊಬ್ಬೂರನ್ನು ಬಿಟ್ಟು ಬೇರೆ ಕಡೆ ಹೋಗಬೇಕೆಂಬ ಆಲೋಚನೆ ಹೊಂದಿರುವಾಗ ಸೂಗೂರಿನ ಆನಂದ ವೀರಯ್ಯ, ಕೆಂಚವೀರಯ್ಯ ಎಂಬ ಸೋದರರು ಗೊಬ್ಬೂರು ಸಂತೆಗೆ ಬಟ್ಟೆ ವ್ಯಾಪಾರಕ್ಕೆ ಬಂದಿರುತ್ತಾರೆ. ವ್ಯಾಪಾರದ ಬಳಿಕ ಲಿಂಗಾರ್ಚನೆಯ ವೇಳೆಯಾಗಲು ಅದೇ ನಾಗರಭಾವಿಯಲ್ಲಿ ಮಿಂದು ಲಿಂಗಾರ್ಚನೆಗೆ ಕುಳಿತಿರುವಾಗ ಅಲ್ಲಿ ಜಂಗಮ ರೂಪಿನಲ್ಲಿ ಚನ್ನವೀರದೇವರು ಕಾಣಿಸಿಕೊಳ್ಳುವರು, ಸಂತೋಷ-ಸಂಭ್ರಮಗಳಿಂದ ಸೋದರರು ಅವರಿಗೆ ವಂದಿಸುವರು. ಆಗ ಚನ್ನವೀರದೇವರು ಸೂಗೂರಿಗೆ ಬಂದು ಅಲ್ಲಿಯೇ ನೆಲೆಸುವ ಇಚ್ಛೆ ವ್ಯಕ್ತಪಡಿಸುವರು. ಸಂತೋಷದಿಂದ ಸೋದರರು ಒಪ್ಪುವರು. ಆದರೆ ಚನ್ನವೀರರು, ವ್ಯಕ್ತರೂಪದಿಂದ ಬರದೆ ಪರೋಕ್ಷ ರೂಪದಲ್ಲಿ ವೀರಭದ್ರನ ಮೂರ್ತಿಯೊಂದಿಗೆ ಬರುವುದಾಗಿ ಹೇಳುವರು. ಆಗ, ಸೋದರರು ನಿರಾಕರಿಸಿ, "ತಾವು ಲಿಂಗಾಯತ ಧರ್ಮೀಯರಾಗಿದ್ದು ಮೂರ್ತಿಪೂಜೆ ಅವರಿಗೆ ನಿಷಿದ್ಧವಾಗಿರುವುದರಿಂದ ವೀರಭದ್ರನ ಮೂರ್ತಿ ಒಯ್ಯಲು ಸಾಧ್ಯವಿಲ್ಲ" ಎನ್ನುವರು. ಚನ್ನವೀರದೇವರು ಆ ಸಹೋದರರ ಏಕಲಿಂಗನಿಷ್ಠೆ ಮೆಚ್ಚಿ, ನಿಜ ಸಂಗತಿ ಹೇಳಿ ಅವರು ಒಯ್ಯಬೇಕಾದುದು, ವೀರಭದ್ರನ ಮೂರ್ತಿಯನ್ನಲ್ಲ; ವೀರಭದ್ರನ (ಮಾರು) ವೇಷಭೂಷಣ ತೊಟ್ಟ ಜಂಗಮ ಮೂರ್ತಿಯಾದ ತಮ್ಮನ್ನು ಎಂಬುದನ್ನು ಮನವರಿಕೆ ಮಾಡಿಕೊಡುವರು. ಉಭಯತರಿಗದು ಒಪ್ಪಿಗೆಯಾಗಿ ಮತ್ತೊಂದು ದಿನವನ್ನು ಪ್ರಯಾಣಕ್ಕೆ ನಿಗದಿ ಮಾಡುವರು.

ಪುರಾಣ ಶೈಲಿಯಲ್ಲಿ ಸಾಗುವ ಈ ನಿರೂಪಣೆಯ ಹಿಂದೆ ಎಂತಹ ತತ್ತ್ವದ ಮುತ್ತುರತ್ನಗಳು ಅಡಗಿವೆ ನೋಡಿರಿ. ಚನ್ನವೀರರು ಗುಪ್ತವಾಗಿ, ಮಾರುವೇಷದಲ್ಲಿ ಗೊಬ್ಬೂರಲ್ಲಿ ಇರುವಾಗ ಬೇರೆ ಊರಿಗೆ ಹೋಗಿ ನೆಲೆಸುವ ಆಲೋಚನೆ ಹೊಂದುತ್ತಾರೆ. ಸೂಗೂರಿನ ಇಬ್ಬರು ಸಹೋದರರಾದ ಆನಂದ ವೀರಯ್ಯ, ಕೆಂಚ ವೀರಯ್ಯ ಲಿಂಗದೀಕ್ಷೆ ಹೊಂದಿ ನಿಷ್ಠಾವಂತರಾಗಿ ನಡೆದುಕೊಳ್ಳುತ್ತ ತಮ್ಮ ನಿತ್ಯದ ಕಾಯಕದ ನಂತರ ನಾಗರಭಾವಿಯಲ್ಲಿ ಸ್ನಾನ ಮಾಡಿ ಲಿಂಗಾರ್ಚನೆ ಮಾಡುವಾಗ ಇವರು ತಮ್ಮ ಸ್ವಧರ್ಮೀಯರು ಎಂದು ತಿಳಿದು ಚನ್ನವೀರದೇವರು ಭೇಟಿಯಾಗುತ್ತಾರೆ. ಅವರುಗಳೊಡನೆ ಸೂಗೂರಿಗೆ ಹೋಗಿ ನೆಲೆಸುವ ಅಪೇಕ್ಷೆ ವ್ಯಕ್ತಪಡಿಸುತ್ತಾರೆ. ಆದರೆ ಅವರು ವೀರಭದ್ರನ ಮೂರ್ತಿಯ ರೂಪದಲ್ಲಿ ಬರುತ್ತೇವೆ ಎಂದಾಗ "ನಾವು ಮೂರ್ತಿಪೂಜಕರಲ್ಲ, ವೀರಭದ್ರನನ್ನು ಒಯ್ಯುವುದಿಲ್ಲ" ಎನ್ನುತ್ತಾರೆ. ಅಂದರೆ ಏಕದೇವೋಪಾಸನೆಯ ಬಸವ ಧರ್ಮ ಎಷ್ಟು ಜೀವಂತವಾಗಿತ್ತು ಎಂಬುದನ್ನು ಇದು ಸಾಕ್ಷೀಕರಿಸುತ್ತದೆ. ಬ್ರಾಹ್ಮಣರ ವಿರೋಧ ಕಟ್ಟಿಕೊಂಡೂ ಬಾಚಿರಾಜ ಮತ್ತು ಚನ್ನವೀರದೇವರು ಎಲ್ಲರಿಗೂ ದೀಕ್ಷೆ ಕೊಡುತ್ತಿದ್ದರು, ಗಣ ಭೋಜನ ಏರ್ಪಡಿಸುತ್ತಿದ್ದರು. ಪ್ರಜಾಪ್ರಭುತ್ವದ ಇಂದಿನ ದಿನಗಳಲ್ಲಿ ಸ್ವಾಮಿಗಳು ವೀರಶೈವವಾದಕ್ಕೆ ಅಂಟಿಕೊಂಡು ಜಡತ್ವ ರೂಢಿಸಿಕೊಂಡು ಬೇರೆಯವರಿಗೆ ದೀಕ್ಷೆ ಕೊಡುವುದಿಲ್ಲ; ಅನುಯಾಯಿ ವೀರಶೈವರು ನಮ್ಮ ಧರ್ಮ ಮೂಲಭೂತ ಕಳಕಳಿಯನ್ನೇ ಮರೆತು ಬೇರೆಯವರಿಗೆ ದೀಕ್ಷೆ ಕೊಟ್ಟರೆ ಕೊಡುವವರನ್ನೇ ವಿರೋಧಿಸುತ್ತಾರೆ. ಹಿರಿಯ ವಯೋವೃದ್ಧ ಸ್ವಾಮಿಗಳಿಂದ ಹಿಡಿದು ಕಿರಿಯರವರೆಗೆ ಗಣಪತಿ, ನವಗ್ರಹಗಳ ಗುಡಿಕಟ್ಟಿ, ಅವುಗಳನ್ನು ಪೂಜಿಸುತ್ತಾರೆ. ಬಹುಶಃ ಸ್ವಧರ್ಮ ಬಿಟ್ಟು ನಡೆಯುವ ಧರ್ಮಾಧಿಕಾರಿಗಳು ಲಿಂಗಾಯತ ಸಮಾಜದಲ್ಲಿ ಬಿಟ್ಟು ಇನ್ನಾವ ಧಾರ್ಮಿಕ ಸಮಾಜದಲ್ಲಿಯೂ ಕಾಣಲು ಸಾಧ್ಯವಿಲ್ಲವೇನೋ? ಇಷ್ಟು ಮಾತ್ರವಲ್ಲ ಕುರುಡರ ರಾಜ್ಯದಲ್ಲಿ ಕಣ್ಣಿದ್ದವನೇ ಅಪರಾಧಿ ಎಂಬಂತೆ ವಚನ ಧರ್ಮವನ್ನು ಪ್ರಾಮಾಣಿಕವಾಗಿ ಪಾಲಿಸುವವರೇ ವೀರಶೈವರ ದೃಷ್ಟಿಯಲ್ಲಿ ಅಪರಾಧಿಗಳಂತೆ ತೋರುತ್ತಾರೆ.

ವೀರಭದ್ರನ ವೇಷಧರಿಸಿದ (ಜಂಗಮ) ಮೂರ್ತಿಯನ್ನು, ಮತ್ತೊಂದು ಸಂತೆಯ ದಿನ ವ್ಯಾಪಾರ ಮುಗಿಸಿದ ಮೇಲೆ, ರಾತ್ರಿಯ ವೇಳೆ ಬಂಡಿಯಲ್ಲಿ ಇರಿಸಿಕೊಂಡು ಕೆಂಚವೀರಯ್ಯ- ಆನಂದ ವೀರಯ್ಯ ಹೊರಡುವರು, ಬಂಡಿ ಹೊರಡುತ್ತದೆ. ಅಷ್ಟರಲ್ಲೇ ಯಾರೋ ಮೇಲುಶಂಕರ ಬಸದಿಯ ತುದಿಯಲ್ಲಿ ನಿಂತು, "ನಾಗಭೂಷಣ ಬೆಟ್ಟದ ಭಾಗ್ಯವನ್ನು ಬಂಡಿಯಲ್ಲಿ ಹೇರಿಕೊಂಡು ಒಯ್ಯುತ್ತಿದ್ದಾರೆ" ಎಂದು ಕೂಗಿಕೊಳ್ಳುತ್ತಾರೆ. ನಿದ್ರೆಯ ಮಂಪರಿನಲ್ಲಿದ್ದ ಗೊಬ್ಬೂರ ಜನ ಧಾವಿಸಿ ಬಂದು ಪರಸ್ಪರ ಕಾದಾಡುತ್ತಾರೆ. ಬಂಡಿಯನ್ನು ಮುಂದೆ ಬಿಡದೆ ಹಟ ತೊಡುತ್ತಾರೆ. ಬೆಳಿಗ್ಗೆ ನೋಡಿದರೆ ಅಲ್ಲಿದ್ದುದು ಕೇವಲ ವೀರಭದ್ರನ ಮೂರ್ತಿ. ಕೆಲವರು, "ನಮ್ಮೂರಿನ ಸಂಪತ್ತನ್ನೇನೂ ಒಯ್ಯುತ್ತಿಲ್ಲ, ಮೂರ್ತಿಯನ್ನು ಒಯ್ಯಲಿ ಬಿಡಿ" ಎನ್ನುವರು. ಅವರವರಲ್ಲಿಯೇ ಎರಡು ಗುಂಪಾಗುತ್ತದೆ. ಮೂರ್ತಿಯಿರುವ ಗಾಡಿಯು ಮುಂದೆ ಸಾಗುತ್ತದೆ. ಪುರಾಣದಲ್ಲಿ "ಎಲ್ಲಿ ತೋಡಿದರೆ ಅಲ್ಲಿ ನೆತ್ತರು ಉಕ್ಕುತ್ತಿತ್ತು" ಎಂದು ಬರೆಯಲಾಗಿದೆ. ಇದರರ್ಥ ದೀಕ್ಷೆ ಪಡೆದವರು ಶರಣರನ್ನು ಅಲ್ಲಿಂದ ಸುರಕ್ಷಿತವಾಗಿ ಹೊರಗೆ ಒಯ್ಯಬೇಕೆನ್ನುವವರಾದರೆ ಜಾತಿವಾದಿಗಳು ಅವರ ಮೇಲೆ ಸೇಡು ತೀರಿಸಿಕೊಳ್ಳಬೇಕು ಎನ್ನುವವರು. ಈ ಇಬ್ಬರ ನಡುವಿನ ಘರ್ಷಣೆಯಲ್ಲಿ ಬಹುಶಃ

ರಕ್ತಪಾತವಾಗಿರಬಹುದು. ಅಂತೂ ವೀರಭದ್ರನ ಮೂರ್ತಿಯ ರೂಪದಲ್ಲಿ ಉಪಾಯದಿಂದ ಚನ್ನವೀರದೇವರು ಹೊರಗೆ ಹೋದಂತೆ ಕಾಣುತ್ತದೆ.

ನಂತರ ಚನ್ನವೀರ ಶರಣರು ಸೂಗೂರಿಗೆ ಬಂದರು. ಭಕ್ತಿವಂತ ಜನರು ಭಕ್ತಿಯಿಂದ ಬರಮಾಡಿಕೊಂಡರು. ಅಲ್ಲಿಯೇ ನೆಲೆಸಿ ಜ್ಞಾನವನ್ನು ಧಾರೆ ಎರೆದರು; ಭಕ್ತಿಯನ್ನು ವರ್ಧಿಸಿದರು. ಭಕ್ತರನ್ನು ಅನುಗ್ರಹಿಸಿದರು. ಸೂಗೂರೇಶ್ವರ ಪುರಾಣದಲ್ಲಿ ಸಾಕಷ್ಟು ಪವಾಡ ಚಿತ್ರಿಸಲಾಗಿದೆ. ನಮಗೆ ಅವು ನಗಣ್ಯ ಆದರೆ ನಮ್ಮ ದೃಷ್ಟಿಯಲ್ಲಿ ಮಹತ್ವಪೂರ್ಣವಾದ ಕೆಲವು ಪ್ರಸಂಗಗಳು ಉಲ್ಲೇಖನೀಯ.

1. ಗೋಪರೆಡ್ಡಿ ಎಂಬಾತ ಲಿಂಗದೀಕ್ಷೆ ಪಡೆಯಲು ಹಂಬಲಿಸುತ್ತಾನೆ. ಆಗ ನಗರೂರಿನ ಗುರುಲಿಂಗಾರ್ಯ ಎನ್ನುವವರಿಗೆ ಸೂಚಿಸಿ, ದೀಕ್ಷೆ ಕೊಡಿಸುತ್ತಾರೆ. (ಹದಿನೇಳನೆಯ ಸಂಧಿ)

2. ಇಂಗಳಗಿ ಗ್ರಾಮದ ವೀರ ವಿರಕ್ತರು ಬಸವ ಸ್ವಾಮಿಗಳು. ಅವರು ಬಂದು "ಸೂಗೂರೇಶ ನಿಜ ಶರಣ ಮಾರ್ಗಿಯಾದರೆ ತಮ್ಮ ಪಾದೋದಕ ಸ್ವೀಕರಿಸುತ್ತಾರೆ" ಎಂದು ಸ್ನಾನ ಮಾಡಿ ಒಳಮನೆ ಪ್ರವೇಶಿಸಿದಾಗ, ಸೂಗೂರೇಶ್ವರರು ಪಾದೋದಕ ಸ್ವೀಕರಿಸುತ್ತಾರೆ. (ಹದಿನೆಂಟನೆಯ ಸಂಧಿ)

ಜ್ಞಾನಿಗಳಾದ ಶರಣರು, ವಿರಕ್ತರು ಪರಸ್ಪರರನ್ನು ಗೌರವಿಸಲು ಸಮಾನತೆ ತೋರ್ಪಡಿಸಲು ಪರಸ್ಪರ ಪಾದೋದಕ ಸ್ವೀಕರಿಸುವ ಪದ್ಧತಿ ಶರಣರಲ್ಲಿತ್ತು. ಅಲ್ಲಮಪ್ರಭುವಿನ ಪಾದೋದಕವನ್ನು ಒಮ್ಮೆ ಉಳಿದವರೆಲ್ಲ ಪಡೆದರೆ, ಸಿದ್ಧರಾಮೇಶ್ವರರ ಪಾದೋದಕವನ್ನು ಪ್ರಭುವಿನ ಆದಿಯಾಗಿ ಎಲ್ಲರೂ ಸ್ವೀಕರಿಸುತ್ತಿದ್ದರು. ಆದರೆ ದುರ್ದೈವವೆಂದರೆ ಇಂದು ಲಿಂಗಾಯತರ ಒಳ ಪಂಗಡಗಳ ಲೇಖಕರು ಮತ್ತು ಅವರ ಮಠಾಧೀಶರು ಒಂದೊಂದು ಪಂಗಡಕ್ಕೆ ಓರ್ವ ಶರಣರನ್ನು ಅಧಿನಾಯಕರನ್ನಾಗಿ ಮಾಡುವುದೇ ಅಲ್ಲದೆ, ಅವರು ಎಲ್ಲರಿಗಿಂತಲೂ ಪೂಜ್ಯರು ಎಂದು ಕಥೆಗಳನ್ನು ಬರೆಯುವರು, ಬರೆಸುವರು. ಪಂಚ ಪೀಠಾಧೀಶರ ಗುಂಪಿನವರು (ಯಾಕೋ ಸಿದ್ಧರಾಮೇಶ್ವರರಿಗೆ ತಗುಲಿಕೊಂಡು) ಸತ್ಯ ದರ್ಶನ ಎಂಬ ಪುಸ್ತಕ ಬರೆಸಿ ಸಿದ್ಧರಾಮೇಶ್ವರರು ಕಲ್ಯಾಣಕ್ಕೆ ಬಂದಿಲ್ಲ ಚನ್ನಬಸವಣ್ಣನಿಂದ ದೀಕ್ಷೆ ಪಡೆದಿಲ್ಲ ಎಂದೆಲ್ಲ ಸೃಷ್ಟಿಸಿದ್ದಾರೆ. ಇವರ ಮುಖಕ್ಕೆ ಹೊಡೆಯುವಂತೆ ವಿಪುಲವಾದ ವಚನ ಸಾಹಿತ್ಯ ಲಿಂ॥ ಫ.ಗು. ಹಳಕಟ್ಟಿ ನಂತರ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗಿರದಿದ್ದರೆ ಇನ್ನೂ ಏನೇನು ಕಥೆಗಳು, ಪಾತ್ರಗಳು ಸೃಷ್ಟಿ ಯಾಗಿರುತ್ತಿದ್ದವೊ ?! ಸಿದ್ಧರಾಮೇಶ್ವರರು ರಚಿಸಿರುವ ಬಸವ ಸ್ತೋತ್ರ ತ್ರಿವಿಧಿ, ಮಿಶ್ರ ಸ್ತೋತ್ರ ತ್ರಿವಿಧಿ ಕಪಟಿಗಳ ಬಾಯಿಯನ್ನು, ಬರೆಯುವ ಕೈಯನ್ನು ಕೃತ್ರಿಮ ಸಾಹಿತ್ಯ ರಚಿಸದಂತೆ ಕಟ್ಟಿ ಹಾಕಿವೆ. ಇಷ್ಟಾದರೂ ನಮ್ಮ ಶರಣರ ತಲೆಯ ಮೇಲೆ ಕೈ ಇಡಲು ಯಾರಾದರೂ ಶಿವಾಚಾರ್ಯರುಗಳನ್ನು ದಿಢೀರನೆ ಕೆಲವರು ಹುಟ್ಟುಹಾಕುತ್ತಿರುತ್ತಾರೆ.

3. ಹೂಲಿ ಗ್ರಾಮದ ನಿರಾಭಾರಿ ಜಂಗಮರು ಮಹಾಲಿಂಗ ಮೂರ್ತಿಗಳು ಲೋಕ ಸಂಚಾರ ಮಾಡುತ್ತ ಬರುವರು. ಸೂಗೂರೇಶ್ವರನ ದರ್ಶನದ ಆಕಾಂಕ್ಷೆ ಹೊಂದಿರುವರು. ಆದರೆ ಅವರು, ಗುಡಿಯನ್ನು ಹೊಕ್ಕರೂ ತಮ್ಮ ಕರಡಿಗೆಗೆ ವಂದಿಸುವರು. ವಿಗ್ರಹಕ್ಕೆ ವಂದಿಸುವುದಿಲ್ಲ ಮತ್ತು ಮುಂದುವರಿದು "ವಿಗ್ರಹ ದರ್ಶನ ಶರಣ ಮಾರ್ಗಕ್ಕೆ ವಿರುದ್ಧ" ಎನ್ನುವರು.

ಅವರು ವಿಗ್ರಹಕ್ಕೆ ವಂದಿಸದೆ, ವಂದಿಸಿದ ಭಕ್ತರನ್ನು ಕಂಡು "ಶರಭೇಂದ್ರ ಬಿಂಬಕ್ಕೆ

ವಂದಿಸುವುದು ಬಸವಾದಿ ಪ್ರಮಥರ ಮಾರ್ಗಕ್ಕೆ ವಿರುದ್ಧವಾದ ಆಚರಣೆ'' ಎಂದಾಗ ಅಲ್ಲಿದ್ದ ಭಕ್ತರಿಗೆ ಅರ್ಥವಾಗದೆ ಗೊಂದಲ ಉಂಟಾಗುತ್ತದೆ. ಅದೇ ಸಂದೇಹದಲ್ಲಿ ಮಲಗಿದ ಓರ್ವ ಭಕ್ತನಿಗೆ ಕನಸಿನಲ್ಲಿ ಸೂಗೂರೇಶ್ವರರು ಕಾಣಿಸಿಕೊಳ್ಳುವರು. ''ಅಹುದು, ಅದೇ ನಿಜಾಚರಣೆ'' ಎಂದು ಜಂಗಮ ರೂಪದಲ್ಲಿ ಅಪ್ಪಣೆ ಕೊಡಿಸುವರು. ಮಹಾಲಿಂಗೇಶ್ವರ ಸ್ವಾಮಿಗಳೆಂಬ ವಿರಕ್ತರ ನಡೆಯ ಮೂಲಕ ನಾವು ಕಲಿಯುವ ಒಂದು ಆಚರಣೆ ಏನೆಂದರೆ ಲಿಂಗಾಂಗಿಗಳು ಅನ್ಯದೈವಗಳ ದರ್ಶನ, ವಂದನೆ ಮಾಡದೆ ಇಷ್ಟಲಿಂಗ ನಿಷ್ಠಾಯುಕ್ತರಾಗಿರಬೇಕು. ಶರಣರ ಸ್ಥಾನಗಳಿಗೆ ಹೋದಾಗ ನಮ್ಮ ಅಂಗದ ಮೇಲೆ ಇರುವ ಇಷ್ಟಲಿಂಗಕ್ಕೇ ವಂದಿಸಿ ಆ ಶರಣರನ್ನು ಸ್ತುತಿಸಬೇಕು.

ಶ್ರೀ ಚನ್ನವೀರದೇವರು ಲಿಂಗೈಕ್ಯರಾದುದು ಹೇಗೆ, ಎಲ್ಲಿ ಎಂಬುದನ್ನು ಕಾವ್ಯದಲ್ಲಿ ಪ್ರಸ್ತಾಪಿಸಿಲ್ಲ. ಗೊಬ್ಬೂರಿನಲ್ಲಿ ಆದರು ಎನ್ನಲು ಬರದು. ಏಕೆಂದರೆ ಅಲ್ಲಿಂದ ಅವರು ಸ್ವಯಂ ಇಚ್ಛೆಯಿಂದಲೇ ಹೊರಟಿದ್ದಾರೆ. ಆ ಊರಿನ ಜನರಲ್ಲಿ ದಯೆ-ಮಾನವೀಯತೆ ಕಾಣದೆ ಕೇವಲ ಮಡಿವಂತಿಕೆ, ಮತಾಂಧತೆ ಮಾತ್ರ ಉಳಿದಾಗ ಅಲ್ಲಿ ಇರಲು ಶರಣರು ಬಯಸಿಲ್ಲ. ಗಣಪರ್ವದ ಪ್ರಸಂಗದ ನಂತರ ಬಾಚಿರಾಜನ ಪ್ರಸ್ತಾಪವಿಲ್ಲ. ಮತಾಂಧರ ವಿರುದ್ಧದ ಹೋರಾಟದಲ್ಲಿ ಆತನು ಹತನಾಗಿರಬಹುದೆ? ಚನ್ನಬಸವಣ್ಣನವರ ಗೀತೆಯಲ್ಲಿ ಗಂಡುಗಲಿ ಬಾಚಿರಾಜ ಎಂದು ಹೇಳಲ್ಪಟ್ಟಿದೆ. ಸ್ವಭಾವತಃ ಕಲಿಯಾಗಿದ್ದ ಆತನ ಮರಣಾನಂತರ ಗೊಬ್ಬೂರಿನಲ್ಲಿ ಸರಿಯಾದ ಭದ್ರತೆ ಇಲ್ಲದ್ದರಿಂದಲೇ ಗುಪ್ತವಾಗಿ, ಮಾರುವೇಷದಲ್ಲಿದ್ದು ಚನ್ನವೀರದೇವರು ಬೇರೂರಿಗೆ ಹೋಗಲು ಕಾಯುತ್ತಿರಬಹುದು. ಸ್ವಧರ್ಮೀಯರಾದ ಆನಂದ ವೀರಯ್ಯ-ಕೆಂಚವೀರಯ್ಯ ಭಾವಿಯ ಬಳಿ ಲಿಂಗಾರ್ಚನೆ ಮಾಡುವಾಗ ನೋಡಿ, ಆನಂದ ತುಂದಿಲರಾಗಿ ತಾವು ಸೂಗೂರಿಗೆ ಬರುವುದಾಗಿ ಚನ್ನವೀರಶರಣರು ತಿಳಿಸಿದ್ದಾರೆ.

ಆಮೇಲೆ ಗೊಬ್ಬೂರಲ್ಲಿದ್ದ ನಾಗಭೂಷಣ ಮಠ - ಅಂದರೆ ತಾವು ವಾಸವಾಗಿದ್ದ ಮಠದ ಕಟ್ಟಡ ಬಿಚ್ಚಿಸಿ, ಅಲ್ಲಿಯ ಕಲ್ಲುಕಂಭ, ಬೋದುಗೆ ಮುಂತಾದ ಸಾಮಗ್ರಿ ತಂದು ಸೂಗೂರಲ್ಲಿ ಗುಡಿ ಕಟ್ಟಿಸಲು ಸಹ ಆದೇಶ ನೀಡಿದುದಾಗಿ ಹದಿನಾರನೆಯ ಸಂಧಿಯಲ್ಲಿ ಬಣ್ಣಿಸಲಾಗಿದೆ. ಮತ್ತೊಬ್ಬ ವಿರಕ್ತ ಮೂರ್ತಿಗಳಾದ ಇಂಗಳಗಿಯ ಬಸವ ಸ್ವಾಮಿಗಳು ಸ್ನಾನ ಮಾಡಿ ಗರ್ಭಗುಡಿಯೊಳಗೆ ಪ್ರವೇಶಿಸಿದಾಗ ಮುಚ್ಚಿದ ಬಾಗಿಲಿನ ಒಳಗಿನಿಂದ ಜಾಗಟೆ ಸದ್ದು ಕೇಳುವುದು, ಇಬ್ಬರು ವ್ಯಕ್ತಿಗಳ ನಡುವೆ (ಸಂಸ್ಕೃತ ಭಾಷೆಯಲ್ಲಿ?) ಸಂಭಾಷಣೆ ಕೇಳಿಬರುವುದು ಎಂದು ಹದಿನೆಂಟನೆಯ ಸಂಧಿಯಲ್ಲಿ ಬಣ್ಣಿಸಲಾಗಿದೆ. ಇವೆಲ್ಲ ಚಟುವಟಿಕೆಗಳು ಚನ್ನವೀರಶ್ರೀಗಳು ಆಗ ಇನ್ನೂ ದೇಹಧಾರಿಗಳಾಗಿ ಇದ್ದಿರಬಹುದು ಎಂಬುದಕ್ಕೆ ಸಾಕ್ಷಿ ನುಡಿಯುತ್ತವೆ. ಬಹುಶಃ ಸೂಗೂರಿನಲ್ಲೇ ಚನ್ನವೀರ ದೇವರು ಲಿಂಗೈಕ್ಯರಾಗಿದ್ದು ಅದು ಸಮಾಧಿ ಲಿಂಗವೇ ಇದ್ದಿರಬಹುದು. ಶರಣರ ಚರಿತ್ರೆಗಳನ್ನು ಪುರಾಣೀಕರಿಸಿ, ಅವರ ಗದ್ದುಗೆಗಳ ಮೇಲೆ ಏನೇನೋ ಮೂರ್ತಿಗಳನ್ನಿಟ್ಟು ನಿಜವಾದ ಮಾಹಿತಿ ಲಭ್ಯವಾಗದಂತೆ ಭಾವುಕ ಭಕ್ತರು ಮತ್ತು ಪುರಾಣಗಳ ಕರ್ತೃಗಳು ಮಾಡಿಬಿಡುತ್ತಾರೆ. ಗುಡ್ಡಾಪುರದ ದಾನಮ್ಮನ ಪರಿಸ್ಥಿತಿಯೂ ಹೀಗೇ ಆಗಿದೆ. ಆ ಶರಣೆಯ ಕ್ರಾಂತಿಕಾರಿ ಜೀವನ, ಸಾಧನೆ ಮುಚ್ಚಿಟ್ಟು ಯಾವುದೋ ದೇವಿಯ ರೂಪ ನೀಡಿ ಕೆಲವೇ ದಿನಗಳಲ್ಲಿ ಅವರನ್ನು ಮರ್ತ್ಯಲೋಕದಿಂದಲೇ ಕತ್ತರಿಸಿ ಕೈಲಾಸಕ್ಕೆ ಸೇರ್ಪಡೆ ಮಾಡಿಬಿಡುತ್ತಾರೆ.

ಆದ್ದರಿಂದ ಐತಿಹಾಸಿಕ ಅಂಶಗಳನ್ನು ನಾವು ಹುಡುಕಿ, ಶರಣರಿಗೆ ಸ್ಮಾರಕ ರಚಿಸುವ ಜೊತೆಗೆ ಅವರನ್ನು ಮಾನವ ರೂಪದಲ್ಲಿ ಪ್ರಚಾರಕ್ಕೆ ತರುವುದರಲ್ಲೇ ಲೋಕಕ್ಕೆ ಹಿತವಿದೆ, ಉನ್ನತಿ ಇದೆ.

ಈ ಲೇಖನ ಪೂರ್ಣಗೊಳಿಸುವ ಮುನ್ನ ಶಿವಶರಣರ ಕಥಾರತ್ನಕೋಶ ಕುರಿತು ಒಂದೆರಡು ಮಾತು. ದಿವಂಗತ ಶ್ರೀ ತ.ಸು.ರಾಮರಾವ್ ಅವರ ಕೊಡುಗೆ ಅಮೂಲ್ಯ, ಅನುಪಮ. ಮೈಸೂರಿನ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆಯಿಂದ 1967 ರಲ್ಲಿ ಮುದ್ರಣಗೊಂಡ ಈ ಕೃತಿಯ ವಿಸ್ತಾರ ಅಪಾರ; ಸಂಪಾದಕರ ಪರಿಶ್ರಮ ಅಪರಿಮಿತ. ನೂರಾರು ಕಾವ್ಯ ಗ್ರಂಥಗಳನ್ನು ಅಧ್ಯಯನ ಮಾಡಿ ಶ್ರೀ ತ.ಸು.ಶಾಮರಾಯರು ಶರಣರು ಮತ್ತು ಶಿವಭಕ್ತರ ಚರಿತ್ರೆ ಕುರಿತು ಮಾಹಿತಿ ಸಂಗ್ರಹ ಮಾಡಿ ಇದನ್ನು ಒಂದು ವಿಶ್ವಕೋಶ (Encyclopedia) ದಂತೆ ರಚಿಸಿದ್ದಾರೆ. ಇದರಲ್ಲಿ ಸಾಂಕೇತಿಕವಾದ ಪೌರಾಣಿಕ ಭಾಷೆಯಲ್ಲಿ ಮಾಹಿತಿ ಸಿಕ್ಕುತ್ತಿದೆ. ನಾವು ಅದರೊಳಗಿನ ಚಾರಿತ್ರಿಕ ಎಳೆಗಳನ್ನು ಬಿಡಿಸಿಕೊಳ್ಳಬೇಕು. ಪುಸ್ತಕವು ಮರು ಮುದ್ರಣಗೊಂಡಿದೆಯೋ ಇಲ್ಲವೊ. ಬಹಳ ಅಮೂಲ್ಯ ಗ್ರಂಥವಾದ ಇದನ್ನು ಮರುಮುದ್ರಿಸುವುದು ಅಭಿನಂದನಾರ್ಹ.

ಲಿಂಗಾಯತ ''ಅನುಭಾವ ಸಂಸ್ಕೃತಿ''ಯ ಪ್ರತೀಕ

- ಡಾ. ಎಂ.ಎಂ. ಕಲಬುರ್ಗಿ, ವಿಶ್ರಾಂತ ಕುಲಪತಿಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗದಗ: 30 ವರ್ಷಗಳ ಹಿಂದೆ ''ವೀರಶೈವ ಅಧ್ಯಯನ ಕೇಂದ್ರ''ವೆಂದು ಮಾಡಿದ ತಪ್ಪನ್ನು ಸರಿಪಡಿಸಿಕೊಂಡು ''ಲಿಂಗಾಯತ ಅಧ್ಯಯನ ಕೇಂದ್ರ''ವೆಂದು ಮಾಡಿದ ಇಂದಿನ ದಿನ ಚರಿತ್ರಾರ್ಹವಾದುದೆಂದು ಖ್ಯಾತ ಸಂಶೋಧಕ ಡಾ|| ಎಂ.ಎಂ.ಕಲಬುರ್ಗಿ ಅಭಿಪ್ರಾಯಪಟ್ಟರು. ಅವರು ಗದಗ ತೋಂಟದಾರ್ಯ ಮಠದಲ್ಲಿ ನಡೆದ ಶಿವಾನುಭವ ಹಾಗೂ ವೀರಶೈವ ಅಧ್ಯಯನ ಕೇಂದ್ರ ಸರಿಪಡಿಸಿಕೊಂಡು ಲಿಂಗಾಯತ ಅಧ್ಯಯನ ಕೇಂದ್ರವೆಂದು ಮಾಡಿದ ನಿಮಿತ್ತ ಮಾ. 29 ರಂದು ಏರ್ಪಡಿಸಲಾದ ಸಮಾರಂಭವನ್ನುದ್ದೇಶಿಸಿ ಮಾತನಾಡುತ್ತಿದ್ದರು. ಹೆಸರು ಕೇವಲ ಹೆಸರಲ್ಲ. ಅದರಲ್ಲಿ ಅಪಾರ ಅರ್ಥ ಅಡಗಿರ್ದೆ. ಅದು ವ್ಯಕ್ತಿಯ, ದೇಶದ, ಪರಂಪರೆಯ ಸ್ವರೂಪವನ್ನು ಬಿಂಬಿಸುವ ಶಬ್ದರೂಪ. ಮೈಸೂರು ರಾಜ್ಯವನ್ನು ಬದಲಾಯಿಸಿ ಕರ್ನಾಟಕ ರಾಜ್ಯವನ್ನಾಗಿ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ ಎಂದ ಅವರು ತಪ್ಪು ನಮ್ಮ ಗಮನಕ್ಕೆ ಬಂದಾಗ ತಿದ್ದಿಕೊಳ್ಳುವುದು ನಮ್ಮ ಧರ್ಮ.

ಲಿಂಗಾಯತವು ಅನುಭಾವ ಸಂಸ್ಕೃತಿಯಾಗಿದ್ದು ವೀರಶೈವವು ಆಚಾರ ಸಂಸ್ಕೃತಿಯಾಗಿದೆ. ಪುರೋಹಿತ ಶಾಹಿಯನ್ನು ಪ್ರತಿಪಾದಿಸುವ ಆಚಾರ ಸಂಸ್ಕೃತಿ ನಮ್ಮದಲ್ಲ. ನಮ್ಮದು ಶುದ್ಧ ಅನುಭಾವವುಳ್ಳ ಲಿಂಗಾಯತ ಸಂಸ್ಕೃತಿಯಾಗಿದೆಯೆಂಬುದನ್ನು ತಿಳಿಯಬೇಕು. ಇಲ್ಲಿಯವರೆಗೆ ನಾವು ನಡೆಯಲ್ಲಿ ಲಿಂಗಾಯತರಾಗಿ ನುಡಿಯಲ್ಲಿ ವೀರಶೈವವೆಂದು ಬಳಸಿದ್ದೇವೆ. ಬಾಡಿಗೆಗೆ ಬಂದವ ಮನೆಯನ್ನೇ ಆಕ್ರಮಣ ಮಾಡಿಕೊಂಡಾಗ ಮಾಲೀಕನಿಗೆ ಆಗುವ ಭಯ ಈಗ ನಮ್ಮಲ್ಲಿ ಉಂಟಾಗಿದೆ.

ಶ್ರೇಷ್ಠತೆ ಪ್ರಾಚೀನತೆಯ ಭ್ರಮೆಗೆ ಒಳಗಡೆಯಾಗಿ ವೀರಶೈವವನ್ನು ಬಳಸಲಾಗಿದ್ದು, ಇದು ಇತ್ತೀಚಿನ ಪದವಾಗಿದೆ.

ಬಸವಾದಿ ಶರಣರ ಷಟಸ್ಥಲ ವಚನಗಳಲ್ಲಿ ಎಲ್ಲಿಯೂ ವೀರಶೈವ ಪದ ಬಳಕೆಗೆ ಬಂದಿಲ್ಲ. ಹೆಚ್ಚಿನ ವಚನಗಳಲ್ಲಿ ಕಾಣಬಹುದಾಗಿದ್ದು, ಅವು ಕೃತಕ ವಚನಗಳಾಗಿವೆ ಎಂದು ಸ್ಪಷ್ಟಪಡಿಸಿದರಲ್ಲದೇ ವೀರಶೈವ ಪದ ಬಳಕೆ ಹೇಗೆ, ಯಾವಾಗ, ಎಲ್ಲಿಂದ ಪ್ರಾರಂಭವಾಯಿತೆಂದು ಉದಾಹರಣೆಗಳೊಂದಿಗೆ ವಿವರಿಸಿ ಬಸವಾದಿ ಶರಣರ ಪರಂಪರೆಗೆ ಎಂಟುನೂರು ವರ್ಷ, ಪಂಚಾಚಾರ್ಯ ಪರಂಪರೆಗೆ ನಾಲ್ಕುನೂರು ವರ್ಷ, ಅದರಲ್ಲಿಯೂ ಕಾಶಿಪೀಠಕ್ಕೆ ಕೇವಲ ಎರಡು ನೂರು ವರ್ಷಗಳ ಇತಿಹಾಸವಿದೆಯೆಂದು ತಿಳಿಸಿದರು. ಆರಾಧ್ಯ ಪರಂಪರೆಯ ಪಾಲ್ಕುರಿಕೆ ಸೋಮನಾಥರು ಮುಸ್ಲಿಂರು ಆಂಧ್ರಪ್ರದೇಶದ ಮೇಲೆ ದಾಳಿ ಮಾಡಿದಾಗ ಆಂಧ್ರಪ್ರದೇಶವನ್ನು ಬಿಟ್ಟು ತುಮಕೂರು ಜಿಲ್ಲೆಯ ಕಲ್ಲಿಗೆ ಬಂದು ನೆಲೆಸಿದರು. ಆರಾಧ್ಯ ಪರಂಪರೆಯ ಐದು ಪೀಠಗಳು ಹುಟ್ಟಿಕೊಂಡಿದ್ದು ಶಿವಗಂಗೆಯಲ್ಲಿ ನಂತರ 16ನೇ ಶತಮಾನದಲ್ಲಿ ಬಾಳೆಹಳ್ಳಿಗೆ ಬಂದ ರಂಭಾಪುರಿ ಪೀಠ ಕೆಳದಿ ಅರಸರ ಪ್ರೋತ್ಸಾಹದಿಂದ ಪ್ರಚಾರ ಪಡೆದುಕೊಂಡಿತೆಂದು ವಿವರಿಸಿದರು.

ಮುಂದುವರಿದು ಮಾತನಾಡಿದ ಅವರು ಆಚಾರ್ಯ ಪರಂಪರೆಯ ಮಗ್ಗಿ ಮಾಯಿದೇವ, ಮಹಾಲಿಂಗದೇವ, ಜಕ್ಕಣಾರ್ಯ ಇವರೆಲ್ಲ "ಶ್ರೀ ಗುರು ಬಸವ ಲಿಂಗಾಯತ ಸಮೂಹ' ಎಂದೇ ಹೇಳಿದ್ದಾರೆ ಎಂದು ಸ್ಮರಿಸಿದರು. 19ನೇ ಶತಮಾನದವರೆಗೂ ವೀರಶೈವ ಅಂದರೆ ಯಾರಿಗೂ ಅರ್ಥವಾಗುತ್ತಿರಲಿಲ್ಲ. ಇದಕ್ಕೆ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಲಿಂಗಾಯತ ಭವನ, ಲಿಂಗಾಯತ ಖಾನಾವಳಿ ಹೀಗೆ ಅನೇಕ ಉದಾಹರಣೆಗಳಿದ್ದು, ಕಿಟಲ್‌ರವರು ಲಿಂಗಾಯತ ಲಿಟರೇಚರ್ ಎಂದಿದ್ದಾರೆಯೇ ಹೊರತು ವೀರಶೈವ ಲಿಟರೇಟರ್ ಎಂದು ಎಲ್ಲಿಯೂ ಬಳಸಿಲ್ಲ. 1905ರಲ್ಲಿ ಮೈಸೂರಲ್ಲಿ ಲಿಂಗಾಯತ ವಿದ್ಯಾನಿಧಿ ಫಂಡ್ ಮಾಡಲಾಗಿದ್ದನ್ನು 1968ರಲ್ಲಿ ವೀರಶೈವ ಎಂದು ಮಾಡಲಾಗಿರುವ ಹಿಂದೆ ಪ್ರಜ್ಞಾಪೂರಕವಾಗಿ ನಡೆದ ಕುತಂತ್ರವೆಂಬುದು ಈಗ ಸ್ಪಷ್ಟವಾಗಿದೆ. ವಚನಶಾಸ್ತ್ರಸಾರದಲ್ಲಿ 15 ಪುಟಗಳ ಮುನ್ನುಡಿ ಬರೆದ ಡಾ|| ಫ.ಗು. ಹಳಕಟ್ಟಿಯವರೂ ಸಹ ಎಲ್ಲಿಯೂ ವೀರಶೈವ ಎಂಬ ಪದ ಬಳಕೆ ಮಾಡಿಲ್ಲ.

ಇದನ್ನೆಲ್ಲ ಅರಿತು ಇಲ್ಲಿಯವರೆಗೆ ಮಾಡಿದ ತಪ್ಪನ್ನು ತಿದ್ದಿಕೊಳ್ಳುವ ಕೆಲಸ ಇಂದು ನಡೆಯುತ್ತಿದೆ. ನಾವು ಲಿಂಗಾಯತರು, ಲಿಂಗಸನ್ನಿಹಿತರು. ವೀರಶೈವವನ್ನು ವ್ಯಾಖ್ಯಾನ ಮಾಡಲಾಗದು. ಅಂತಹ ಅರ್ಥವಿಲ್ಲದ ಪದವನ್ನು ಬಿಟ್ಟು ಜನಸಾಮಾನ್ಯರ ಜೀವನದಲ್ಲಿ ಹಾಸುಹೊಕ್ಕಾಗಿರುವ ಲಿಂಗಾಯತ ಪದವನ್ನು ಬರಹಗಾರರು ಬಹಳ ಎಚ್ಚರಿಕೆಯಿಂದ ಬಳಸಬೇಕೆಂದು ಕರೆ ನೀಡಿದ ಡಾ. ಎಂ.ಎಂ. ಕಲಬುರ್ಗಿಯವರು ನಮ್ಮ ಪರಂಪರೆ ಏನು ? ಯಾವುದು ಸೂಕ್ತ ಎಂಬುದನ್ನು ಅರಿತು ಮುಂದಿನ ಹೆಜ್ಜೆ ಇಡಬೇಕಿದೆ. ವೀರಶೈವರೆಂದು ಹೇಳಿಕೊಳ್ಳುವ ಪಂಚಾಚಾರ್ಯರ ಬರ್ತ್ ಸರ್ಟಿಫಿಕೇಟ್‌ನಲ್ಲಿ "ಹಿಂದೂ ಲಿಂಗಾಯತ" ವಿರುವ ದಾಖಲಾತಿ ಪತ್ರವನ್ನು ಸಿದ್ಧಲಿಂಗ ದೇಸಾಯಿಯವರು ಸಂಗ್ರಹಿಸಿದ್ದಾರೆ. ಇದನ್ನೆಲ್ಲ ಸಮಾಜ ತಿಳಿದುಕೊಳ್ಳುವುದು ಬಹಳ ಮುಖ್ಯ. ಗುರು-ವಿರಕ್ತರು

ಒಂದಾಗಲಿ. ಆದರೆ ಸತ್ಯ ತಿಳಿದುಕೊಂಡು ಒಂದಾಗಲಿ. ಉಪ್ಪು-ಸಕ್ಕರೆ ಸೇರಿದರೆ ಯಾವುದಕ್ಕೂ ಉಪಯೋಗವಿಲ್ಲವೆಂದು ತಿಳಿಸಿದರು.

ಧಾರವಾಡ ಜಿಲ್ಲಾ ಪಂಚಾಯತನ ಮಾಜಿ ಅಧ್ಯಕ್ಷ ವ್ಹಿ.ಎಸ್.ಪಾಟೀಲ ಲಿಂಗಾಯತ ಅಧ್ಯಯನ ಕೇಂದ್ರದಿಂದ ಪ್ರಕಟಿಸಲಾದ "ಲಿಂಗಾಯತ ಪುಣ್ಯ ಪುರುಷರು" ಗ್ರಂಥಮಾಲೆಯಲ್ಲಿ ಸಿದ್ಧಲಿಂಗ ದೇಸಾಯಿಯವರು ಬರೆದ "ಆಲಮೇಲ ದೇಶಮುಖಿರು" ಗ್ರಂಥ ಬಿಡುಗಡೆ ಮಾಡಿ ಸಾಂದರ್ಭಿಕವಾಗಿ ಮಾತನಾಡಿದರು. ಗ್ರಂಥಕರ್ತ ಸಿದ್ಧಲಿಂಗ ದೇಸಾಯಿ ಮಾತನಾಡಿ "ಲಿಂಗಾಯತ ಎಂದರೆ ಹುಂಬ ಎಂದು ನಮಗೆ ನಾವೇ ಭಾವಿಸಿಕೊಂಡು ನಮ್ಮ ಕೀಳರಿಮೆ ಅಜ್ಞಾನದಿಂದ ಬಳಸಲಾದ ವೀರಶೈವ ಪದವು ನಮ್ಮ ಹಿರಿಯರ ಆಚಾರ ಸಂಸ್ಕೃತಿಯ ಒಲುಮೆಯೇ ಕಾರಣ" ವಾಗಿದೆ. ವೀರಶೈವ ಬಳಸುವುದರಿಂದ ನಮಗೆ ಶ್ರೇಷ್ಠತೆ ಪ್ರಾಚೀನತೆ ದೊರೆಯುವುದೆಂಬ ತಪ್ಪು ಕಲ್ಪನೆಯನ್ನು ಸರಿಪಡಿಸಿ "ಲಿಂಗಾಯತ ಅಧ್ಯಯನ ಸಂಸ್ಥೆ" ಮಾಡಿದ್ದು ಸಂತಸದ ಸಂಗತಿಯಾಗಿದೆ ಎಂದರು. ಪ್ರಾರಂಭದಲ್ಲಿ ಶ್ರೀ ಬಸವಾನಂದ ಸ್ವಾಮಿಯವರು "ಸರ್ವಜ್ಞನ ವಚನಗಳು" ಕುರಿತು ಪ್ರವಚನ ನೀಡಿದರು. ಸಾಹಿತಿ ಸಿದ್ಧಲಿಂಗ ಪಟ್ಟಣಶೆಟ್ಟಿ ಮುಂತಾದವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಚಂದ್ರಶೇಖರ ವಸ್ತ್ರದ ಕಾರ್ಯಕ್ರಮ (ಬಸವ ಬೆಳಗು) ನಿರೂಪಿಸಿದರು.

"ಪರಮ ಪೂಜ್ಯ ಗದುಗಿನ ತೋಂಟದಾರ್ಯ ಜಗದ್ಗುರುಗಳ ದಿಟ್ಟ ನಿಲುವು"

ಲಿಂಗಾಯತ ಅನುಭಾವ ಪರಂಪರೆಯನ್ನು ಪ್ರತಿನಿಧಿಸುತ್ತದೆ

"ಅನುಭಾವ ಪರಂಪರೆಯಲ್ಲಿ ಮನಸಾಕ್ಷಿಗೆ ಬಹುದೊಡ್ಡ ಸ್ಥಾನವಿದೆ. ಯುಗಪುರುಷ ಬಸವಣ್ಣನವರು ತಮ್ಮ ಮಾತುಗಳಿಗೆ ವೇದೋಪನಿಷತ್ತುಗಳ ಅಥವಾ ಪ್ರಸ್ಥಾನತ್ರಯಗಳ ಸಾಕ್ಷ್ಯ ಒದಗಿಸಲಿಲ್ಲ. ನಿಮ್ಮ ಪಾದ ಸಾಕ್ಷಿ, ಎನ್ನ ಮನಸಾಕ್ಷಿ" ಎಂದಿದ್ದಾರೆ. ಆಚಾರ ಪರಂಪರೆ 'ಹುಟ್ಟು' ಶ್ರೇಷ್ಠವೆಂದರೆ ಲಿಂಗಾಯತ ಪರಂಪರೆ "ಅನುಭಾವ" ವನ್ನು ಪ್ರತಿನಿಧಿಸುತ್ತದೆ. "ಸಂಸ್ಕಾರ" ಶ್ರೇಷ್ಠವೆನ್ನುತ್ತದೆಯೆಂದು ಗದುಗಿನ ತೋಂಟದಾರ್ಯ ಮಠದ ಡಾ|| ಸಿದ್ಧಲಿಂಗ ಸ್ವಾಮೀಜಿ ನುಡಿದರು.

ಅವರು ಮಾ. 29ರಂದು ಶ್ರೀಮಠದ ಆವರಣದಲ್ಲಿ ಆಯೋಜಿಸಲಾಗಿದ ಶಿವಾನುಭವದಲ್ಲಿ ವೀರಶೈವ ಅಧ್ಯಯನ ಸಂಸ್ಥೆಯನ್ನು "ಲಿಂಗಾಯತ ಅಧ್ಯಯನ ಸಂಸ್ಥೆ" ಎಂದು ಸರಿಪಡಿಸಿದ ವಿಷಯ ಕುರಿತು ಚಿಂತನಗೈಯುತ್ತಿದ್ದರು. 30 ವರ್ಷಗಳ ಹಿಂದೆ ಆದ ತಪ್ಪನ್ನು ಸರಿಪಡಿಸಿಕೊಳ್ಳುವ ಐತಿಹಾಸಿಕ ದಿವಸ ಇದಾಗಿದ್ದು ಅನುಭಾವ ಪರಂಪರೆಯ ಲಿಂಗಾಯತ ಧರ್ಮಕ್ಕೆ ಬಸವಣ್ಣನವರೇ ಗುರು, ಅವರು ರೂಪಿಸಿದ "ಲಿಂಗಾಯತ" ಮಾರ್ಗದ ಅನುಯಾಯಿಗಳು ನಾವು. ಇಡೀ ವಿಶ್ವವೇ ಬಸವಣ್ಣನವರನ್ನು ಒಪ್ಪುವಾಗ ಕೆಲವರು ಮಾತ್ರ ಒಪ್ಪದಿರುವುದು ಅವರ ದುರ್ದೈವವಾಗಿದೆಯೆಂದರಲ್ಲದೇ ಶ್ರೀ ಮಠದ ವೀರಶೈವ ಅಧ್ಯಯನ ಸಂಸ್ಥೆಯನ್ನು "ಲಿಂಗಾಯತ ಅಧ್ಯಯನ ಸಂಸ್ಥೆ" ಯನ್ನಾಗಿ ಮರು ನಾಮಕರಣ ಮಾಡುವುದರ ಮೂಲಕ ಮನಸಾಕ್ಷಿ ಹೊಸ ಹೆಜ್ಜೆ ಹಾಕಿದೆ. ಇದು ನಮಗೆ ಹೆಮ್ಮೆಯ ವಿಷಯವಾಗಿದೆಯೆಂದು ತಿಳಿಸಿದರು.

(ಆಧಾರ : **"ವಿಜಯ ಸಂದೇಶ"** ವಾರ ಪತ್ರಿಕೆ, ಏಪ್ರಿಲ್ 5, 2004)

ಗದಗಿನ ತೋಂಟದಾರ್ಯ ಮಠ-ವೀರಶೈವದಿಂದ ಲಿಂಗಾಯತಕ್ಕೆ ಬದಲಾವಣೆ ಅಭಿನಂದನಾರ್ಹ

- ಮಾತಾಜಿ

ಗದಗಿನ ಶ್ರೀ ತೋಂಟದಾರ್ಯ ಮಠದ ಆಶ್ರಯದಲ್ಲಿ "ವೀರಶೈವ ಅಧ್ಯಯನ ಸಂಸ್ಥೆ" 30 ವರ್ಷಗಳ ಹಿಂದೆ ಆರಂಭಗೊಂಡಿದ್ದು ಬಹಳ ಮಹತ್ವಪೂರ್ಣ ಗ್ರಂಥಗಳನ್ನು ಪ್ರಕಟಿಸುತ್ತಾ ಬಂದಿದೆ. "ವೀರಶೈವ ಪುಣ್ಯ ಪುರುಷರ ಮಾಲಿಕೆ"ಯ ಅಡಿಯಲ್ಲಿ ಅನೇಕ ಮಹನೀಯರ ಕುರಿತು ಪರಿಚಯ ಗ್ರಂಥಗಳನ್ನು ಪ್ರಕಟಿಸುತ್ತಾ ಬಂದಿದೆ. ಪೂಜ್ಯ ಲಿಂಗಾನಂದ ಅಪ್ಪಾಜಿಯವರು ಲಿಂಗೈಕ್ಯರಾದ ಬಳಿಕ ಡಾ|| ಬಿ.ಸಿ. ಜವಳಿಯವರಿಂದ ಪ್ರವಚನ ಪಿತಾಮಹ ಪುಸ್ತಕ ಬರೆಸಿ ಸಚಿತ್ರಪೂರ್ಣವಾಗಿ ಪ್ರಕಟಿಸಿದೆ. ಆದರೆ, ರುಚಿಯಾದ ಮೊಸರನ್ನ ಮೆಲ್ಲುವಾಗ ಕಲ್ಲಿನ ಹರಳು ಹಲ್ಲಿಗೆ ಕಟ್ ಎಂದು ಸಿಕ್ಕಿ, ಹಲ್ಲಿನ ಸಂದಿಯಲ್ಲಿ ಸಿಕ್ಕಿದಾಗ ಬಾಧೆಯಾಗುವಂತೆ ವೀರಶೈವ ಅಧ್ಯಯನ ಸಂಸ್ಥೆ, ವೀರಶೈವ ಪುಣ್ಯ ಪುರುಷರ ಮಾಲಿಕೆ ಎಂಬ ಪದಗಳು ಬಹಳ ಮುಜುಗರ ಉಂಟು ಮಾಡುತ್ತಿದ್ದವು. ಪದಗಳ ಬದಲಾವಣೆ ಮಾಡಿದರೆ ಒಳಿತು ಎಂದು 1995ರ ವರ್ಷಾಂತ್ಯದಲ್ಲಿ ಪುಸ್ತಕ ಬಿಡುಗಡೆಯಾದಾಗ ಹೋಗಿದ್ದ ನಾನು ಭಾಷಣದಲ್ಲಿ ಹೇಳಿದ್ದೆ. ಪೂಜ್ಯ ಶ್ರೀಗಳು ವಿಶೇಷವಾಗಿ ಹೇಳುವಂತೆ (ಭಕ್ತರ) ಕೋಟೆಯ ಒಳಗೆ ಬಂಧಿಯಾಗಿ ಯುದ್ಧ ಮಾಡುವವರು ಅವರು, ಬಯಲಲ್ಲಿ ನಿಂತು ಯುದ್ಧ ಮಾಡುವವರು ನಾವು. ಸಾಂಪ್ರದಾಯಿಕ ಭಕ್ತರ ಮನಸ್ಸನ್ನು ಬದಲಾವಣೆಯು ಅಷ್ಟು ಪ್ರವೇಶಿಸದ ಹೊರತು ಬದಲಾವಣೆ ಸಾಧ್ಯವಿಲ್ಲವೆಂದು ನಾವೂ ಮನಗಂಡಿದ್ದೆವು.

ಅಂತೂ ಅಂಥ ಶುಭ ಸಮಯ "ಎಮ್ಮವರು ಬೆಸಗೊಂಡು" ಒದಗಿ ಬಂದಂತೆ 2004ರ ಮಾರ್ಚ್ 29 ರಂದು ಒದಗಿ ಬಂದು ವೀರಶೈವ ಅಧ್ಯಯನ ಸಂಸ್ಥೆ ಲಿಂಗಾಯತ ಅಧ್ಯಯನ ಸಂಸ್ಥೆಯಾಗಿ ನಾಮಾಂತರ ಹೊಂದಿದೆ. ನಿಧಾನದ ಹೆಜ್ಜೆ ಇಟ್ಟರೂ ಚಿಂತೆಯಿಲ್ಲ ತೋಂಟದ ಜಗದ್ಗುರುಗಳು ಅಭಿನಂದನಾರ್ಹರಾಗಿದ್ದಾರೆ. ಆ ಶುಭ ಸಮಯದಲ್ಲಿ ಶ್ರೀ ಡಾ|| ಎಂ.ಎಂ. ಕಲಬುರ್ಗಿಯವರು ಮಾಡಿದ ಭಾಷಣವನ್ನು ಬಸವ ಬೆಳಗು ಪತ್ರಿಕೆಯ ಜುಲೈ-ಆಗಸ್ಟ್-ಸೆಪ್ಟಂಬರ್ 2004ರ ತ್ರೈಮಾಸಿಕದಿಂದ ಆಯ್ದುಕೊಂಡು ಪುಟ 47ರಿಂದ 50ರವರೆಗೆ ಯಥಾವತ್ತಾಗಿ ಪ್ರಕಟಿಸಲಾಗಿದೆ. ವೀರಶೈವದ ಮಸಿಯ ಬಟ್ಟೆಯನ್ನು ಕಿತ್ತೊಗೆದು ಲಿಂಗಾಯತ ಅಧ್ಯಯನ ಸಂಸ್ಥೆ ದಿಟ್ಟ ಹೆಜ್ಜೆಯನ್ನಿಟ್ಟಿದೆ.

ವೀರಶೈವ ಎಂಬ ಲಿಂಗಾಯತ ಸಮಾಜಕ್ಕೆ ಸಂಬಂಧವಿಲ್ಲದ, ಇತರ ರಾಜ್ಯಗಳಲ್ಲಿ ಸವೆದು ಹೋಗಿರುವ ಪದವನ್ನು ಒಂದು (ಧೂರ್ತ) ಆಲೋಚನೆಯಿಂದ ಹಾನಗಲ್ ಕುಮಾರ ಸ್ವಾಮಿಗಳು ಇನ್ನೊಂದು ಧೂರ್ತ ಸಂಚಿನಿಂದ ಬಾಳೆಹಳ್ಳಿ ಮಠದವರು ತಂದು ಲಿಂಗಾಯತ ಸಮಾಜದೊಳಕ್ಕೆ ತೂರಿ ಬಿಟ್ಟರು. ಲಿಂಗಾಯತ ಬಹಳ ಸಂಕುಚಿತ ಪದ ವೀರಶೈವ ವಿಶಾಲ ಪದ ಎಂಬ ಭ್ರಮೆಯನ್ನು ಹುಟ್ಟಿಸಿದರು. ಪೂಜ್ಯ ಲಿಂಗಾನಂದ ಅಪ್ಪಾಜಿಯವರಂಥ ಪ್ರಗತಿಪರ ಚಿಂತಕರು ಸಹ ವೀರಶೈವನಾರು? ಎಂಬ ಪಟ ಮುದ್ರಿಸಿದ್ದರು. 1970ರಲ್ಲಿ ಎಂ.ಎ.ತತ್ತ್ವಜ್ಞಾನ ತೇರ್ಗಡೆಯಾಗಿ ಕ್ರೈಸ್ತ ಮತ್ತು ಲಿಂಗಾಯತ ಧರ್ಮಗಳಲ್ಲಿ ಪರಿವರ್ತನೆ ಎಂಬ ವಿಷಯ ತೆಗೆದುಕೊಂಡು ಪಿಹೆಚ್.ಡಿ ಮಾಡಲು ಆರಂಭಿಸಿದ

ನನಗೆ ಹೊಸರೀತಿಯ ಚಿಂತನೆ ಆರಂಭವಾಯಿತು. ಆಗ ವೀರಶೈವ ಪದ ಹುಡುಕಲು ತೊಡಗಿ ವಚನಗಳ ಅಧ್ಯಯನ ಮಾಡಿದಾಗ ಬಸವಣ್ಣ, ಅಲ್ಲಮಪ್ರಭು ಮುಂತಾದವರ ವಚನಗಳಲ್ಲಿ ಈ ಪದ ಕಾಣ ಬರದೆ, ಚನ್ನಬಸವಣ್ಣನವರ ವಚನಗಳಲ್ಲಿ ಅದೂ ಖಂಡನಾತ್ಮಕವಾಗಿ ಕಾಣಬರತೊಡಗಿತು. ಪೂಜ್ಯ ಗುರುಗಳ ಮುಂದೆ ಈ ವಿಚಾರಗಳನ್ನು ಇಡುತ್ತ, ಹಾಗೆಯೇ ಅಧ್ಯಯನ ಮುಂದುವರಿಸಿದಾಗ **ಸಾಹಿತ್ಯದಲ್ಲಿ** ವೀರಶೈವ ಪದವು 15ನೆಯ ಶತಮಾನದ ಬಳಿಕ, **ಸಮಾಜದಲ್ಲಿ** 20ನೆಯ ಶತಮಾನದಲ್ಲಿ ತೂರಿಸಲ್ಪಟ್ಟಂತೆ ತೋರಿತು. ಜನಗಣತಿ ಸಮಯದಲ್ಲಿ "ಲಿಂಗಾಯತ"ಪದ ಪ್ರಚಾರಕ್ಕಾಗಿ ಬಹಳ ಪ್ರಯತ್ನಿಸಿದೆವು. ಡಾ|| ಎಂ.ಎಂ. ಕಲಬುರ್ಗಿ ಈಗಲಾದರೂ ಸ್ಪಷ್ಟಪದಗಳಲ್ಲಿ "ಇಲ್ಲಿಯವರೆಗೆ ನಾವು ನಡೆಯಲ್ಲಿ ಲಿಂಗಾಯತರಾಗಿ ನುಡಿಯಲ್ಲಿ ವೀರಶೈವವೆಂದು ಬಳಸಿದ್ದೇವೆ." ಎಂಬುದಾಗಿ ಹೇಳಿರುವುದು ನನಗೆ ತುಂಬಾ ಸಮಾಧಾನ ತಂದಿದೆ.

ಸತ್ಯವನ್ನು ಕಟುವಾಗಿ ಹೇಳುತ್ತ ವಿವಾದ ಹುಟ್ಟಿಸುವರೆಂದು ನಮ್ಮನ್ನೇ ಅನೇಕರು ದೂಷಿಸುತ್ತಿರುವಾಗ ಡಾ|| ಕಲಬುರ್ಗಿಯವರೂ ಸ್ಪಷ್ಟಭಾಷೆ ಬಳಸಲು ಆರಂಭಿಸಿರುವುದು ಸಮಾಧಾನ ತರುವ ಸಂಗತಿಯೇ ಸರಿ. ಅವರಾಡಿದ ಇನ್ನೊಂದು ಮಾತು ಮನನಾರ್ಹ. "ಬಾಡಿಗೆಗೆ ಬಂದವ ಮನೆಯನ್ನೇ ಆಕ್ರಮಣ ಮಾಡಿಕೊಂಡಾಗ ಮಾಲೀಕನಿಗೆ ಆಗುವ ಭಯ ಈಗ ನಮ್ಮಲ್ಲಿ ಉಂಟಾಗಿದೆ" ಎಂಬ ಮಾತು. ಬಸವ ಸಂಸ್ಥಾಪಿತ ಲಿಂಗಾಯತ ಧರ್ಮದೊಳಕ್ಕೆ ಪ್ರವೇಶಿಸಿದ ಶೈವರು, ವೈದಿಕರು ಈ ಮನೆಯನ್ನೇ ಕಬ್ಜಾ ತೆಗೆದುಕೊಂಡುದಲ್ಲದೆ ಅದರ ಮೂಲ ಸ್ವರೂಪವನ್ನೇ ಕಳೆದುಬಿಟ್ಟಿದ್ದಾರೆ.

ಬಸವಾದಿ ಶರಣರ ಪರಂಪರೆಗೆ 800ವರ್ಷ, ಪಂಚಾಚಾರ್ಯ ಪರಂಪರೆಗೆ 400ವರ್ಷ, ಕಾಶೀಪೀಠಕ್ಕೆ 200ವರ್ಷಗಳ ಇತಿಹಾಸ ಇದೆ ಎಂದಿದ್ದಾರೆ ಶ್ರೀ ಕಲಬುರ್ಗಿಯವರು. ಪಂಚಾಚಾರ್ಯ ಪರಂಪರೆಗೆ ನಾಲ್ಕು ನೂರು ವರ್ಷದ ಇತಿಹಾಸವಿಲ್ಲ. ಏಕೆಂದರೆ ಚತುರಾಚಾರ್ಯ ಪುರಾಣ ಬರೆದ ಕವಿ ಇದ್ದುದು 19ನೆಯ ಶತಮಾನದಲ್ಲಿ. ಅವರೆಗೆ ಸಹ ಐದು ಜನರ ತಂಡ ರೂಪುಗೊಂಡಿರಲಿಲ್ಲ. ಬಾಳೇಹೊನ್ನೂರಿನ ಪೀಠವನ್ನು ಸಂಸ್ಥಾಪಿಸಿದವಳು ಅಕ್ಕನಾಗಲಾಂಬಿಕೆ. ಚನ್ನಬಸವಣ್ಣನ ವಯಸ್ಸಿನವನೇ ಆಗಿದ್ದ ರುದ್ರಮುನಿ ದೇವರು ಚನ್ನಬಸವಣ್ಣನವರ ಲಿಂಗೈಕ್ಯದ ನಂತರವೂ ಇದ್ದು ಅಕ್ಕನಾಗಮ್ಮನೊಡನೆ ಸಂಚಾರ ಮಾಡಿದ್ದಾರೆ. ಬಾಳೇಹೊನ್ನೂರಿನಲ್ಲಿ ಮಠಕಟ್ಟಿ ರುದ್ರಮುನಿದೇವರನ್ನು ಅಲ್ಲೇ ಬಿಟ್ಟು ಸನಿಹದ ತರೀಕೆರೆಯಲ್ಲಿ ನಾಗಲಾಂಬಿಕೆ ಲಿಂಗೈಕ್ಯಳಾಗಿದ್ದಾಳೆ. ಕಾಶಿಯ ಜಂಗಮವಾಡಿ ಮಠ ಆದುದು ಕೆಳದಿಯ ದೊರೆ ದೊಡ್ಡವೆಂಕಟಪ್ಪ ನಾಯಕನಿಂದ. ಡಾ|| ಕಲಬುರ್ಗಿಯವರು ಪಾಲ್ಕುರಿಕೆ ಸೋಮನಾಥನ ಬಗ್ಗೆ ತಪ್ಪು ಕಲ್ಪನೆ ಹೊಂದಿದ್ದಾರೆ.

ಆತ ಆರಾಧ್ಯನಲ್ಲ ಶೈವಬ್ರಾಹ್ಮಣ ಮಾತ್ರ. ಮತ್ತು ಆತ ಬಗೆಬಗೆಯಾಗಿ ಕೊಂಡಾಡಿರುವುದು ಬಸವಣ್ಣನವರನ್ನೇ ವಿನಾ ಪಂಚಾಚಾರ್ಯರನ್ನಲ್ಲ. ಸ್ಮಾರ್ತ(ಶೈವ) ಬ್ರಾಹ್ಮಣನಾದ ಆತನ ವಂಶಸ್ಥರು ಪಾಲ್ಕುರಿಕೆಯಲ್ಲಿದ್ದ ಸೋಮೇಶ್ವರನ ಅರ್ಚಕರು. ಮುಂದೆ ಈತ ವೀರಶೈವ ಮತವನ್ನು ಸ್ವೀಕರಿಸಿದ. ಬ್ರಾಹ್ಮಣರು ವೀರಶೈವ ಮತ ಸ್ವೀಕರಿಸಿದಾಗ ಅವರು ಗೃಹಸ್ಥರಿದ್ದರೆ ಅವರನ್ನು ಮಾಹೇಶ್ವರರು, ವೀರ ಮಾಹೇಶ್ವರರೆಂದು ಸನ್ಯಾಸಿಗಳಾದರೆ ಜಂಗಮರೆಂದು ಕರೆಯಲಾಗುತ್ತಿತ್ತು. ಪಾಲ್ಕುರಿಕೆ

ಸೋಮನಾಥನು ಭೃಂಗಿ(ರಿಟಿ)ಗೋತ್ರದ ಶಿವಭಕ್ತನೆಂದು ಹೇಳಿಕೊಳ್ಳುತ್ತಾನೆ. ಅಂದರೆ ವೈದಿಕರು ಋಷಿ ಗೋತ್ರಗಳನ್ನು ಹೇಳುವಂತೆ ವೀರಶೈವರೂ 5 ಗೋತ್ರಗಳನ್ನು ಹೇಳುತ್ತಿದ್ದರು. ಯಾವ ಗೋತ್ರದ ಗುರುವಿನಿಂದ ದೀಕ್ಷೆ ಪಡೆಯುತ್ತಿದ್ದರೋ ಆ ಗೋತ್ರದವರು ತಾವೆನ್ನುತ್ತಿದ್ದರು.

(ವೀರಶೈವರು, ಪಂಚಾಚಾರ್ಯ ವರ್ಗದವರು ಈ ಕುಲಗೋತ್ರಗಳ ಕಸವನ್ನು ತಂದು ಗೋತ್ರ ನಂಬದ ಲಿಂಗಾಯತ ಸಮಾಜದಲ್ಲೂ ಸೇರಿಸಿದ್ದಾರೆ. ಪುಣ್ಯಕ್ಕೆ ಅದು ವ್ಯಾಪಕಗೊಂಡಿಲ್ಲ) ವೈದಿಕ ಧರ್ಮದ ಪ್ರಕಾರ ಗೋತ್ರವು ತಂದೆಯಿಂದ ಬಂದರೆ, ವೀರಶೈವ ಮತದ ಪ್ರಕಾರ ಗುರುವಿನಿಂದ ಬರುತ್ತಿತ್ತು. ತಾನು ಬರೆದ ಅನುಭವ ಸಾರ ಕೃತಿಯಲ್ಲಿ ಪಾಲ್ಕುರಿಕೆ ಸೋಮನಾಥನು ಸ್ವಂತ ಪರಿಚಯ ಬರೆದುಕೊಳ್ಳುವಾಗ ಹೀಗೆ ಹೇಳಿದ್ದಾನೆ :

ಕಂ॥ ಭೃಂಗಿರಿಟಿ ಗೋತ್ರುಡನು ಗುರು
ಲಿಂಗ ತನೂಜುಂಡ ಶಿವಕುಲೀನುಂಡ ದುರ್ವ್ಯಾ
ಸಂಗ ವಿವರ್ಜಿತ ಚರಿತುಂಡು ಜಂಗಮಲಿಂಗ ಪ್ರಸಾದ ಸತ್ಪ್ರಾಣುಂಡನ್॥

ಜಂಗಮಲಿಂಗ ಎಂದರೆ ಚರಲಿಂಗವನ್ನು ತಮ್ಮೊಡನೆ ಒಯ್ದು, ಜಿಡಾರ ಜಿಟ್ಟಲ್ಲೇ ಪೂಜಿಸಿ, ಊಟ ಮಾಡುವ ನೇಮ ಪಾಲಿಸುತ್ತಿದ್ದ ಪಾಲ್ಕುರಿಕೆ ಸೋಮನಾಥನು ಬ್ರಾಹಣ ವೀರಶೈವ.

ಈತ ಮೊದಲು ಪ್ರಭಾವಿತನಾದುದು ಮಲ್ಲಿಕಾರ್ಜುನ ಪಂಡಿತಾರಾಧ್ಯರಿಂದ. ಅವರು ಕರ್ನಾಟಕದ ಬಸವಣ್ಣನವರ ಬಗ್ಗೆ ತುಂಬು ಅಭಿಮಾನ ವ್ಯಕ್ತಪಡಿಸಿದ್ದರಿಂದ ಬಸವಣ್ಣನವರ ಬಗ್ಗೆ ತೀವ್ರ ಆಸಕ್ತಿವಹಿಸಿ ಶ್ರೀಶೈಲದಲ್ಲಿ ಭೇಟಿಯಾದ ಲಿಂಗಾಯತ ಜಂಗಮರಿಂದ ಮಾಹಿತಿ ಸಂಗ್ರಹಿಸಿ ಉದ್ದಾಮ ಕೃತಿಯಾದ ಬಸವ ಪುರಾಣಮುವನ್ನು ತೆಲುಗಿನಲ್ಲಿ ಬರೆದನು. ಆದ್ದರಿಂದ ಪಂಚಾಚಾರ್ಯರೆಂಬ 5 ಜನರ ಸೃಷ್ಟಿಗೆ ಪಾಲ್ಕುರಿಕೆ ಸೋಮನಾಥನು ಕಾರಣವಲ್ಲ. ಆತ ಕರ್ನಾಟಕಕ್ಕೆ ವೃದ್ಧಾಪ್ಯದಲ್ಲಿ ಬಂದು ನೆಲೆಸಿದ್ದು ಮಾಗಡಿ ಬಳಿಯ ಕಲ್ಲೆ ಎಂಬ ಊರಲ್ಲಿ. ಶಿವಗಂಗೆ ಸಮೀಪದ ಕಲ್ಲೆ ಎಂದು ಸ್ಥಳ ನಿರ್ದೇಶನ ಮಾಡಲಾಗಿದೆ ಅಷ್ಟೆ. ಪೌರಾಣಿಕ ಪಂಚಾಚಾರ್ಯರ ಕಾಲ್ಪನಿಕ ಸೃಷ್ಟಿ ಪಾಲ್ಕುರಿಕೆ ಸೋಮನಾಥನ ಕಾಲದಷ್ಟು ಪುರಾತನವಲ್ಲ. ಬಸವಣ್ಣನವರ ಸಮಕಾಲೀನರು ರೇವಣಸಿದ್ಧರು, ಮಲ್ಲಿಕಾರ್ಜುನ ಪಂಡಿತಾರಾಧ್ಯ, ಮರುಳಸಿದ್ಧ ಮತ್ತು ಏಕೋರಾಮ.

ಇವರನ್ನು ಕುರಿತು ಪರ್ವತೇಶ ಎಂಬ ಕವಿಯು ಚತುರಾಚಾರ್ಯ ಪುರಾಣ ಎಂದು ಬರೆದಿದ್ದಾನೆ. ಕಾಶಿಯ ವಿಶ್ವಾರಾಧ್ಯರು ಪೂರಾ ಕಾಲ್ಪನಿಕ. ಕೆಳದಿಯ ಅರಸರಲ್ಲೊಬ್ಬನಾದ ದೊಡ್ಡ ವೆಂಕಟಪ್ಪ ನಾಯಕನು ಕಾಶಿಯ ಸಂದರ್ಶನಕ್ಕೆ ಹೋದಾಗ ತನ್ನ ಧರ್ಮಾಚರಣೆಗೆ ಅನುಕೂಲವಾಗಲೆಂದು, ಜಂಗಮವಾಡಿ ಮಠವನ್ನು ಕಟ್ಟಿ, ಕಾಶಿಗೆ ಹೋಗುವ ಲಿಂಗಾಯತರ ಪೂಜಾಚರಣೆಗೆ ಅನುಕೂಲತೆ ಕಲ್ಪಿಸಿದನು. ಹಿಮವತ್ಕೇದಾರದಲ್ಲಿ ಒಂದು ಪೀಠವಿತ್ತು ಎಂಬುದಂತೂ ತೀರಾ ಇತ್ತೀಚಿನ ಕಲ್ಪನೆ. ಎಲ್ಲೆಲ್ಲೋ ಪೀಠಗಳಿವೆ ಎಂಬ ಕೊಚ್ಚಿಕೊಳ್ಳುವ ಇವರು ಅಲ್ಲೆಲ್ಲ ತಮ್ಮ ಮತವನ್ನು ಪ್ರಚಾರ ಮಾಡಿ ಅನುಯಾಯಿಗಳನ್ನು ಪಡೆಯಲು ಅಸಮರ್ಥರಾಗಿ ಬಸವ ಸಂತಾನವಾದ ಲಿಂಗಾಯತರನ್ನೇ ವೀರಶೈವರೆಂದು ಕರೆದು ಅವರಿಂದಲೇ ವೈಭವೋಪೇತ ಸೇವೆ ಪಡೆಯ ಬಯಸುವುದು ಚೋದ್ಯದ ಸಂಗತಿ.

ಬಾಳೆಹಳ್ಳಿ ಮಠ ಕಟ್ಟಿದವರು ಶರಣರು

ಲಿಂಗಾಯತ ಸಮಾಜದ ಆಂತರಿಕ ಕಚ್ಚಾಟ ಏನೂ ಗೊತ್ತಿರದ ಶ್ರೀ ತ.ಸು.ಶಾಮರಾಯರು ಅತ್ಯಂತ ಪ್ರಾಮಾಣಿಕವಾಗಿ, ಪರಿಶ್ರಮದ ಸಂಶೋಧನೆ ಮಾಡಿ ನೂರಾರು ಕಾವ್ಯ, ಪುರಾಣ (ಒಟ್ಟು 259) ಓದಿ ಮಾಹಿತಿ ಸಂಗ್ರಹಿಸಿದ್ದಾರೆ. ಇವರ ಶಿವಶರಣರ ಕಥಾರತ್ನ ಕೋಶ ಪುಸ್ತಕದಲ್ಲಿ ಬರುವ ಅಕ್ಕನಾಗಲಾಂಬಿಕೆ ಕುರಿತ ವಿವರ (ಪುಟ 1) ಮತ್ತು ರುದ್ರಮುನಿ ದೇವರನ್ನು ಕುರಿತ ವಿವರ (ಪುಟ 368)ಗಳಿವೆ. ಬಾಳೆ ಹಳ್ಳಿ ಮಠವನ್ನು ಕಟ್ಟಿದವರು ಶರಣರು ಎಂಬುದನ್ನು ಈ ಪರಿಚಯದಲ್ಲಿ ಹೇಳಲಾಗಿದೆ.

ಗುರು-ವಿರಕ್ತರು ಒಂದಾಗುವಿಕೆ

ಅನೇಕರು ಈ ಬಗ್ಗೆ ಬಡಬಡಿಸುತ್ತಾರೆ; ಶ್ರೀ ಡಾ॥ ಕಲಬುರ್ಗಿಯವರ ಆಶ್ರಯವೂ ಅದೇ ಆಗಿದ್ದರೂ ಅವರು ಕೊಟ್ಟ ಒಂದು ಸೂಚನೆ ಚೆನ್ನಾಗಿದೆ. ''ಗುರುವಿರಕ್ತರು ಒಂದಾಗಲಿ. ಆದರೆ ಸತ್ಯ ತಿಳಿದುಕೊಂಡು ಒಂದಾಗಲಿ. ಉಪ್ಪು-ಸಕ್ಕರೆ ಸೇರಿದರೆ ಯಾವುದಕ್ಕೂ ಉಪಯೋಗವಿಲ್ಲ'' ಎಂಬ ಮಾತು ಮನನಾರ್ಹ.

ಮುಂಡರಗಿ ಶ್ರೀಗಳಂತಹ ತತ್ತ್ವನಿಷ್ಠೆ ಇಲ್ಲದ ವಿರಕ್ತರು ಈಗಾಗಲೇ ಆಂತರಿಕವಾಗಿ ಆಚಾರ್ಯವಾದಿಗಳಾಗಿದ್ದಾರೆ. ಆದರೆ ಇನ್ನಿತರ ಅನೇಕ ವಿರಕ್ತರು ಮೌನವಾಗಿದ್ದಾರೆ. ದಿನಕ್ಕೊಂದು ಹೇಳಿಕೆಯನ್ನು ಪತ್ರಿಕೆಗಳಲ್ಲಿ ಕೊಡುತ್ತ ಪಂಚಾಚಾರ್ಯರು ಗದ್ದಲ ಎಬ್ಬಿಸುತ್ತಿದ್ದರೂ ವಿರಕ್ತರು ಗಂಭೀರ ಮೌನ ವಹಿಸಿರುವುದನ್ನು ನೋಡಿ ಆಶ್ಚರ್ಯ-ಆಘಾತ ನಮಗಾಗುತ್ತಿದೆ. ಈ ಮೌನವು ಸಮ್ಮತಿಯೋ ಅಥವಾ ನಿಸ್ಸಹಾಯಕತೆಯೋ ? ಯಾವುದೂ ಸಾಹಿತ್ಯ, ಶಾಸನ, ಐತಿಹಾಸಿಕ ಕುರುಹುಗಳ ಬಲವಿಲ್ಲದೆ ಅವರು ಸದಾ ಗದ್ದಲ ಮಾಡುತ್ತಾರೆ ಎಂದಾಗ ಎಲ್ಲ ಬಲವಿದ್ದೂ ವಿರಕ್ತರು ಮೌನವಾಗಿ ಇರುವುದೇಕೆ ? ಏನೇ ಇರಲಿ ಸದ್ಯ ಗದುಗಿನ ಶ್ರೀಗಳು, ಶ್ರೀ ಎಂ.ಎಂ.ಕಲಬುರ್ಗಿಯವರು - ಹೇಳಿದ್ದನ್ನು ಸಮರ್ಥಿಸಿಕೊಳ್ಳುವ ಬೌದ್ಧಿಕ ಸಾಮರ್ಥ್ಯ ಅವರಿಗೆ ಇರುವುದರಿಂದ, ಅವರನ್ನು ಸತ್ಯ ನುಡಿಯಲು ಮುಂದೆಬಿಟ್ಟದ್ದು ಅಭಿನಂದನಾರ್ಹ. ಅಂತೂ ಶ್ರೀಗಳ ಮನಸಾಕ್ಷಿ ನಿದ್ರಾವಸ್ಥೆಯಿಂದ ಮೇಲೆದ್ದು ವೀರಶೈವ ಅಧ್ಯಯನ ಸಂಸ್ಥೆಯನ್ನು ಲಿಂಗಾಯತ ಅಧ್ಯಯನ ಸಂಸ್ಥೆಯನ್ನಾಗಿ ನಾಮಾಂತರ ಮಾಡಿಸಿರುವುದು ಅತೀವ ಸಂತೋಷದ ವಿಷಯ. ಅದೇ ಮನಸಾಕ್ಷಿ ಇನ್ನಷ್ಟು ಮೈಕೊಡವಿಕೊಂಡು ಮೇಲೆದ್ದು ಮಠದ ತಲೆಬಾಗಿಲ ಮೇಲಿರುವ ನಾಲ್ಕುಕಾಲು, ಎರಡು ಕೋಡು, ಒಂದು ಬಾಲ ಇರುವ ನಂದಿ ಬಸವನನ್ನು ತೆಗೆದು ಕ್ರಾಂತಿಪುರುಷ ಮಾನವ ರೂಪದ ವಿಶ್ವವಿಭೂತಿ ಬಸವಣ್ಣನ ಮೂರ್ತಿಯನ್ನು ಇಡಿಸಿದರೆ ಶರಣರ ಹೃದಯಗಳು ಗರಿಗೆದರಿದ ನವಿಲಾಗಿ ನರ್ತಿಸುತ್ತವೆ. ಆದರೆ ಆ ಪರಿವರ್ತನೆಗೆ ಪುನಃ 30 ವರ್ಷ (ವೀರಶೈವ ಅಧ್ಯಯನ ಸಂಸ್ಥೆ ನಾಮಾಂತರ ಹೊಂದಲು 30 ವರ್ಷ ಹಿಡಿದಿದೆ) ತೆಗೆದುಕೊಳ್ಳಬಾರದು; ಏಕೆಂದರೆ ಕಾಲದ ಓಟ ತೀವ್ರ ಗತಿಯದು; ಮನುಷ್ಯನ ಆಯುಷ್ಯ ಸ್ವಲ್ಪ! ಧೈರ್ಯದ ಹೆಜ್ಜೆಯನ್ನು ಬೇಗನೆ ಇಡಲಿ ಎಂದು ಹಾರೈಸುತ್ತೇವೆ. ★★★

ಶ್ರಾವಣ ಮಾಸದ ನಿಮಿತ್ತವಾಗಿ ಬೆಂಗಳೂರಿನ ರಾಜಾಜಿನಗರದ
2ನೇ ವಿಭಾಗದ 20ನೇ ಮುಖ್ಯ ರಸ್ತೆಯಲ್ಲಿರುವ ಬಸವ ಮಂಟಪದಲ್ಲಿ

ವಿಶ್ವಧರ್ಮ ಪ್ರವಚನ ಕಾರ್ಯಕ್ರಮ

ಸೋಮ (ಶಿವ)ವಾರ ದಿ. 19 -7-2004ದಿಂದ



ಕರ್ನಾಟಕ ರಾಜ್ಯಾದ್ಯಂತ ಅಭೂತ ಪೂರ್ವ ಪ್ರವಚನಗಳನ್ನು ನಡೆಸಿ, ಅಪೂರ್ವ ಜಾಗೃತಿಯನ್ನುಂಟು ಮಾಡಿ, ವಿದೇಶಗಳಲ್ಲಿಯೂ ಸಂಚರಿಸಿ ಭಾರತೀಯ ಸಂಸ್ಕೃತಿಯ ಹಿರಿಮೆ-ಗರಿಮೆಗಳನ್ನು, ಬಸವ ತತ್ತ್ವದ ವೈಶಿಷ್ಟ್ಯವನ್ನು ಸಾರಿ ಬಂದಿರುವ

ಪ್ರಪ್ರಥಮ ಮಹಿಳಾ ಜಗದ್ಗುರು ಅಪೂರ್ವ ವಾಗ್ಮಿ,
ಕೂಡಲ ಸಂಗಮದ ಬಸವ ಧರ್ಮದ
ಮಹಾಜಗದ್ಗುರು ಪೀಠದ ಅಧ್ಯಕ್ಷೆಯಾಗಿರುವ

ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ

ಅವರು ಶ್ರಾವಣ ಮಾಸದ ನಿಮಿತ್ತ ಸೋಮ (ಶಿವ)ವಾರ ದಿ. 19-7-2004ರಿಂದ ಪ್ರತಿನಿತ್ಯ ಸಂಜೆ 6-30 ರಿಂದ 8-30ರವರೆಗೆ ಅಖಂಡವಾಗಿ ಅವ್ಯಾಹತವಾಗಿ ವಿಶ್ವಧರ್ಮ ಪ್ರವಚನವನ್ನು 8 ವಾರಗಳವರೆಗೆ ಮಾಡಲಿದ್ದಾರೆ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ತಮ್ಮ ಅಮೋಘ ವಾಣಿಯಿಂದ ಭಾವಜೀವಿಗಳು, ಬುದ್ಧಿಜೀವಿಗಳು ಉಭಯತರನ್ನು ತಣಿಸಬಲ್ಲ ಪ್ರವಚನಕಾರರು, ತಮ್ಮ ಪ್ರವಚನದಲ್ಲಿ ಅವರು ಧರ್ಮವೆಂದರೇನು? ಧರ್ಮದ ಆವಶ್ಯಕತೆ, ದೇವರ ಅಸ್ತಿತ್ವ, ದೇವರ ಸ್ವರೂಪ ಮುಂತಾದ ವಿಷಯಗಳನ್ನು ಎಲ್ಲರ ಮನತಣಿಯುವಂತೆ ಬೋಧಿಸುವುದೇ ಅಲ್ಲದೆ ಮುಮುಕ್ಷುಗಳು ಪ್ರಶ್ನೆಗಳನ್ನು ಕೇಳಿ ಸಂದೇಹಗಳನ್ನು ಪರಿಹರಿಸಿಕೊಳ್ಳಲು ಅವಕಾಶ ನೀಡುವರು. ಎಲ್ಲ ಜಾತಿ ಮತ ಪಂಥ ಧರ್ಮಗಳವರೂ ಈ ಪ್ರವಚನಾಮೃತವನ್ನು ಪಾನ ಮಾಡಿ ಪುನೀತರಾಗುವಿರಾಗಿ ಹಾರೈಸುತ್ತೇವೆ.

★ ನಿಜ ಶ್ರಾವಣದ ಪಂಚಮಿಯಂದು 809ನೆಯ ಬಸವ ಲಿಂಗೈಕ್ಯ ಸಂಸ್ಮರಣೆಯ ವಿಶೇಷ ಕಾರ್ಯಕ್ರಮವನ್ನು ದಿ. 20-8-2004 ರಂದು ಬೆಳಿಗ್ಗೆ 10-30ಕ್ಕೆ ಬೆಂಗಳೂರು ನಗರದ ಸರ್. ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಏರ್ಪಡಿಸಲಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕೋರುತ್ತೇವೆ.

ಲಿಂಗಾಯತವೋ ? ವೀರಶೈವವೋ ?

(ಸಂಯುಕ್ತ ಕರ್ನಾಟಕ ದಿ. 17 ಸಂಚಿಕೆಯಿಂದ) ವೀರಭದ್ರಪ್ಪ ಬ. ಹಾಲಬಾವಿ

ಭಾರತ ಸರಕಾರವು 1944ರಲ್ಲಿ ಹಿಂದೂ ಕಾಯ್ದೆಯ ಕ್ರೋಢೀಕರಣದ ಉದ್ದೇಶದಿಂದ ಶಾಸನ ಸಮಿತಿಯೊಂದನ್ನು ರಚಿಸಿ, ಲಿಂಗಾಯತ ಧರ್ಮದ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಕೋರಿದ್ದಿತು. ಆಗ ಸರಕಾರವು ಉಪಯೋಗಿಸಿದ್ದ "ಲಿಂಗಾಯತ" ಶಬ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿ, ಇದಕ್ಕಿಂತ ವೀರಶೈವ ಶಬ್ದವೇ ಶಾಸ್ತ್ರೀಯವಾದುದ್ದು ಎಂದು ಸಿಕಂದರಾಬಾದದ ಪಂಡಿತ ಸಿ.ಎಂ.ವೀರಭದ್ರ ಶರ್ಮರು (ಇವರು ಆಮೇಲೆ ಕಾಶಿ ಜಗದ್ಗುರುಗಳಾದರು) ಶರಣ ಸಾಹಿತ್ಯ ಪತ್ರಿಕೆಯ ಎಪ್ರಿಲ್ ಸಂಚಿಕೆಯಲ್ಲಿ ಒಂದು ಲೇಖನ ಬರೆದಿದ್ದರು. ಇದಕ್ಕೆ ಪ್ರತಿಕ್ರಿಯೆಯಾಗಿ ಧಾರವಾಡದ "ಲಿಂಗಾಯತ ಸಾಹಿತ್ಯ ಸಮಿತಿ ಪತ್ರಿಕೆ"ಯ ಜುಲೈ 1944ರ ಸಂಚಿಕೆಯಲ್ಲಿ ವೀರಭದ್ರಪ್ಪ ಹಾಲಭಾವಿ ಅವರು ಬರೆದ "ಲಿಂಗಾಯತವೋ? ವೀರಶೈವವೋ?" ಎಂಬ ಲೇಖನದ ಸಂಕ್ಷಿಪ್ತ ರೂಪವಿದು. 60 ವರ್ಷಗಳಷ್ಟು ಹಿಂದಿನ ಈ ಚರ್ಚೆ ಇಂದಿಗೂ ಪ್ರಸ್ತುತವಾಗಿರುವುದರಿಂದ ಅದನ್ನು ಇಲ್ಲಿ ಪ್ರಕಟಿಸಲಾಗಿದೆ. ಶ್ರೀ ವೀರಭದ್ರ ಶರ್ಮ ಅವರ ಪ್ರಕಾರ "ವೀರಶೈವ ಶಬ್ದ ಪುರಾತನವಾದುದ್ದು ಮತ್ತು ಪಂಚಾಚಾರ್ಯ ಗುರುಗಳೂ, ಸಂಸ್ಕೃತ ಶಾಸ್ತ್ರಗ್ರಂಥಗಳೂ ಬಳಸುತ್ತ ಬಂದಿರುವುದರಿಂದ ಇದು ಅತ್ಯಂತ ಶುದ್ಧ ಸಶಾಸ್ತ್ರೀಯವಾದುದು. ಲಿಂಗಾಯತವೆಂಬುದು ಮಹಾರಾಷ್ಟ್ರದಲ್ಲಿ ಲಿಂಗಕಟ್ಟಿಕೊಳ್ಳುವವರಿಗೆ ಗೇಲಿ ಮಾಡುವುದಕ್ಕಾಗಿ ಲಿಂಗಾಡಿಯೆಂದೂ, ಲಿಂಗಾಯತನೆಂದೂ ಬಳಸಲ್ಪಟ್ಟು, ಮುಂದೆ ಅದೇ ರೂಢಿಗೆ ಬಂದಿದೆ. ಆದುದರಿಂದ ಲಿಂಗಾಯತ ಶಬ್ದವನ್ನು ಬಿಟ್ಟು ವೀರಶೈವ ಪದವನ್ನು ಬಳಸಬೇಕು" ಎಂದು ಶ್ರೀ ಶರ್ಮಾ ಅವರು ಹೇಳುತ್ತಾರೆ. ಇದು ಸರಿಯಲ್ಲ. ಲಿಂಗಾಯತವೆಂಬ ಹೆಸರು ಈ ಸಮಾಜವು ವಾಸಿಸುವ ಹಿಂದುಸ್ತಾನದ ಭಾಗದಲ್ಲೆಲ್ಲ ವ್ಯಾಪಿಸಿದೆ. ಸರಕಾರದವರೂ ಗ್ಯಾಝೆಟಿಯರ್ ಮೊದಲಾದ ಗ್ರಂಥಗಳೂ ಇವರಿಗೆ ಲಿಂಗಾಯತರೆಂದೇ ಉದ್ದಕ್ಕೂ ಕರೆದಿವೆ. ಲಿಂಗಾಯತೇತರರು ಸಾಹಿತ್ಯದಲ್ಲಿಯೂ, ವೃತ್ತಪತ್ರಗಳಲ್ಲಿಯೂ, ವ್ಯವಹಾರದಲ್ಲಿಯೂ ಈ ಸಮಾಜದವರಿಗೆ ಲಿಂಗಾಯತರೆಂದೇ ಸಂಬೋಧಿಸುತ್ತಾರೆ. ಈ ಸಮಾಜದ ಬಹುಜನರು ತಮ್ಮನ್ನು ಇದೇ ಹೆಸರಿನಿಂದ ಕರೆದುಕೊಳುತ್ತಾರೆ. ಶ್ರೀ ಶರ್ಮಾ ಅವರು ಎತ್ತಿಹಿಡಿಯುವ ವೀರಶೈವ ಶಬ್ದವು ಸಿದ್ಧಾಂತ ಶಿಖಾಮಣಿಯ ಪ್ರಕಾರ ಕೇವಲ ಶಂಕರಾಚಾರ್ಯರ "ಅಹಂ ಬ್ರಹ್ಮಾಸ್ಮಿ" ಅರ್ಥಕ್ಕೆ ನಿಂತು ಬಿಡುವುದೇ ಹೊರತು, ಇದನ್ನು ಸಾಧಿಸುವ ಮತ್ತು ಜೀವನಕ್ಕೆ ಅನ್ವಯಿಸುವ ಅರ್ಥವನ್ನು ಪ್ರತಿಪಾದಿಸುವುದಿಲ್ಲ. ಇದೆಲ್ಲ ಸಂಸ್ಕೃತ ಗ್ರಂಥಗಳಿಗಿಂತ ಹೆಚ್ಚು ಸರಿಯಾಗಿಯೂ ವಿಶದವಾಗಿಯೂ ಶಿವಶರಣರ ವಚನಶಾಸ್ತ್ರ ಗ್ರಂಥಗಳಲ್ಲಿ ಕಂಡುಬರುವುದು. **'ಶಿವ ಜೀವೈಕ್ಯ'** ಈ ಶಬ್ದದ ಬದಲಾಗಿ **'ಲಿಂಗಾಂಗ ಸಾಮರಸ್ಯ'** ಎಂಬ ಪದವು ಶರಣರ ವಚನಶಾಸ್ತ್ರದಲ್ಲಿ ಉಪಯೋಗಿಸಲ್ಪಟ್ಟಿದೆ. ಲಿಂಗಾಯತನ ಅಂತಿಮಧ್ಯೇಯವಾದ ಲಿಂಗಾಂಗ ಸಾಮರಸ್ಯವನ್ನು ಹೊಂದುವ ವಿಧಾನವು ಇದರಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ. ಮನುಷ್ಯನ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿ ಇಷ್ಟ ಪ್ರಾಣ, ಭಾವಲಿಂಗಗಳನ್ನು ಅನುಕ್ರಮವಾಗಿ ಸ್ಥಾಪಿಸುವುದಲ್ಲದೆ, ಅವನ ಷಡಿಂದ್ರಿಯಗಳಲ್ಲಿ ಷಡ್ಲಿಂಗಗಳನ್ನು ಸ್ಥಾಪಿಸಿ ಆ ಇಂದ್ರಿಯಗಳಿಂದ ಸೇವಿಸತಕ್ಕ ಪದಾರ್ಥಗಳನ್ನು ಆ ಇಂದ್ರಿಯಗಳಲ್ಲಿ ಸ್ಥಾಪಿಸಿದ ಲಿಂಗಗಳ

ಉಪಾಂತರವಾಗಿಯೇ ಸೇವಿಸಿ, ಲಿಂಗಕ್ಕೆ ಅಂಗವನ್ನು ಅಂದರೆ, ತನ್ನನ್ನು ಸಂಪೂರ್ಣವಾಗಿ ಅರ್ಪಿಸಿ ಬಿಡುವುದೇ ಲಿಂಗಾಂಗ ಸಾಮರಸ್ಯವನ್ನು ಪಡೆಯುವುದಾಗಿದೆ. ಇದು ಕೇವಲ ಜ್ಞಾನದಿಂದ ಸಾಧಿಸಲಿಕ್ಕೆ ಬರುವುದಿಲ್ಲ. ಆದರೆ ಜ್ಞಾನ ಕ್ರಿಯೆಗಳ ಸಮುಚ್ಚಯದಿಂದ ಇದನ್ನು ಸಾಧಿಸುವುದು ಸುಲಭ. ಈ ಅಭಿಪ್ರಾಯವು ಲಿಂಗಾಯತ ಶಬ್ದದಿಂದ ಸ್ಪಷ್ಟವಾಗಿ ಹೊರಡುವಂತಿದೆ. ಇಂದ್ರಿಯಗಳ ಸಂಯಮದಿಂದ ಅವುಗಳ ಬಹಿರ್ಮುಖ ವ್ಯಾಪಾರಗಳನ್ನು ತಡೆದು, ಅವು ಅಂತರ್ಮುಖವಾಗುವಂತೆ ಮಾಡಬೇಕೆಂಬುದು ಆಯತ ಶಬ್ದದ ಅರ್ಥವು. ಹೀಗೆ ಅಂತರ್ಮುಖವಾದ ಇಂದ್ರಿಯಗಳಲ್ಲಿ ಲಿಂಗಗಳನ್ನು ಕಲ್ಪಿಸುವ ಭಾವನೆಯು ಸುಲಭವಾಗುತ್ತದೆ. ಲಿಂಗಾಯತ ಶಬ್ದದಿಂದ ಮಾತ್ರ ಈ ಅರ್ಥದ ಬೋಧವಾಗುತ್ತದೆ. ಇದೇ ಅಭಿಪ್ರಾಯವನ್ನು ಡಾ. ಹಳಕಟ್ಟಿಯವರ ''ಶಿವಾನುಭವ ಶಬ್ದಕೋಶ''ದಲ್ಲಿಯ ಷಡ್ವಿಧ ಶರಣನ ತರಗತಿಗಳ ವಿವರಣೆಯೂ ಬೇರೆ ಕೆಲವು ವಚನಗಳೂ ವ್ಯಕ್ತಪಡಿಸುತ್ತವೆ. ಲಿಂಗಾಯತ ಪದದಲ್ಲಿಯ ಆಯತವೆಂಬುದು ಬಾಗಾಯತ, ಜಿರಾಯತಗಳಂತೆ ಬಳಕೆಯಾಗುತ್ತ ಬಂದ ಅಸಮಂಜಸ ಪದವೆಂದು ಶ್ರೀ ಶರ್ಮಾ ಅವರ ಅಭಿಪ್ರಾಯ. ಇದು ಒಪ್ಪುವ ಮಾತಲ್ಲ. ಬಾಹ್ಯ ಸೃಷ್ಟಿಯನ್ನು ಅವಲಂಬಿಸಿದವರು ಲೋಕಾಯತರು, ಇದಕ್ಕೆ ವಿರುದ್ಧವೆಂಬಂತೆ ಆಂತರಿಕ ಸೃಷ್ಟಿಯನ್ನು ಅವಲಂಬಿಸಿದವರು ಲಿಂಗಾಯತರು. ಲಿಂಗಾಯತರಿಗೆ ಲಿಂಗದೀಕ್ಷೆಯು ಮುಖ್ಯವಾಗಿರುವುದಷ್ಟೇ. ವಚನಕಾರರ ಅಭಿಪ್ರಾಯದ ಪ್ರಕಾರ ಈ ದೀಕ್ಷೆಯು ಇಪ್ಪತ್ತೊಂದು ವಿಧವಾಗಿದ್ದು, ಇವುಗಳಲ್ಲಿ ಏಳು ಶರೀರಕ್ಕೆ ಉಪದೇಶ ಮಾಡುವಂಥವಿರುವವು. ಈ ಏಳರಲ್ಲಿ ಒಂದು ಲಿಂಗಾಯತ ದೀಕ್ಷೆ ಇರುವುದು. ವಚನ ಸಾಹಿತ್ಯದಲ್ಲಿ ಆಯತ, ಸ್ವಾಯತ, ಸನ್ನಿಹಿತ ಎಂಬ ಪರಿಭಾಷೆಗಳು ಪದೇ ಪದೇ ಬಳಕೆಯಾಗಿವೆ. ಹೀಗಾಗಿ ವೀರಭದ್ರಶರ್ಮಾ ಅವರು ಹೇಳುವಂತೆ ಕೆಲವು ಲಿಂಗಾಯತರು ಅಜ್ಞಾನದಿಂದ ಮತ್ತು ಸರಿಯಾದ ತಿಳುವಳಿಕೆಯಿಲ್ಲದಿರುವುದರಿಂದ ತಮ್ಮನ್ನು ಲಿಂಗಾಯತರೆಂದು ಕರೆದುಕೊಳ್ಳುತ್ತಿಲ್ಲ. ಇವರು ಸಂಪೂರ್ಣ ತಿಳುವಳಿಕೆಯಿಂದಲೇ ಹೀಗೆ ಕರೆದುಕೊಳ್ಳುತ್ತಾರೆ. ಈ ಸಮಾಜದಲ್ಲಿಯ ಹಳೆಯ ಸಂಸ್ಥೆಗಳಾದ ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ (1883), ಬೆಳಗಾವಿಯ ಕರ್ನಾಟಕ ಲಿಂಗಾಯತ ವಿದ್ಯಾಸಂಸ್ಥೆ (1916) ಮೊದಲಾದವು ತಮ್ಮ ಹೆಸರಿನಲ್ಲಿ ಲಿಂಗಾಯತ ಶಬ್ದವನ್ನು ಉಪಯೋಗಿಸಿರುವದೂ ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಲಿಂಗ ಶಬ್ದವು ಲಿಂಗಾಯತೇತರರಿಗೂ ಸಾಮಾನ್ಯ. ಆದರೆ ಅದನ್ನು ಮೈಮೇಲೆ ಧರಿಸುವುದು ಲಿಂಗಾಯತರ ವೈಶಿಷ್ಟ್ಯವು. ಇದಲ್ಲದೆ ಲಿಂಗಿ ಅಲಿಂಗಿ, ಲಿಂಗಾಂಗಿ ಎಂಬ ಶಬ್ದಗಳು ಸಂಸ್ಕೃತ ಗ್ರಂಥಗಳಲ್ಲಿ ದೊರೆಯುತ್ತಿದ್ದು ಇವುಗಳಿಗೆ ವೀರಭದ್ರ ಶರ್ಮರ ಆಕ್ಷೇಪಣೆಯಿದ್ದಂತೆ ತೋರುವುದಿಲ್ಲ. ಅಂದ ಮೇಲೆ ಲಿಂಗಾಯತ ಶಬ್ದಕ್ಕೇನೇ ಇವರ ವಿರೋಧವು ಏಕೆ ಇರಬೇಕೆಂಬುದು ತಿಳಿಯದ ಮಾತು. ಲಿಂಗಾಯತ ಶಬ್ದವು ಮೇಲೆ ಹೇಳಿದಂತೆ ಪೂರ್ಣ ಅರ್ಥವುಳ್ಳದ್ದೂ ಶಾಸ್ತ್ರೀಯವೂ, ಸಂಸ್ಕೃತ ಭಾಷೆಯಿಂದ ಹುಟ್ಟಿದುದೂ ಇರುವುದರಿಂದ ಇದನ್ನು ಇವರು ಆಕ್ಷೇಪಿಸುವುದು ಉಚಿತವಲ್ಲ. ಹೀಗಿದ್ದರೂ ಇವರು ಲಿಂಗಾಯತ ಶಬ್ದಕ್ಕೆ ಈ ರೀತಿ ಯಾಕೆ ತಮ್ಮ ವಿರೋಧವನ್ನು ವ್ಯಕ್ತ ಮಾಡುತ್ತಾರೋ ತಿಳಿಯದು. ಇದು ಅವರ ಸಂಸ್ಕೃತ ಭಾಷೆಯ ಮೇಲಿನ ಮೋಹದಿಂದಾಗಲೀ ಅಥವಾ ಲಿಂಗಾಯತ ಧರ್ಮದಲ್ಲಿಯೇ ಕೆಲವೊಂದು ವರ್ಗಕ್ಕೆ ಶ್ರೇಷ್ಠತೆಯನ್ನೂ ಇತರ ವರ್ಗಗಳಿಗೆ ಹೀನತೆಯನ್ನು ಕಲ್ಪಿಸಿ ಇವುಗಳ ಮೇಲೆ ತಮ್ಮ ಅಧಿಕಾರವನ್ನು ನೆಲೆಗೊಳಿಸುವ ಉದ್ದೇಶದಿಂದಾಗಲಿ ಇರಬಹುದು.

ಪಂಚಪೀಠಾಧೀಶರು ಬಸವಣ್ಣನವರಿಗೆ ಏಕೆ ತಗುಲಿಕೊಂಡಿದ್ದಾರೆ ?

ಪೂಜ್ಯ ಮಾತಾಜಿಯವರ ಚರಣಕಮಲಗಳಿಗೆ ಸಾಷ್ಟಾಂಗ ವಂದನೆಗಳು

ಚಿತ್ರದುರ್ಗದ ಶ್ರೀಗಳಾದ ಶಿವಮೂರ್ತಿ ಮುರುಘರಾಜೇಂದ್ರ ಶರಣರು ಕೂಡಲಸಂಗಮದಲ್ಲಿ ದಿ. 1 ಹಾಗೂ 2 ಮೇ 2004 ರಿಂದು ತಮ್ಮ ಪ್ರಪ್ರಥಮ ಬಸವ ಧರ್ಮ ಸಮ್ಮೇಳನವನ್ನು ಜರಗಿಸಿ ಕೆಲವೊಂದು ನಿರ್ಣಯಗಳನ್ನು ಅಂಗೀಕರಿಸಿದರು. ಅದರಲ್ಲಿ ಪ್ರಮುಖವಾದ ವಿಷಯ ಮಾಂಸಾಹಾರಿಗಳು ಬಸವ ಧರ್ಮ ಸ್ವೀಕರಿಸಿ ತಮ್ಮ ಮಾಂಸಾಹಾರ ಮುಂದುವರಿಸಿಕೊಂಡು ಹೋಗಬಹುದೆಂಬ ಹೇಳಿಕೆಗೆ ಕರ್ನಾಟಕದ ಗಣ್ಯ ವ್ಯಕ್ತಿಗಳು ತಮ್ಮ ಪ್ರತಿಕ್ರಿಯನ್ನು ಲೇಖನದ ಮೂಲಕ ಹಲವಾರು ಪತ್ರಿಕೆಗಳಲ್ಲಿ ವ್ಯಕ್ತಪಡಿಸಿದಾರೆ. ಇವುಗಳಲ್ಲಿ ಕೆಲವು ವಿಷಯಕ್ಕೆ ಸಂಬಂಧಪಟ್ಟವುಗಳಾಗಿವೆ. ಕೆಲವು ಚೂರು ಕೂಡಾ ಸಂಬಂಧಿಸಿದಲ್ಲವಾಗಿವೆ:

1. ಶ್ರೀ ಶಿವಮೂರ್ತಿ ಶರಣರಿಗೊಂದು ಉತ್ತರ
   ಶ್ರೀ ಕೋ. ಚನ್ನಬಸಪ್ಪ, ಸಂಯುಕ್ತ ಕರ್ನಾಟಕ 25-5-04
2. ವೀರಶೈವ ಧರ್ಮ ನಿಂತ ನೀರಲ್ಲ
   ಶ್ರೀ ಮಹಂತೇಶ ಹೊಸಮಠ, ಸಂಯುಕ್ತ ಕರ್ನಾಟಕ 25-5-04
3. ಬಸವ ಧರ್ಮ ಮತ್ತು ಮಾಂಸಾಹಾರ
   ಶ್ರೀ ಶಿವರುದ್ರಪ್ಪ ಕೋರಿಶೆಟ್ಟಿ, ಸಂಯುಕ್ತ ಕರ್ನಾಟಕ 27-5-04
4. ಬಸವಣ್ಣನವರ ವೈಭವೀಕರಣ ಸಲ್ಲದು
   ಶ್ರೀ ರಂಭಾಪುರಿ ಶ್ರೀಗಳು, ಸಂಯುಕ್ತ ಕರ್ನಾಟಕ 28-5-04
5. ಬಸವಣ್ಣನವರು ಧರ್ಮ ಸಂಸ್ಥಾಪಕರಲ್ಲ - ಸಮಾಜ ಸುಧಾರಕರು
   ಶ್ರೀ ರಂಭಾಪುರಿ ಶ್ರೀಗಳು ಸಂಯುಕ್ತ ಕರ್ನಾಟಕ 28-5-04
6. **ವೀರಶೈವ ಧರ್ಮ ಕುರಿತು ಧಾರವಾಡದಲ್ಲಿ ವಿಚಾರ ಸಂಕಿರಣ ದಿ. 10 ಮತ್ತು 11 ಜುಲೈ 2004 - ಒಂದು ವರದಿ**
   ಸಂಯುಕ್ತ ಕರ್ನಾಟಕ 28-5-04

ಮೇಲಿನ ಅಂಶಗಳನ್ನು ಗಮನಿಸಿದಾಗ, ಶ್ರೀ ಕೊ. ಚನ್ನಬಸಪ್ಪ ಶ್ರೀ ಮಹಾಂತೇಶ ಹೊಸಮಠ ಹಾಗೂ ಶ್ರೀ ಶಿವರುದ್ರಪ್ಪ ಕೋರಿಶೆಟ್ಟಿಯವರ ಲೇಖನಗಳು ವಿಷಯಕ್ಕೆ ಸಂಬಂಧಪಟ್ಟವುಗಳಾಗಿವೆ. ಆದರೆ ಶ್ರೀ ರಂಭಾಪುರಿ ಶ್ರೀಗಳ ಹೇಳಿಕೆಯಾದ 1. ಬಸವಣ್ಣನವರ ವೈಭವೀಕರಣ ಸಲ್ಲದು 2. ಬಸವಣ್ಣನವರು ಧರ್ಮ ಸಂಸ್ಥಾಪಕರಲ್ಲ ಸಮಾಜ ಸುಧಾರಕರು, ಇವು ವಿಷಯಕ್ಕೆ ಸಂಬಂಧಪಟ್ಟವುಗಳಲ್ಲ. ಶ್ರೀಗಳು ಇಂಥ ಹೇಳಿಕೆಗಳನ್ನು ಮೇಲಿಂದ ಮೇಲೆ ಪತ್ರಿಕೆಗಳಲ್ಲಿ ಕೊಡುತ್ತಾಲೆ ಇರುತ್ತಾರೆ. ನಮ್ಮಂಥವರು ಓದಿ ಸುಮ್ಮನಿದ್ದುಬಿಡುತ್ತಾರೆ. ಪಂಚಪೀಠಾಧೀಶರು ಬಸವಣ್ಣನವರಿಗೆ ಸಂಬಂಧವಿಲ್ಲ ಅಂತಾ ಜನರಿಗೆ ಗೊತ್ತಿದೆ. ಕಾರಣ 1997ರಲ್ಲಿ ಪುಣೆಯಲ್ಲಿ 14 ಅಡಿ ಎತ್ತರದ ಬಸವಣ್ಣನವರ ಅಶ್ವಾರೂಢ ಪುತ್ಥಳಿಯನ್ನು ಅಂದಿನ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾದ್ದ ಶ್ರೀ ವಿಲಾಸರಾವ್ ದೇಶಮುಖರ ಘನ ಅಧ್ಯಕ್ಷತೆಯಲ್ಲಿ ಹಾಗೂ ಕೈ ಎಸ್. ಬಿ. ಚವ್ಹಾಣರ ಸಮುಖದಲ್ಲಿ

ಮಹಾರಾಣಾ ಪ್ರತಾಪ ಸಿಂಗ್ ಗಾರ್ಡನದಲ್ಲಿ ಅನಾವರಣಗೊಳಿಸಲಾಯಿತು. ಆದರೆ ಕಾರ್ಯಕ್ರಮಕ್ಕೆ ಯಾವುದೇ ಪಂಚಪೀಠಾಧೀಶರು ಉಪಸ್ಥಿತರಿರಲಿಲ್ಲ. ಇಲ್ಲಿಯ ಸಮಾಜ ಮುಖಂಡರು ಇವರುಗಳನ್ನು ಆಮಂತ್ರಿಸಿದ್ದರೂ ಬರಲಿಲ್ಲ. ಅನ್ಯ ಕಾರ್ಯಕ್ರಮಗಳಿಗೆ ಬರುವ ಪೀಠಾಧೀಶರು ಇಂಥ ಮಹತ್ವಪೂರ್ಣ ಕಾರ್ಯಕ್ರಮಕ್ಕೆ ಯಾಕೆ ಬಂದಿರಲಿಲ್ಲ ಎಂಬುದರ ವಿಚಾರಮಾಡುವ ಹಾಗೆ ನಮಗೆ ಆಯಿತು. ಬಸವಣ್ಣನವರ ಬಗ್ಗೆ ಸಲ್ಲದ ಹೇಳಿಕೆ ಕೊಡಲು ಬೇಕು. ಆದರೆ ಅವರ ಯಾವ ಕಾರ್ಯಕ್ರಮಗಳೂ ಬೇಕಿಲ್ಲ. ಪುಣೆಯಲ್ಲಿ ಬಸವಣ್ಣನವರ ಅಶ್ವಾರೂಢ ಪುತ್ಥಳಿಯನ್ನು ಲಿಂಗೈಕ್ಯ ಶಿವಗಂಗಾತಾಯಿಯವರ (ಬಾರ್ಕಕರ) ಅಪೇಕ್ಷೆಯ ಮೇರೆಗೆ ಅನಾವರಣಗೊಳಿಸಲಾಯಿತು.

ಬಸವಣ್ಣನವರನ್ನು ಜನರೇ ವೈಭವೀಕರಿಸುತ್ತಿರುವಾಗ ಯಾರು ಬೇಡ ಅಂದರೆ ಅದು ನಿಲ್ಲುವುದೇ? ಅದು ಸಾಧ್ಯವಿಲ್ಲ. ಈಗ ಆಳಂದಿ, ದೇಹುಗಾಂವ ಹಾಗೂ ಪುಣೆ ಭಕ್ತಿಸಾಗರದಲ್ಲಿ ಮುಳುಗಿದೆ. ಕಾರಣ ದಿನಾಂಕ 9-6-2004 ರಿಂದ ಸಂತ ಜ್ಞಾನೇಶ್ವರ ಹಾಗೂ ಸಂತ ತುಕಾರಾಮ ಮಹಾರಾಜರ ಪಲ್ಲಕ್ಕಿಗಳು ಪಂಢರಪುರದ ವಿಠ್ಠಲನ ಭೇಟಿಗಾಗಿ ಹೊರಟಿವೆ. 8 ಲಕ್ಷ ಜನ ಪುಣೆಯಲ್ಲಿ ಪಲ್ಲಕ್ಕಿಗಳ ಸ್ವಾಗತಕ್ಕೆ ನೆರೆದಿದ್ದರು. ಈ ಬಗ್ಗೆ ಕೆಲವು ಪೇಪರ್ ಕಟಿಂಗ್ಸ್ ಲಗತಿಸಿದ್ದೇನೆ. ಇಲ್ಲಿ ಜನರೇ ಈ ಮಹನಿಯರನ್ನು ವೈಭವೀಕರಿಸುತ್ತಿರುತ್ತಾರೆ. ನಮ್ಮ ಧರ್ಮಗುರು ಬಸವಣ್ಣನವರಿಗೆ ಇರುವ ವ್ಯಕ್ತಿತ್ವ ಈ ಇಬ್ಬರು ಮಹನೀಯರುಗಳಿಗೆ ಇರುವುದಿಲ್ಲ. ಮೇಲಾಗಿ ಈ ಎರಡು ಮಠಗಳಿಗೆ ಯಾವ ಸ್ವಾಮಿಗಳು ಇಲ್ಲ, ಇದಕ್ಕೆ ಜನರೆ ಒಡೆಯರು. ಕೇವಲ ಭಕ್ತಿ ಉಳಿದುಕೊಂಡಿದೆ. ಕರ್ನಾಟಕದಲ್ಲಿ ಸಾಕಷ್ಟು ಲಿಂಗಾಯತ ಮಠಗಳಿವೆ ಮತ್ತು ಅಷ್ಟು ಸ್ವಾಮಿಗಳು ಇದ್ದಾರೆ. ಆದರೆ ಸಮಾಜಕ್ಕೆ ಯಾವುದೇ ಲಾಭವಿಲ್ಲ. ಕೇವಲ ವಿರೋಧಭಾಸ ತುಂಬಿ ತುಳುಕುತ್ತಿದೆ. ಎಲ್ಲಿಯವರೆಗೆ ಮೇಟಿಗೂಟ ಗಟ್ಟಿ ಇರುವುದಿಲ್ಲವೋ ಅಲ್ಲಿಯವರೆಗೆ ಈ ವಿರೋಧಾಭಾಸ ನಡೆಯುವುದೆ !

ಬಸವಣ್ಣನವರೇ ಲಿಂಗಾಯತ ಧರ್ಮದ ಆದ್ಯರು

1989ನೆಯ ಇಸವಿಯಲ್ಲಿ ನಡೆಸಿದ ಬ್ಯಾಂಕ್ ಮತ್ತು ಪೋಸ್ಟ್ ಆಫೀಸ್ ಪರೀಕ್ಷೆಗಳಲ್ಲಿ ಇತಿಹಾಸ ವಿಭಾಗದಲ್ಲಿ ಕೆಲವು ಪ್ರಶ್ನೆಗಳಿವೆ. ಆರನೆಯದು The Lingayat movement owes its origin to :

a. Vidyaranya [ ] b. Purandaradasa [ ]
c. Appar [ ] d. Basava [ ]

ಪುಣೆಯಿಂದ ಹೊರಡುವ ಆಜ್ ಕಾ ಆನಂದ್ ಎಂಬ ಹಿಂದಿ ಪತ್ರಿಕೆಯ ಸಾಮಾನ್ಯ ಜ್ಞಾನವೆಂಬ ವಿಭಾಗದಲ್ಲಿ ಭಾರತದ ಚರಿತ್ರೆ ಎಂಬುದರ ಕೆಳಗೆ 'ಲಿಂಗಾಯತ ಧರ್ಮ ಸಂಸ್ಥಾಪಕ್ ಕೌನ್ ಥೆ? ಎಂದು ಪ್ರಶ್ನೆ ಕೇಳಿ ಅದಕ್ಕೆ ಉತ್ತರವಾಗಿ **ಬಸವ** ಎಂದು ಬರೆದಿದ್ದಾರೆ.

ಇಷ್ಟೆಲ್ಲಾ ಸ್ಪಷ್ಟತೆ ಕರ್ನಾಟಕ ಹೊರಗಿರುವ ಲಿಂಗಾಯತೇತರ ಜನರಲ್ಲಿ ಇರುವಾಗ ಕರ್ನಾಟಕದೊಳಗಣ ಪಂಚಪೀಠಾಧೀಶರಿಗೆ ಏಕೆ ಇದರ ಜ್ಞಾನವಿಲ್ಲ ಎಂದು ಆಶ್ಚರ್ಯವಾಗುತ್ತದೆ.

ದಿ. 30-6-2004

– ಬಸಗೌಡ ಪಾಟೀಲ
ನಿಗಡಿ, ಪೂನಾ

ಶ್ರಾವಣ ಮಾಸದಲ್ಲಿ ಬಸವ ಜ್ಯೋತಿ ಕಾರ್ಯಕ್ರಮ

ನಿಜ ಶ್ರಾವಣವು ದಿ. 16-8-2004 ರಂದು ಪ್ರಾರಂಭವಾಗುತ್ತದೆ. ವಿಶ್ವಗುರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣಮಾಸದ ಶುದ್ಧ ಪಂಚಮಿಯಂದು. ಆದ್ದರಿಂದ ಎಲ್ಲ ರಾಷ್ಟ್ರೀಯ ಬಸವ ದಳಗಳವರು ಮನೆಮನೆಯಲ್ಲಿ ಬಸವ ಜ್ಯೋತಿ ಕಾರ್ಯಕ್ರಮ ಏರ್ಪಡಿಸಬೇಕು. ಶ್ರಾವಣ ಪ್ರತಿಪದೆಯಿಂದ ಭಾದ್ರಪದ ಚೌತಿಯವರೆಗೆ ಮಾಡಿ, (ಗಣೇಶ) ಚೌತಿಯಂದು ಸಾಮೂಹಿಕ ಕಾರ್ಯಕ್ರಮ ಏರ್ಪಡಿಸಿ ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ ಮತ್ತು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ 74ನೆಯ ವರ್ಧಂತಿ ಉತ್ಸವವನ್ನು ಆಚರಿಸಬೇಕು. ಪ್ರತಿದಿನ ಒಬ್ಬ ಶರಣರ ಮನೆಯಲ್ಲಿ ಪೂಜ್ಯ ಬಸವಣ್ಣನವರ ಭಾವಚಿತ್ರ ಇಟ್ಟು ಅಲಂಕರಿಸಿ, ಪೂಜಿಸಿ, ನೆನಹು ಮಾಡಿ, ನಂತರ ವಚನ ಚಿಂತನೆ - ಉಪನ್ಯಾಸ / ಪ್ರವಚನ ಮಾಡಿಸಿ, ಮಂಗಲ ಮಾಡಿ ತಮ್ಮ ಶಕ್ತ್ಯಾನುಸಾರ ಪ್ರಸಾದ ವಿತರಣೆ ಮಾಡಬೇಕು. ಇದರಿಂದ ವರ್ಷಕ್ಕೊಮ್ಮೆಯಾದರೂ ತಮ್ಮ ತಮ್ಮ ಮನೆಗೆ ಶರಣ ಬಂಧುಗಳನ್ನು ಆಹ್ವಾನಿಸಿ, ಗಣ ಪ್ರಸಾದ ವಿತರಿಸಲು ಅವಕಾಶ ದೊರೆಯುತ್ತದೆ.

ರಾಷ್ಟ್ರೀಯ ಬಸವ ದಳದವರ ಅಗತ್ಯಕ್ಕನುಸಾರವಾಗಿ ಗುಂಪುಗಳನ್ನು ರಚಿಸಿಕೊಂಡು ಹೆಚ್ಚಿನ ಶರಣರ ಮನೆಗಳಲ್ಲಿ ಬಸವ ಜ್ಯೋತಿ ನಡೆಯುವಂತೆ ವ್ಯವಸ್ಥೆ ಮಾಡಿ (ಗಣೇಶ) ಚತುರ್ಥಿಯಂದು (18-9-2004) ಅಥವಾ ಮರುದಿನವೇ (ದಿ. 19-9-2004) ದೇವ (ಭಾನು)ವಾರ ಬಂದಿರುವುದರಿಂದ ಅಂದು ಬಸವ ಜ್ಯೋತಿ ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ಏರ್ಪಡಿಸಬಹುದು.

– ಬಸವ ಧರ್ಮ ಪೀಠದ ಪ್ರಕಟಣೆ

ಬಸವ ಲಿಂಗೈಕ್ಯ ಸಂಸ್ಮರಣಾ ಸಪ್ತಾಹ

ಮರ್ತ್ಯಲೋಕದ ಮಣಿಹ ಪೂರೈಸಿ ಉರಿಯುಂಡ ಕರ್ಪುರದಂತೆ ಬಸವಣ್ಣನವರು ದೇವನಲ್ಲಿ ಒಡವೆರೆದು ಒಂದಾಗಿ 809 ವರ್ಷಗಳು ಸಂದಿರುವ ಹಿನ್ನೆಲೆಯಲ್ಲಿ ಬಸವ ಸಂಸ್ಮರಣಾ ಸಪ್ತಾಹವನ್ನು ವಿಶ್ವಕಲ್ಯಾಣ ಮಿಷನ್ ಬೆಂಗಳೂರಿನ ರಾಜಾಜಿನಗರದ ಬಸವ ಮಂಟಪದಲ್ಲಿ ಏರ್ಪಡಿಸಿದೆ.

ಶ್ರಾವಣ ಶುದ್ಧ ಪ್ರತಿಪದೆ ದಿ. 16-8-2004 ರಿಂದ ಪ್ರತಿದಿವಸ ಬೆಳಿಗ್ಗೆ 8 ರಿಂದ ಬಸವೇಶ್ವರ ಪೂಜಾವ್ರತ. ಪೂಜೆ ಮಾಡುವವರು ಮತ್ತು ಮಾಡಿಸುವವರು ಸಂಪರ್ಕಿಸಬಹುದು.

2. ಬಸವ ಪಂಚಮಿಯು ಶುಕ್ರ (ಮಾತೃ)ವಾರ ದಿ. **20-8-2004** ರಂದು ಒದಗಿ ಬಂದಿದ್ದು ಅಂದು **ಬೆಳಿಗ್ಗೆ 10-30 ಗಂಟೆಗೆ** ಬೆಂಗಳೂರಿನ ಸಿಟಿ ಮಾರ್ಕೆಟ್ ಸಮೀಪವಿರುವ (ಯೂನಿಟಿ ಬಿಲ್ಡಿಂಗ್ ಪಕ್ಕದಲ್ಲಿ) **ಸರ್. ಪುಟ್ಟಣ್ಣ ಶೆಟ್ಟಿ ಟೌನ್ ಹಾಲ್**‌ದಲ್ಲಿ ವಿಶೇಷ ಪ್ರವಚನ ಮತ್ತು **ವಚನಾಭಿನಯ ನೃತ್ಯ** ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳಿವೆ.

3. ನೀಲಮ್ಮ ಷಷ್ಠಿಯು ಶನಿ(ಶರಣ)ವಾರ ದಿ. 21-8-2004 ರಂದು ಒದಗಿ ಬಂದಿದ್ದು ಬೆಳಿಗ್ಗೆ 10-30 ರಿಂದ ಸಾಮೂಹಿಕ ಇಷ್ಟಲಿಂಗಾರ್ಚನಾ ಕಾರ್ಯಕ್ರಮವಿದೆ. ಇಷ್ಟಲಿಂಗ ಪೂಜಾ ಸಾಮಗ್ರಿಗಳೊಡನೆ ಬಂದು ಶರಣರು ತಾವೂ ಪೂಜೆಯಲ್ಲಿ ಭಾಗವಹಿಸಬೇಕು.

4. ಬಸವ ಲಿಂಗೈಕ್ಯ ಸಂಸ್ಮರಣೆಯ ಸಪ್ತಾಹದ ಮುಕ್ತಾಯವು ಭಾನು(ದೇವ)ವಾರ ದಿ. 22-8-2004 ಬೆಳಗ್ಗೆ10-30 ರಿಂದ ಶರಣ ಸಂಗಮ-ಸಾಮೂಹಿಕ ಪ್ರಾರ್ಥನೆಯೊಡನೆ ನಡೆಯಲಿದೆ.

ಪ್ರತಿಪದೆಯಿಂದ ಬಸವ ಪಂಚಮಿಯವರೆಗೆ ನಡೆಯುವ ಬಸವ ಪೂಜಾವ್ರತದ ಬಳಿಕ ಭಾಗಿಗಳಾದವರಿಗೆ ಉಪಾಹಾರದ ವ್ಯವಸ್ಥೆ ಇರುತ್ತದೆ. ದಿ. 20, 21, 22 ರ ಮಧ್ಯಾಹ್ನದ ಕಾರ್ಯಕ್ರಮದ ಬಳಿಕ ಗಣ ಪ್ರಸಾದ (ಊಟ) ದಾಸೋಹವಿರುತ್ತದೆ.

1. ಕಾರ್ಯಕ್ರಮದ ವ್ಯವಸ್ಥೆ ಮತ್ತು ಪ್ರಸಾದ ದಾಸೋಹದ ಸಲುವಾಗಿ ಉದಾರವಾಗಿ ಧನ ಸಹಾಯವನ್ನು ಮಾಡಬೇಕೆಂದು ಕೋರುತ್ತೇವೆ.

2. ಹೆಚ್ಚಿನ ಸಂಖ್ಯೆಯಲ್ಲಿ ಪಂಚಮಿಯವರೆಗಿನ ಬಸವೇಶ್ವರ ಪೂಜಾವ್ರತದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ.

3. ಪೋಸ್ಟೇಜ್ ವೆಚ್ಚ ವಿಪರೀತ ಏರಿರುವುದರಿಂದ ಪ್ರತ್ಯೇಕವಾಗಿ ಆಹ್ವಾನಪತ್ರ ಕಳಿಸುವುದಿಲ್ಲ. ಬೆಂಗಳೂರು ನಗರದ ವಿವಿಧ ಬಡಾವಣೆ, ಸಮೀಪದ ಊರುಗಳಲ್ಲಿ ಪ್ರವಚನ ಕೇಳಿರುವವರು ಮತ್ತು ಕಲ್ಯಾಣ ಕಿರಣದ ಓದುಗರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಕಾರ್ಯಕ್ರಮಗಳಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ.

ವ್ಯವಸ್ಥಾಪಕರು : **ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ**, ದೂ :23325335/23322790

ಬಸವ (ವರ್ಣಮಾಲಾ) ನಮನ

ಅಗ್ರ ಪುರುಷ, ಶರಣ ಶ್ರೇಷ್ಠ, ಧರ್ಮಪೀಯೂಷ ಬಸವೇಶ
ಆದಿಯ ಲಿಂಗ ನಿನ್ನಿಂದ ಎನಗಾಯಿತು ಪ್ರಾಣಲಿಂಗೇಶ ಬಸವೇಶ
ಇವ ನಮ್ಮವನೆಂದು ಸರ್ವರನು ಆದರಿಸಿದ ಯುಗಪುರುಷ ಬಸವೇಶ
ಈಶನ ಮೀಸಲಿಪ್ಪ ಭಕ್ತ, ನಿನ್ನ ದೆಸೆಯಿಂದೆಮ್ಮ ಭಕ್ತಿ ಬಣ್ಣವೇರಿತು ಮಂತ್ರ-ಪುರುಷ ಬಸವೇಶ
ಉತ್ತಮವೆಂದ ವೇದಶಾಸ್ತ್ರ ಪುರಾಣಗಳ ಒರೆಗೆ ಇಟ್ಟ ವಚನಕಾರ ಬಸವೇಶ
ಊನವಿಲ್ಲದಮಲ ಕರುಣೆ ಪೂರೈಸೊ ದೃಷ್ಟಿಪುರುಷ ಬಸವೇಶ
ಋಷಿಜನ ಜಂಗಮವ ಸ್ತುತಿಸಿ, ಆದರಿಸಿದ ಮತ್ರಾಣೇಶ ಬಸವೇಶ
ಎಲ್ಲರಿಗೂ ಅರುಹಿದೆ, ಎಲ್ಲರೊಳು ದೇವನಿರುವ ನಿಜವ ಕಲ್ಯಾಣೇಶ ಬಸವೇಶ
ಏಕೋ ಗುರು ನಾದ್ವಿತೀಯ ವಿಶ್ವವಿಭೂತಿ, ಸುಜ್ಞಾನಿ ನೀ ಅಮರಾತ್ಮ ಬಸವೇಶ
ಐಕ್ಯಸ್ಥಲವನರುಹಿ, ಧಾರುಣಿಯ ಸಲಹಲಿಕ್ಕೆ ಭಕ್ತನಾದೆ ಭವನಾಶ ಬಸವೇಶ
ಒಲವ ತೋರಿ ಸಕಲ ಜೀವಾತ್ಮರಿಗೆ ಲೇಸನೇ ಬಯಸಿದ ಕರುಣೇಶ ಬಸವೇಶ
ಓಂಕಾರ ನಾದ ಬಿಂದು ಕಳಾತೀತವನರುಹಿದ ಯೋಗೀಶ ಬಸವೇಶ
ಔದಾರ್ಯದ ಹೃದಯದಿಂ ದಾಸೋಹ ಗೈದ ಸತ್ಪುರುಷ ಬಸವೇಶ
ಅಂತರ್ಯಾಮಿ ಲಿಂಗಯ್ಯನ ಅಂಗಯ್ಯಲಿಟ್ಟು ಪೂಜಿಸಿದ ಜಂಗಮಪ್ರಾಣೇಶ ಬಸವೇಶ
ಅಃಬಸವಣ್ಣ ನಿನ್ನ ಬಣ್ಣಿಸಲಸದಳವು ಮುಕ್ತಿದಾಯಕ ಮಹಂತೇಶ ಬಸವೇಶ.

- ಕುಸುಮ ಗಿ. ತೋಂಟದಾರ್ಯ
ತುಮಕೂರು



3. ಬೆಸಗರ ಹಳ್ಳಿಯಲ್ಲಿ ನಡೆದ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳ ಪ್ರವಚನ ಮುಕ್ತಾಯ ಸಮಾರಂಭ



4. ಸಂಕೇಶ್ವರದಲ್ಲಿ ವಿಶ್ವಧರ್ಮ ಪ್ರವಚನ ಧ್ವಜಾರೋಹಣ ಶರಣ. ಮಲಗೌಡ ಪಾಟೀಲ, ಉದ್ಘಾಟನೆ ಶರಣ. ಕಾಡಪ್ಪ ಮಗದುಮ್ಮ, ಸಾನಿಧ್ಯ ಶರಣ. ಡಾ|| ಫಕೀರಪ್ಪ ಕಾಡಣ್ಣನವರ ಹಾಗೂ ಡಾ|| ಶಿ. ಬಾ. ಪಾಟೀಲ

ಬಸವ ಧರ್ಮ ಪೀಠದ ಯೋಜನೆಗಳಿಗೆ ಧನ ದಾಸೋಹ ಮಾಡಿದ ಶರಣ ಬಂಧುಗಳು

ಕಟ್ಟಡ ನಿಧಿಗಾಗಿ: ಶರಣರುಗಳಾದ:

ಗುರುಪಾದಪ್ಪ ದುಂಡಪ್ಪ ಜಕಾತಿ, ಗೋಕಾಕ 71,000-00
ಚೆನ್ನಯ್ಯ, ಚಿತ್ರದುರ್ಗ 61,000-00
ಚಂದ್ರಮ್ಮ ಅಣ್ಣೆಪ್ಪ ಪಾಟೀಲ, ಬೀದರ್ 61,000-00
ಪಿ. ಚಿನ್ನಸ್ವಾಮಿ ಕುಟುಂಬ, ಮೈಸೂರು 51,000-00
ಬಸವರಾಜ ಪಡದಯ್ಯ ಕರ್ಜಗಿ ಮಠ, ಗೋಕಾಕ್ 51,000-00
ಪಾರ್ವತಮ್ಮ, ಚಿತ್ರದುರ್ಗ 51,000-00
ಕೆ. ಬಸವರಾಜ್, ಬೆಳಗಾಂ 51,000-00
ಸೋಮಶೇಖರ ಮಹಾಗಂವ, ಗುಲ್ಬರ್ಗ 21,000-00
ಬಿ.ಎಸ್. ಶಿವರಾಜ್, ವೈಟ್ ಫೀಲ್ಡ್ 11,111-00
ಎಂ.ಸಿ. ಅಂಗಡಿ 5,000-00
ಪಾರ್ವತಿ ಶಿವಪ್ಪ ಬೆಟಗೇರಿ, ಬೆಳಗಾಂ 2,000-00
ಕಾಂತರಾಜ್ ಜೆ.ಎಂ. 1,001-00
ರಮೇಶ್ ಎಂ. ಕಳಸಣ್ಣವರ, ಬೆಳಗಾಂ 1,001-00

ಬಸವ ಕಲ್ಯಾಣದಲ್ಲಿ 63 ಅಡಿ ಬಸವ ಮೂರ್ತಿಗಾಗಿ

ರೂಪಕಾ ಮಹಾಲಿಂಗಯ್ಯ, ಯು.ಎಸ್.ಎ 2,00,000-00
ಸಿ. ಬಿ. ಬೇವನೂರು, ಭೀಮರಾಯನ ಗುಡಿ 1,00,000-00
ಲೀಲಾವತಿ ನಾಡಗೌಡರ, ಬೆಂಗಳೂರು 1,00,000-00
ಸರಳಾ ರವೀಂದ್ರಕುಮಾರ, ಪ್ರಶಾಂತನಗರ, 25,000-00
ಎಂ.ಜೆ. ಪಾಟೀಲ, ಬೆಳಗಾಂ 11,111-00
ಚಂದ್ರಕಾಂತ ಗುರುಲಿಂಗಪ್ಪ ಕೊಳಕಿ, -"-
ಜಿ. ಆರ್. ಪಾಟೀಲ್, ಬೆಳಗಾಂ, -"-
ಬಸವರಾಜ ಗೂ. ಸೂಳಿಬಾವಿ, ಬೆಳಗಾಂ, -"-
ಮಹಾದೇವಿ ಬಸವರಾಜ, ಬೆಳಗಾಂ, -"-
ಗಂಗವ್ವ ಶಿವಲಿಂಗಯ್ಯ ಪೂಜಾರಿ, -"-
ವಿದ್ಯಾ ಶಿವಪುರೆ (ಜಾಗನೂರೆ), -"-
ಪ್ರಮೋದ ಬಸವರಾಜ್ ಪೂಜಾರಿ, -"-
ಶಿವಲೀಲಾ ಬಸವರಾಜ ದ್ವಾರಣ್ಣನವರ, -"-
ಸುನಂದಾ ಡಾ|| ಅಡಿವೆಪ್ಪ, ಬೆಳಗಾಂ, -"-
ಶಂಕರ ಜಿ. ಚಿತ್ಕಳಾ, ವಿಜಯನಗರ, -"-
ಪ್ರಮೀಳಾ ಸಿ. ವಿಶ್ವೇಶ್ವರಯ್ಯಾ, -"-
ಬಸವರಾಜ ಹನುಮಪ್ಪ ಶ್ಯಾಲಿ, ಬಸವನಗರ -"-
ಎಂ. ಜೆ. ಪಾಟೀಲ, ಬೆಳಗಾಂ -"-
ಎ. ಎ. ಬೆನ್ನೂರ, ಕಾಡಗುಡಿ -"-
ಪ್ರೇಮಲತಾ ಬಸವರಾಜಯ್ಯ, ವಿನಾಯಕ ಲೇಔಟ್ -"-
ಉಷಾದೇವಿ, ಗುಲ್ಬರ್ಗಾ 6,000-00
ಎಂ. ವಿ. ಕೋರಿ, ಬೆಳಗಾಂ 5,011-00
ಬಿ. ಜಿ. ತುರಮರಿ, ಬೆಳಗಾಂ 5,001-00
ಬಾಬುರಾವ್ ಕುರುಣೆ, ಬೆಳಗಾಂ 5,000-00
ಎ. ಎ. ಬೆನ್ನೂರ, ಕಾಡಗುಡಿ -"-
ಎನ್.ಬಿ. ಶಿವಕುಮಾರ್, ವಿಜಯನಗರ -"-
ಪಾರ್ವತಿ ಯಮಕನ ಮರಡಿ, ಬೆಳಗಾಂ 2,101-00
ಟಿ.ಕೆ. ರಾಜಮ್ಮ ಕೆಂಡಪ್ಪ, ವಿಜಯನಗರ 1,101-00
ಬಸವಣ್ಣೆಪ್ಪ ಡಿ. ಇಟಗಿ, ಬೆಳಗಾಂ -"-
ಮೂಡಲಯ್ಯ, ಬೆಂಗಳೂರು 1,001-00

ಪುಸ್ತಕ ಪ್ರಕಟಣೆಗಾಗಿ ಶರಣರುಗಳಾದ:

ರತ್ನಮ್ಮ ಬಸವರಾಜಪ್ಪ, ಚನ್ನಸಂದ್ರ 5001-00
ಎಚ್.ಎಚ್. ಮರಿಯಣ್ಣ, ಕಾಮಾಕ್ಷಿಪಾಳ್ಯ -"-
ವೈ.ಕೆ. ಚಿಕ್ಕಹೊನ್ನಯ್ಯ, ಕಾಮಾಕ್ಷಿಪಾಳ್ಯ -"-
ಡಿ. ಕೃಷ್ಣಪ್ಪ, ಗೋವಿಂದರಾಜ ನಗರ 5000-00
ಗೌರಮ್ಮ ಮತ್ತು ಮಕ್ಕಳು, ಚನ್ನಸಂದ್ರ 5000-00

ಕೂಡಲಸಂಗಮ ದಾಸೋಹ ನಿಧಿಗಾಗಿ ರೂ. 5001-00 (ಮತ್ತು ಮೇಲ್ಪಟ್ಟು) ಪುದುವಟ್ಟು ಇಟ್ಟ ಶರಣ ಬಂಧುಗಳು:

ರುದ್ರಾಣಮ್ಮ ಸಿದ್ದಲಿಂಗಯ್ಯ, ತುಮಕೂರು 25,000-00
ಬಿ. ಮಲ್ಲಿಕಾರ್ಜುನಯ್ಯಾ ಮತ್ತು ಸಹೋದರರು 5,001-00
ನೀಲಕಂಠಯ್ಯ, ವೈಟ್ ಫೀಲ್ಡ್ "
ರೂಪಾಯೋಗೀಶ್, ಸಿದ್ಧಾರ್ಥನಗರ "
ಅಗ್ರಾಣ್ಣಪ್ಪ ಸಿದ್ಧಲಿಂಗಪ್ಪ ಬಾವಲತ್ತಿ, ಬನಹಟ್ಟಿ "
ಸಿ. ಎನ್. ಯಶವಂತ, ಚನ್ನಸಂದ್ರ "
ಸುಧಾ ಗುರುಪ್ರಸಾದ, ಮಹಾಲಕ್ಷ್ಮಿಪುರಂ "
ಮಲ್ಲಿಕಾರ್ಜುನ ಹನಗಂಡಿ, ಬೆಳಗಾಂ "

ರೇಣುಕಾ ಮಂಜುನಾಥ ಶೆಟ್ಟಿ, ಬೆಂ., "
ಎನ್. ಸಿ. ವೀರಭದ್ರಪ್ಪ, ಸುಬ್ರಹ್ಮಣ್ಯಗಾರ್ಡನ್ "
ಗಂಗಮ್ಮ ಗುಂಡಶೆಟ್ಟಿ " "
ವಸಂತಿ ಸುಬ್ಬನಾಯ್ಕ, " "
ಪಾರ್ವತಮ್ಮ ಧೂಳಪ್ಪ, " "
ಮಮತಾ ಶ್ರೀಕಂಠಸ್ವಾಮಿ, " "
ಪ್ರೇಮಾದೇವಿ ಶಿವಶಂಕರ, ವಿಜಯನಗರ "
ಜಗದೀಶ್ ಕೆ. ವಿ. ರುದ್ರಪ್ಪ 5,000-00
ಪದ್ಮಾ ತ್ರಿನೇತ್ರೇಶ್ವರ, ಬೆಂಗಳೂರು "
ಜಯಮ್ಮ, ಬೆಂಗಳೂರು "
ಮಲ್ಲಿಕಾರ್ಜುನ, ದುಬಲಗುಂಡಿ "
ಮಲ್ಲಿಕಾರ್ಜುನ, ದುಬಲಗುಂಡಿ "
ಎನ್. ಶಾರದಮ್ಮ, ವಿಜಯನಗರ "
ಶ್ರೀದೇವಿ ತಂದೆ ಸಿ. ವೀರಭದ್ರಪ್ಪ, ಬೆಂ., 1001-00

ಬಸವ ಕಲ್ಯಾಣದ ದಾಸೋಹ ನಿಧಿಗಾಗಿ ರೂ. 5001-00 (ಮತ್ತು ಮೇಲ್ಪಟ್ಟು) ಪುದುವಟ್ಟು ಇಟ್ಟ ಶರಣ ಬಂಧುಗಳು:

ಶರಣರುಗಳಾದ :

ಎಸ್. ಅಂಬುಜಾಕ್ಷಮ್ಮ, ಶಿವಮೊಗ್ಗ 5,000-00
ಗೀತಾ ಜಗನ್ನಾಥ್, ನಾಗರಾಳು 1,500-00
ಮಧುಕರ್ ರಾವ್ ಶೆಟಕಾರ್, ನಾರಾಯಣ ಖೇಡ್ 1,001-00

ಬಸವ ಕಲ್ಯಾಣ (1,201-00) ಮತ್ತು ಕೂಡಲ ಸಂಗಮ (1,101-00) ನಿತ್ಯ ದಾಸೋಹ ನಿಧಿಗಾಗಿ ಕಾಣಿಕೆ ನೀಡಿದವರು,

<u>ಬಸವ ಕಲ್ಯಾಣ (1,201-00)</u>

ಶರಣರುಗಳಾದ :

ಸಿ. ಬೋರಯ್ಯ, ಬೆಂಗಳೂರು 1,2001-00
ಲೀಲಾವತಿ ಸತ್ಯನಾರಾಯಣ, ಶಿವಮೊಗ್ಗ
ಎಂ.ಸಿ. ಅಂಗಡಿ, ಬೆಳಗಾಂ
ಪಿ.ಬಿ. ಹಂಜಿ, "
ಮೋಹನ್ ಮುರಗೆಪ್ಪ ಅಂಗಡಿ, "
ದಯಾನಂದ ಎಸ್. ಮಾಳಗೆ, "
ಸುಜಾತ ಬಾಪಣ್ಣ ಪಾಟೀಲ, "
ಬಸವಾಣಿ ಸಿದ್ದಪ್ಪ ಕುಂಬಾರ, "
ಬಸವರಾಜ ಶಿಪ್ಪಣ್ಣ ವರ್ಜಣ್ಣವರ, "
ಶಾಂತಾ ಎಸ್. ಗಿಡ್ನವರ, "
ಎಸ್.ಎಂ. ಶಹಾಪುರ ಮಠ, "
ಶಾಂತ ತಂದೆ ಚನ್ನಬಸಪ್ಪ, "
ಮಧುಕರ ಬಾಪುಸಾಹೇಬ ಕಾಕಡೆ, "
ಹನುಮಂತ ಶಿಪ್ಪಣ್ಣ ವಾಲಿಕರ, "
ಶೋಭಾ ಸದಾನಂದ ಮರಕಟ್ಟಿ, "
ಶೋಭಾ ನಿಜಗೌಡ ಪಾಟೀಲ, "
ಡಾ|| ಶ್ರೀಶೈಲ ಮಹಾದೇವಪ್ಪ ಮುರುಗೋಡ, "
ರಮೇಶಗೌಡ ಕೇದಾರಗೌಡ ಪಾಟೀಲ, "
ವಿರುಪಾಕ್ಷಪ್ಪ ಯಡ್ರಾಮಿ, "
ಸಂಗಪ್ಪ ನೂರಂದಪ್ಪ ಪಲ್ಲೇದ, "
ಆನಂದ ಮಾಧುರಿ ಕಾಪ್ಸೆ, "
ಮಹಂತೇಶ ರಾಮಪ್ಪ ಬಾಗೇವಾಡಿ, "
ಸುನಂದ ಗುರಪ್ಪ ಮಾಳಗಿ, "
ಗಿರಿಯಪ್ಪ ಶಿ. ಇಟಗಿ, "
[illegible]ಯ್ಯ, ಬೆಂಗಳೂರು
ತಿರುಮಲ್ಲಯ್ಯ ಕೃಷ್ಣವೇಣಿ, "
ಶಿವಕುಮಾರ ಪಿ., ಎಂ.ಸಿ. ಲೇಔಟ್
ಕೊಟ್ರೂರಪ್ಪ "
ಪ್ರಫುಲ್ ಮುದಲಗಿ, "
ಜಯಕೃಷ್ಣ, "
ರಾಮಚಂದ್ರ, "
ಎಂ. ಮೈಲಾರ, "
ವಿ.ಟಿ. ಭವಾನಿ, "
ಎಂ.ಎಲ್. ಕಮಲಾ ವೆಂಕಟಾಚಲಯ್ಯ, "
ವನಜಾ ಲಿಂಗದೇವರು, "
ಸಿ.ಎಸ್. ಸಿದ್ದಲಿಂಗಯ್ಯ, "
ಸುಜಾತ ಡಿ.ಎಸ್. ಪಾಟೀಲ್, "
ಶಿವಮ್ಮ ಕೆ.ಬಿ. ರುದ್ರಪ್ಪ "
ಸಿ.ಕೆ. ಗಂಗಾಧರಯ್ಯ, ಗೋವಿಂದರಾಜನಗರ
ಗಂಗಾಧರಯ್ಯ, "
ಬಸವ ಪ್ರಭುಲಿಂಗ ಮಹಾರುದ್ರಪ್ಪ ಪಟ್ಟಣಶೆಟ್ಟಿ ಚೊಳಚಗುಡ್ಡ
ಸುಧಾ ಸೋಮಶೇಖರ, ಅಗ್ರಹಾರ ದಾಸರಹಳ್ಳಿ
ಬಿ.ಎಲ್. ಶಿವಣ್ಣ "
ಗಂಗಮ್ಮ ಮುದ್ದಯ್ಯ, ಬೆಂ.,

ಮುರಳಿ ದೇಸಾಯಿ, ಮಾರನಹಳ್ಳಿ
ಸಿ. ಶಿವಸ್ವಾಮಿ, ಎ.ಡಿ. ಪಕ್ಷ
ಜಿ.ಎಸ್. ಚನ್ನಬಸಪ್ಪ ವೈಟ್ ಫೀಲ್ಡ್
ಕೆ.ಎನ್. ನಾಗರಾಜು, ''
ಗಂಗಾಧರ, ವಿನಾಯಕ ನಗರ
ಕೆ. ಎಲ್. ಚಂದ್ರಶೇಖರ, ''
ಜೆ. ನಂಜುಂಡಪ್ಪ ''
ಎಚ್.ಎನ್. ಶ್ರೀನಿವಾಸ, ''
ಪಿ.ಟಿ. ಅಪ್ಪಾಜಿ ಗೌಡ, ''
ಟಿ. ಎಂ. ದೇವರಾಜ, ''
ಆರ್. ಶ್ರೀನಿವಾಸ, ''
ಬಸವರಾಜ, ''
ಚನ್ನಬಸಪ್ಪ, ''
ಕಲ್ಯಾಣಮ್ಮ ಶ್ರೀಕಂಠಕುಮಾರ್, ಬಸವ ಗಂಗೋತ್ರಿ
ಕೆ. ಆರ್. ನಾಗೇಂದ್ರಪ್ಪ, ಪಿರಿಯಾ ಪಟ್ಟಣ
ಕೆ.ಆರ್. ಚನ್ನಬಸವಣ್ಣ, ''
ಪಿ. ಎಸ್. ಲಿಂಗರಾಜಪ್ಪ, ಆವತಿನ ಗ್ರಾಮ
ಈರಪ್ಪ ಶಿವಬಸಪ್ಪ ಸೂಬರದ, ನರಸಾಪುರ
ಶಿವಾನಂದ ಪ್ರಕಾಶ, ಸಂಕೇಶ್ವರ
ಡಾ॥ ಮುತ್ತಣ್ಣ ಶಂಕ್ರಪ್ಪ ಬಾವಲತ್ತಿ, ಗೋಕಾಕ್
ಮಹಾರುದ್ರಗೌಡ ವೀರನಗೌಡ ಪಾಟೀಲ, ''
ಬಸವರಾಜ ಪಡದಯ್ಯ, ಕರ್ಜಗಿ ಮಠ, ''
ಬಸಪ್ಪ ಜಯದೇವ, ಜೆ.ಪಿ. ನಗರ
ಪಿ. ಶಿವಪ್ಪ ಚನ್ನಸಂದ್ರ
ರತ್ನಮ್ಮ ಗಿರಿರಾಜ ಗೌಡ, ''
ಬಿ. ಜಂಬುಕೇಶ್ವರ ಆರಾಧ್ಯ, ''
ಸಂಗಪ್ಪ ಹನುಮಂತಪ್ಪ ಸಮಗಾರ, ಮೆಹಬೂಬ ನಗರ
ನಟರಾಜ ಟಿ., ಬೆಂಗೂರು
ರುಕ್ಮಿಣಮ್ಮ, ''
ಲಕ್ಷ್ಮಣ ದತ್ತಾತ್ರೇಯ, ಆರ್.ಪಿ.ಸಿ. ಲೇಔಟ್
ಸತೀಶ್, ಬಸವೇಶ್ವರ ನಗರ
ಶೋಭಾ ಚಂದ್ರಶೇಖರ್, ''
ಮಹೇಶ್, ''
ಸುಶೀಲಮ್ಮ ರಂಗಸ್ವಾಮಿ, ''
ವನಿತಾ ಶ್ರೀಕಂಠಶೆಟ್ಟಿ ''
ಸುಜಾತ ಶಿವಶಂಕರ, ಮಂಜುನಾಥ ನಗರ
ಸುನೀತಾ ರವಿ, ''

ನಾಗರತ್ನ ವೆಂಕಟೇಶ್, ''
ಸಿದ್ದಲಿಂಗಮ್ಮ ''
ಭದ್ರಮ್ಮ ಮರಿಮಾದಪ್ಪ ''
ಮಂಜುಳಾ ರುದ್ರಮುನಿ, ಕೆಂಪೇಗೌಡ ಲೇಔಟ್
ಪುಷ್ಪಲತಾ ಶಿವಣ್ಣ, ಸುಬ್ಬಣ್ಣ ಗಾರ್ಡನ್
ಕೆ. ರಾಜಶೇಖರ್, ''
ಪ್ರೇಮಾ ಗಂಗಾಧರ, ''
ಪಾರ್ವತಮ್ಮ ತಿಮ್ಮಯ್ಯ, ''
ಶಶಿಕಲಾ ಸಿದ್ದೇಶ್, ''
ಮಹದೇವಮ್ಮ ಚಂ. ಗುಡ್ಡದ, ''
ಕೆ. ರಾಜಶೇಖರ, ''
ಉಮಾ ಬಸವರಾಜ, ''
ಸುಧಾ ವಸಂತಕುಮಾರ, ''
ಚಂದ್ರಪ್ಪ ನಾಗರತ್ನ, ವಿಜಯ ನಗರ
ಲೀಲಾ ವಿಜಯಕುಮಾರ, ''
ಉಮಾ ಸರ್ವೇಶ್, ''
ಪಿ. ಬಾಲರಾಮಯ್ಯ, ''
ಶೋಭಾ ಮಹಾದೇವ ಚಿಕ್ಕೋಡಿ, ''
ಸುಶೀಲಾ, ''
ಚೂಡಾಮಣಿ, ''
ಕೆ. ಎಸ್. ಹನುಮಂತಪ್ಪ, ಚಂದ್ರಕಲಾ, ''
ಗೌರಮ್ಮ ಗುರುಮೂರ್ತಿ, ''
ಶ್ರೀದೇವಿ ಬಸವರಾಜ, ಕಲ್ಯಾಣ ನಗರ
ಬಿ.ಕೆ. ಇಂದ್ರಮ್ಮ, ಬೆಸಗರಹಳ್ಳಿ
ರತ್ನಮ್ಮ ಶಂಕ್ರಪ್ಪ, ಚಂದ್ರಲೇಔಟ್
ಬಿ. ಆರ್. ಹರ್ಷ, ಚಾಮರಾಜ ನಗರ
ರುಕ್ಮಿಣಿ ಎಂ. ಲಕ್ಕಪ್ಪ, ಸಂಜೀವಿನಿ ನಗರ
ನಾಗರತ್ನಮ್ಮ ಆರ್. ಅನ್ನದಾನಿ ಗೌಡ, ''
ಬಿ. ಶ್ರೀನಿವಾಸ ನಾಯಕ, ''
ಶಶಿಕಲಾ ಚಂದ್ರಶೇಖರ, ಮೂಡಲ ಪಾಳ್ಯ
ನಂದಿನಿ ರಾಜೇಶ್, ''
ವನಜಾ ಸುರೇಶ್, ಪಟ್ಟೇಗಾರ ಪಾಳ್ಯ
ಮಂಜುಳಾ ಮೋಹನ ಕುಮಾರ್, ಭುವನೇಶ್ವರಿ ನಗರ

ಕೂಡಲ ಸಂಗಮ(1,101-00)

ಶರಣರುಗಳಾದ :

ಎಂ. ಕೆ. ಪ್ರಭುದೇವ, ಬೆಳಗಾಂ 1,111-00

ನೀಲವ್ವ ಮಲ್ಲಪ್ಪ ಹೊಸಮನಿ, ''
ಶಿವಲಿಂಗಪ್ಪ ಬಸವಣ್ಣೆಪ್ಪ ಕೊಡೊಳ್ಳಿ, ''
ಶ್ರೀಶೈಲ ಚನ್ನವೀರಪ್ಪ ಉಪ್ಪಿನ್, ''
ಎಸ್. ಪಿ. ಹಿರೇಮಠ, ''
ಮಹಂತೇಶ್ ಬಸವಣ್ಣೆಪ್ಪ ಕೊಡೊಳ್ಳಿ, ''
ದುಂಡೇಶ ಬಸವಣ್ಣೆಪ್ಪ ಹೊಸಮನಿ, ''
ಚನ್ನಬಸಪ್ಪ ಸಂಗನಬಸಪ್ಪ ಒಳಸಂಗ, ''
ಜಗದೀಶ್ ಶಿವಪ್ಪ ಹೊಂಡದಗಟ್ಟಿ, ''
ಬಸವರಾಜ್ ವೀರಪ್ಪ ಹೊಂಡದಗಟ್ಟಿ, ''
ರಾಜಶೇಖರ ಬಾಳವ್ವ ಹೊಸಮನಿ, ''
ರುಕ್ಷಿಣಿ ಸಿ.ಪಿ. ಚಂದ್ರಶೇಖರ್, ''
ಮಲ್ಲಿಕಾರ್ಜುನಯ್ಯ ನಂಜಯ್ಯ, ''
ಡಿ. ಆರ್. ಪಾಟೀಲ್, ''
ಮಲಪ್ರಭಾ (ನೀಲಗಂಗಾ), ''
ಸವಿತಾ ಲಿಂ॥ ಚಂದ್ರಕಾಂತ ಬಾಗೇವಾಡಿ, ''
ಆರ್, ಮಂಜುನಾಥ್, ಚಿತ್ರದುರ್ಗ
ಎಲ್. ಲಿಂಗರಾಜು, ಮೈಸೂರು
ಕೆ. ಆರ್. ಸಚ್ಚಿನ್ ತಂದೆ ಬಿ. ಎನ್. ವಿಜಯ, ''
ಲಕ್ಷ್ಮಿ ಮಲ್ಲಿಕಾರ್ಜುನ ಮನ್ನಳ್ಳಿ, ಬೀದರ
ಜಯಶ್ರೀ ಸುರೇಂದ್ರ ಪಾಟೀಲ, ''
ಶಂಕರಪ್ಪ ಲಾಳಪ್ಪ ದೂಂಡಪ್ಪನವರ, ''
ಕಲ್ಲಮ್ಮ ಪೋಲೀಸ್ ಪಾಟೀಲ್, ಧಾರವಾಡ
ಕೆ. ವೆಂಕಟೇಶ್ವರುಲು, ಆಂಧ್ರ ಪ್ರದೇಶ
ಕೆ. ಮಹಾದೇವಮ್ಮ ಶಂಕರಪ್ಪ, ಬಳ್ಳಾರಿ
ರುಕ್ಕಪ್ಪಾ ಬ್ಯಾಳಿ, ಬ್ರಹ್ಮಪುರ
ನಾಗಶೆಟ್ಟಿ ಕಬಾಳೆ, ಕೇಸರ ಜವಳಗಾ
ಅರ್ಚನಾ ಅನಿಲ್ ಪರಶಣೆ, ''
ನಿಂಬೆವ್ವ ತುಕಾರಾಂ ಭಜಂತ್ರಿ, ಗುಲಬರ್ಗಾ
ಬಸವರಾಜ, ವೈಟ್ ಫಿಲ್ಡ್
ಚನ್ನವೀರಮ್ಮ, ಹಾರೋಹಳ್ಳಿ
ಆಂಜನೇಯ ರೆಡ್ಡಿ, ಅಗ್ರಹಾರ ಕಾಡಗುಡಿ
ಡಿ. ಆರ್. ಮಹದೇವಪ್ಪ, ಚನ್ನಸಂದ್ರ
ಉಮಾ ಸದಾಶಿವಯ್ಯ, ವಿಜಯ ನಗರ
ಶಿವಪ್ಪ ಗುಳೆನ್ನವರ, ಮೂಡಲ ಪಾಳ್ಯ

ಬಸವ ಕಲ್ಯಾಣ (601-00) ಮತ್ತು ಕೂಡಲ ಸಂಗಮ (501-00) ನಿತ್ಯ ದಾಸೋಹ ನಿಧಿಗಾಗಿ ಕಾಣಿಕೆ ನೀಡಿದವರು,

ಬಸವ ಕಲ್ಯಾಣ (601-00)

ಶರಣರುಗಳಾದ :

ಎಂ. ಜಿ. ಸುಸಲಾದಿ, ಬಿಜಾಪುರ 601-00
ವೀರಬಸಪ್ಪ ಶಿವರಾಯಪ್ಪ ಜರ್ಲಿ, ಗೋಕಾಕ್
ಎಸ್. ಪುಟ್ಟಣ್ಣನವರು
ಜಯಶ್ರೀ ಚೆನ್ನಗೌಡ ಪಾಟೀಲ, ಬೆಳಗಾಂ
ಬಸವಾಂಜಲಿ, ಬಾಗಲಕೋಟೆ
ಬಸವ ಪ್ರಭು ದೊಡ್ಡಮನಿ, ಬೆಳಗಾಂ
ಸೋಮಪ್ಪ ಆ. ಡೊಂಗರಗಾಂವಿ, ''
ಎಸ್. ಸಿ. ಜಿಗಜಿನ್ನಿ, ''
ನಾಗಪ್ಪ ಶಂಕರಪ್ಪ ಗಡಬಡಿ, ''
ಲೀಲಾವತಿ ಭೋಜನ್ನವರ, ''
ಶಂಕ್ರಪ್ಪ ಸಂಗಪ್ಪ ತಿಪ್ಪಾ (ಬಡಗಿ), ಬಾಗಲಕೋಟೆ
ಜಿ. ಪರಶಿವ ಮೂರ್ತಿ, ವಿಜಯನಗರ
ನಾಗರತ್ನ ಕೃಪಾನಂದ, ಗೋವಿಂದರಾಜ ನಗರ
ಸಿ. ಎನ್. ಚಿಕ್ಕಪ್ಪ ರೆಡ್ಡಿ, ಚಿಂತಾಮಣಿ
ಎಸ್. ವಿಜಯ ಕುಮಾರ, ಕಲ್ಯಾಣ ನಗರ
ಶಾಂತಾದೇವಿ ಸೂರ್ಯಕಾಂತ ಬಿರಾದಾರ, ಹಾರೊರಗೇರಿ
ಬಸವ ಕಿರಣ ಸೂರ್ಯಕಾಂತ ಬಿರಾದಾರ, ''
ಗೌರಮ್ಮ ಎಚ್.ಪಿ. ಮುನಿರೆಡ್ಡಿ ವೈಟ್ ಫಿಲ್ಡ್
ಕಲ್ಯಾಣಮ್ಮ ಶ್ರೀಕಂಠಕುಮಾರ್, ಬಸವ ಗಂಗೋತ್ರಿ
ವೀರೇಶ್ ಶ್ರೀಕಂಠಕುಮಾರ್, ''
ಬಿ. ಎಂ. ದಿವ್ಯಾ ಮಹೇಶ್, ಮದ್ದೂರ
ಎಸ್. ಪುಟ್ಟಣ್ಣಯ್ಯ, ಕೆ.ಆರ್. ನಗರ
ಇಂದ್ರ ಪುಟ್ಟಸುಬ್ಬಪ್ಪ, ಬಸವೇಶ್ವರ ನಗರ
ಪುಷ್ಪಾ ರೇವಣ್ಣ ''
ರತ್ನ ಸೋಮಶೇಖರ, ''
ಕೆ. ಅಮೃತೇಶ್ವರಿ ಅಜ್ಜಪ್ಪ ''
ನಾಗರತ್ನ ರೇಣುಕಾ ಪ್ರಸಾದ, ಮಂಜುನಾಥ ನಗರ
ಸುಮಂಗಲಮ್ಮ ಶಿವಣ್ಣ ''
ಸ್ವರ್ಣಾಂಬ ರಾಜಣ್ಣ, ಕುರುಬರಹಳ್ಳಿ
ಸುಂದರಮ್ಮ ಗಂಗಾಚಾರ್, ಮಂಜುನಾಥ ನಗರ
ಸುಬ್ಬಮ್ಮ ಚಿನ್ನಪ್ಪರೆಡ್ಡಿ, ಸುಬ್ಬಣ್ಣ ಗಾರ್ಡನ್
ಎಸ್. ಎಂ. ಸಿದ್ದಯ್ಯ, ಕಲ್ಯಾಣ ನಗರ
ಶಿವಕುಮಾರ, ಸುಬ್ಬಣ್ಣ ಗಾರ್ಡನ್

ಶಿವಾನಂದ ಬಸವಣ್ಣೆಪ್ಪ ರಗಟೆ, ಬಸವ ಕಲ್ಯಾಣ
ಜಿ. ಎಸ್. ಮೃತ್ಯುಂಜಯಪ್ಪ, ವಿಜಯ ನಗರ
ಉಮಾದೇವಿ ಎಚ್. ಮಲ್ಲಯ್ಯ, ''
ಲಕ್ಷ್ಮೀ ಕುಮಾರ ನಾಯ್ಡು ದೇವಕಿನಂದ, ಕುಮಾರ ಗಾರ್ಡನ
ಪ್ರೇಮಾ ಶಿವಮೂರ್ತಿ, ಮಂಜುನಾಥ ನಗರ
ಕೆ. ವಿ. ಸುಬ್ಬರತ್ನ ಶೆಟ್ಟಿ ಭಾರತಮ್ಮ, ಮೂಡಲ ಪಾಳ್ಯ
ಮಹಾದೇವಿ ಮಂಜುನಾಥ, ಸರಸ್ವತಿ ನಗರ

ಕೂಡಲ ಸಂಗಮ (501-00)

ಶರಣರುಗಳಾದ :

ಕಲ್ಲಮ್ಮ ಪೋಲೀಸ್ ಪಾಟೀಲ, ಧಾರವಾಡ
ಎಮ್. ಬಿ. ಸುಸಲಾದಿ, ವಿಜಾಪುರ
ಎಸ್. ಎನ್. ಶಿವಕುಮಾರ, ಚಿಕಮಗಳೂರು
ರಾಷ್ಟ್ರೀಯ ಬಸವ ದಳ, ವಿಜಯಪುರ, ಬೆಂ.ಗ್ರಾ. ಜಿ
ಬಾಬುರಾವ್ ಶಿವಮೂರ್ತೆಪ್ಪ ದಿಬ್ಬಿ
ಮಲ್ಲಿಕಾರ್ಜುನ ಬಸವಲಿಂಗಪ್ಪ, ಬೆಳಗಾಂ
ಎಸ್. ರಾಜೇಶ್ವರಿ, ವಿಜಯ ನಗರ
ಎಚ್. ನಾಗರಾಜಪ್ಪ-ಕಾಮಾಕ್ಷಿ, ಎ.ಡಿ. ಹಳ್ಳಿ
ಶಂಕರ, ಸರಸ್ವತಿ ನಗರ
ಶಿವಕುಮಾರ, ಎ.ಡಿ. ಹಳ್ಳಿ
ಓ. ಎಸ್. ಮಲ್ಲೇಶಯ್ಯ, ವಿಜಯನಗರ
ಎಚ್. ಹನುಮಂತಪ್ಪ, ನಿಟವಳ್ಳಿ
ಸುಭಾಷ ಸರಡಗಿ ಪಾಟೀಲ, ಗುಲಬರ್ಗ
ರಾಜಶೇಖರ ತಾಂಡೂರ, ಬ್ರಹ್ಮಪುರ
ಶಿವರಾಜ ಬಸವಣ್ಣೆಪ್ಪ ಅಂಬಲಗಿ
ವೀರಭದ್ರಪ್ಪ ಮುಗಳಿ, ಗುಲಬರ್ಗ
ಬಸವಂತರಾವ ಪಾಟೀಲ, ಗುಲಬರ್ಗ
ಇಂದ್ರಾಬಾಯಿ, ಬಸವೇಶ್ವರ ನಗರ
ಅಕ್ಕಮಹಾದೇವಿ, ತಿಲಕ್ ನಗರ
ವಿದ್ಯಾವತಿ ಗುರುನಾಥ, ನಿಡಗುಂದೆ
ನೇಮಾವತಿ ಬಸವರಾಜ ಬೆಂಬಳಗಿ, ಹೈದ್ರಾಬಾದ್
ಎಸ್. ಸತ್ಯನಾರಾಯಣ, ವೈಟ್ ಫೀಲ್ಡ್
ಎಡೆಯೂರಪ್ಪ ವೀರಪ್ಪ ಶೆಟ್ಟಿ, ಬೆಟ್ಟದ ಪುರ
ಚಂದ್ರಶೇಖರ ಪಿ. ಎನ್, ಪಿರಿಯಾ ಪಟ್ಟಣ
ಭಾಗ್ಯಮ್ಮ ಕೆ. ಸಿ. ಚಂದ್ರಪ್ಪ, ಶಿರಂಗೂರು
ಹೆಚ್. ವಿಶ್ವನಾಥ, ಕೆ.ಆರ್. ನಗರ
ಮಹಾದೇವ ದೇವೇಂದ್ರ ಬೇವಿನ ಕಟ್ಟೆ, ಸಂಕೇಶ್ವರ
ಕೃಷ್ಣವೇಣಿ ರಾಮಕೃಷ್ಣ, ಮಂಜುನಾಥ ನಗರ
ಶಾಂತಾ ನಾಗೇಂದ್ರಪ್ಪ, ಮೂಡಲ ಪಾಳ್ಯ
ಮಂಜುಳಾ ಪಾಲಾಕ್ಷಯ್ಯ, ಪಟೇಗಾರ ಪಾಳ್ಯ
ಪುಷ್ಪ ಶ್ರೀನಿವಾಸ, ಮೂಡಲ ಪಾಳ್ಯ
ಕೆ. ಕೆ. ಅರ್ಚನ, ವಿಜಯನಗರ
ಶಿವಪ್ಪ ಆರಾಧ್ಯ ಹೊನ್ನಮ್ಮ, ದಾಸರಹಳ್ಳಿ
ರಂಜನಿ ಕೆ., ವಿಜಯನಗರ
ವೆಂಕಟ ಲಕ್ಷ್ಮಮ್ಮ, ಲಕ್ಷ್ಮಯ್ಯ ಲೇಔಟ್
ಪಾರ್ವತಮ್ಮ, ಎಂ.ಸಿ. ಲೇಔಟ್
ಎಂ. ನಂಜುಂಡಯ್ಯ, ದಾಸರಹಳ್ಳಿ
ಎಸ್. ವಿನಯ ಕುಮಾರ, ಕಲ್ಯಾಣ ನಗರ

ಗುರು ಕಾಣಿಕೆ :

ಶರಣರುಗಳಾದ :

ಸಾವಿತ್ರಿ ಪವಾಡಪ್ಪ ಜಾಲಿಹಾಳ, ''	5001-00
ಎಸ್. ಜಿ. ಹೋಳಿಕಟ್ಟಿ, ಬೆಂಗಳೂರು	5000-00
ಜಯಮ್ಮ, ಎಂ.ಸಿ. ಲೇಔಟ್	5000-00
ಕಿರಣ ದನದಮನಿ, ಬೆಂಗಳೂರು	5000-00
ಸುಶೀಲಾ ಲಕ್ಷ್ಮೀಪತಿ, ಬಸವೇಶ್ವರ ನಗರ	3001-00
ಗೌರಮ್ಮ ಮೃತ್ಯುಂಜಯ, ''	2500-00
ರುದ್ರಪ್ಪ ಬ್ಯಾಹಣ್ಣವರ, ಧಾರವಾಡ	2500-00
ಸುಕನ್ಯಾ ಪ್ರಕಾಶ್ ಬೆಟಗೇರಿ, ''	2500-00
ಹೇಮಲತ ಹೇಮರಾಜ್, ವೈಟ್ ಫೀಲ್ಡ್	2001-00
ಲಕ್ಷ್ಮೀ ನಾರಾಯಣ, ಮಂಜುನಾಥ ನಗರ	2000-00
ಎಸ್. ಬಿ. ರಘು, ಚಿಕಮಗಳೂರು	2000-00
ಮಾಯಕ್ಕ ಪುಂಡಲೀಕ, ''	1111-00
ಸುಶೀಲಾ ಮಿಶ್ರಿಕೋಟೆ, ''	1100-00
ಗೌರಮ್ಮ ಈಶ್ವರಪ್ಪ ನೇಸರಿ, ಬೆಳಗಾಂ	1001-00
ಅಪ್ಪಾಸಾಹೇಬ ಬಸಣ್ಣ ಆಲ್ಸೆ, ಮಹಾರಾಷ್ಟ್ರ	1001-00
ರೇವತಿ ಗೌಡಪ್ಪ ಬಿರಾದಾರ	1000-00
ಶಂಕರಶೆಟ್ಟಿ, ಮಂಗಳೂರು	1000-00
ಕಮಲಾ ಶಿವಪ್ಪ ತರಬರ, ಬೆಳಗಾಂ	500-00

(ಮುಂದುವರಿಯುವುದು.......................)

ಈ ಎಲ್ಲ ಧನ ದಾಸೋಹಿಗಳಿಗೆ ಶುಭಹಾರೈಕೆಗಳು

- ಜಗದ್ಗುರು ಮಾತೆ ಮಹಾದೇವಿ

ವಿಸ್ತಾರಗೊಂಡ

ಬಸವ ಗಂಗೋತ್ರಿ ನಗರ ಯೋಜನೆ - 2ನೇ ಹಂತ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನ ವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ "ಕಲ್ಯಾಣ ನಗರ" ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ. ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ

"ಬಸವ ಗಂಗೋತ್ರಿ"ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ "ಆರೋವಿಲ್ಲೆ" ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಶರಣ ಬಂಧುಗಳು, ಬಸವ ತತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, 12ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ವನಿಷ್ಠ ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿ ದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

1. "ಬಸವ ಗಂಗೋತ್ರಿ ನಗರ" 2ನೆಯ ಹಂತದ ಯೋಜನೆಯು ಸಹ ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-40' X 60'-ವಿಸ್ತೀರ್ಣ 2400 ಚ.ಅಡಿಗಳು
ವರ್ಗ 'ಬಿ'-40' X 40'-ವಿಸ್ತೀರ್ಣ 1600 ಚ.ಅಡಿಗಳು
ವರ್ಗ 'ಸಿ'-30' X 40'-ವಿಸ್ತೀರ್ಣ 1200 ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

2. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ

ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. 2000-00 (ಎರಡು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

3. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ 125-00(ಒಂದುನೂರಾ ಇಪ್ಪತ್ತೈದು) ರೂಗಳನ್ನು ಎಂ.ಓ/ ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. 2ನೆಯ ಹಂತದ ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:- ದೂ : **080 - 23325335 / 23322790**

ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು,
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ
2035, 20ನೆಯ ಮೇನ್, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

ಬಸವ ಗಂಗೋತ್ರಿ ವಿಶೇಷ ವಿವರಗಳು

★ ಬೆಂಗಳೂರು-ಮೈಸೂರು ನಗರಗಳ ಚತುಷ್ಪಥ ಹೆದ್ದಾರಿಗೆ ಹೊಂದಿಕೊಂಡಿದೆ.

★ ರಾಜರಾಜೇಶ್ವರಿ ಡೆಂಟಲ್ ಕಾಲೇಜು, ಡಾನ್ ಬಾಸ್ಕೋ ಇಂಜಿನಿಯರಿಂಗ್ ಕಾಲೇಜ್ ಮುಂತಾದ ಸಂಸ್ಥೆಗಳ ಸಮೀಪದಲ್ಲಿದೆ.

★ ಬೆಂಗಳೂರು ನಗರದಿಂದ ಸಾರಿಗೆ ವ್ಯವಸ್ಥೆಯು ಅನುಕೂಲವಿದೆ. ಹೀಗಾಗಿ ನಗರದಲ್ಲಿ ಉದ್ಯೋಗಿಗಳಾಗಿರುವವರಿಗೆ ಹೋಗಿ ಬರಲು ಅನುಕೂಲತೆ ಇದೆ.


★ ಮೊದಲನೆಯ ಹಂತದಲ್ಲಿ ರೂಪಿಸಿದ ನಿವೇಶನಗಳು ಮಾರಾಟವಾಗಿದ್ದು ಜನರ ಬೇಡಿಕೆ ಬಹಳವಾಗಿರುವುದರಿಂದ ಎರಡನೆಯ ಹಂತದ ಯೋಜನೆ ಪ್ರಾರಂಭಿಸಲಾಗಿದೆ.

ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ (ರಿ.)ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ 21 ಕಿ.ಮೀ.ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು 231, 227, 228, 229, 226ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ಪ್ರವೇಶ ದ್ವಾರವಿದೆ.

CPMG/KA/BGW-50/2003-2005
WPP (W) - 17 R. No. 19980/70



ಲಿಂಗಾಂಗಯೋಗದಲ್ಲಿ ತಲ್ಲೀನರಾದ ನೀಲಾಲೋಚನೆ